ಕೃಷಿ ಮತ್ತು ಕೃಷಿ ಸಂಬಂಧಿತ ವಲಯದಲ್ಲಿ ಬೆಳವಣಿಗೆಯನ್ನು ಸುಧಾರಿಸಲು ರಾಷ್ಟ್ರೀಯ ಅಭಿವೃದ್ಧಿ ಪರಿಷತ್ ದಿನಾಂಕ:**29.05.2007**ರಲ್ಲಿ ನಡೆದ ಸಭೆಯಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು ಪ್ರಕಟಿಸಿರುತ್ತದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ **2007-08** ರಿಂದ **2014-15** ರವರೆಗೆ ಶೇ.**100** ರಷ್ಟು ಕೇಂದ್ರ ಸರ್ಕಾರದ ಅನುದಾನವನ್ನು ಬಳಸಿಕೊಂಡು ವಿವಿಧ ಪ್ರಾಯೋಜನೆಗಳನ್ನು ಅನುಷ್ಠಾನಗೊಳಿಸ ಲಾಗಿದೆ.

2007-08 ರಿಂದ **2014-15**ರ ವರೆಗೆ ಶೇ. **100** ರಷ್ಟು ಸಹಾಯಧನ ಕೇಂದ್ರ ಸರ್ಕಾರದಿಂದ ನೀಡಲಾಗಿರುತ್ತದೆ. ಆದರೆ, **2015-16**ನೇ ಸಾಲಿನಿಂದ ಕೇಂದ್ರ ಸರ್ಕಾರವು **60:40 (**ಕೇಂದ್ರದ ಪಾಲು : ರಾಜ್ಯದ ಪಾಲು (ಅನುಪಾತ ನಿಗಧಿಪಡಿಸಿರುತ್ತದೆ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ರಾಜ್ಯಮಟ್ಟದ ಸಮಿತಿಯ ಸದಸ್ಯರುಗಳು

ಕ್ರ.ಸಂ	ಸದಸ್ಯರು	ಹುದ್ದೆ
1	ಮಾನ್ಯ ಮುಖ್ಯ ಕಾರ್ಯದರ್ಶಿಗಳು.	ಅಧ್ಯಕ್ಷರು
2	ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು.	ಉಪಾಧ್ಯಕ್ಷರು
3	ಪ್ರಧಾನ ಕಾರ್ಯದರ್ಶಿಗಳು, ಕೃಷಿ ಮತ್ತು ತೋಟಗಾರಿಕೆ ಇಲಾಖೆ.	ಸದಸ್ಯರು
4	ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.	ಸದಸ್ಯರು
5	ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ.	ಸದಸ್ಯರು
6	ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.	ಸದಸ್ಯರು
7	ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ.	ಸದಸ್ಯರು
8	ಪ್ರಧಾನ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಇಲಾಖೆ.	ಸದಸ್ಯರು
9	ಕಾರ್ಯದರ್ಶಿಗಳು, ತೋಟಗಾರಿಕೆ, ಪಶುಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆ.	ಸದಸ್ಯರು
10	ಕೇಂದ್ರ ಸರ್ಕಾರದ ಪ್ರತಿನಿಧಿಗಳು(ಜಂಟಿ ನಿರ್ದೇಶಕರು), ಕೃಷಿ ಮತ್ತು ಸಹಕಾರ, ಪಶು ಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ, ಕೇಂದ್ರ ಸರ್ಕಾರ.	ಸದಸ್ಯರು
11	ಪ್ರತಿನಿಧಿಗಳು, ಯೋಜನಾ ವಿಭಾಗ, ಕೇಂದ್ರ ಸರ್ಕಾರ.	ಸದಸ್ಯರು
12	ಉಪ ಕುಲಪತಿಗಳು, ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು/ಧಾರವಾಡ.	ಸದಸ್ಯರು
13	ಆಯುಕ್ತರು, ಪಶುಸಂಗೋಪನೆ ಇಲಾಖೆ.	ಸದಸ್ಯರು
14	ಆಯುಕ್ತರು, ಕೃಷಿ ಇಲಾಖೆ.	ಸದಸ್ಯ ಕಾರ್ಯದರ್ಶಿಗಳು
15	ನಿರ್ದೇಶಕರು, ಮೀನುಗಾರಿಕೆ ಇಲಾಖೆ.	ಸದಸ್ಯರು
16	ನಿರ್ದೇಶಕರು, ತೋಟಗಾರಿಕೆ ಇಲಾಖೆ.	ಸದಸ್ಯರು

ರಾಜ್ಯಮಟ್ಟದ ಮಂಜೂರಾತಿ ಸಮಿತಿ ಸಭೆಯ ಉದ್ದೇಶಗಳು:

1. ಈ ಸಮಿತಿಯು ಮಾರ್ಗಸೂಚಿ ಪ್ರಕಾರ ವರ್ಷದಲ್ಲಿ ನಾಲ್ಕು ಬಾರಿ ವಿಷಯ ಸೂಚಿ ಅವಶ್ಯಕತೆಗನುಗುಣವಾಗಿ ಸಭೆ ನಡೆಸುವುದು.
2. ಆರ್.ಕೆ.ವಿ.ವೈ ಯೋಜನೆಯಡಿ ಕೃಷಿ ಮತ್ತು ಕೃಷಿ ಸಂಬಂಧಿತ ವಿವಿಧ ಇಲಾಖೆ/ಸಂಸ್ಥೆಗಳು ಆಯಾ ವರ್ಷದಲ್ಲಿ ಅನುದಾನ ಕೋರಿ ಸಲ್ಲಿಸಿದ ಪ್ರಾಯೋಜನೆಗಳನ್ನು ಅನುಮೋದಿಸುವುದು.
3. ಅನುಮೋದನೆಯಾದ ವಿವಿಧ ಇಲಾಖೆ/ಸಂಸ್ಥೆಗಳ ಪ್ರಾಯೋಜನೆಗಳ ಅನುಷ್ಠಾನವನ್ನು ಪರಿಶೀಲಿಸುವುದು.
4. ಅನುಷ್ಠಾನಗೊಂಡ ಪ್ರಾಯೋಜನೆಗಳ ಪ್ರಗತಿ ಪರಿಶೀಲನೆ ಮಾಡುವುದು.
5. ಸಮಿತಿಯು ಮೇಲೆ ಸಲ್ಲಿಸಿದ ಪ್ರಾಯೋಜನೆಗಳು ಪುನರಾವರ್ತನೆ ಆಗದಂತೆ ಕ್ರಮ ವಹಿಸುವುದು.
6. ಅನುಷ್ಠಾನೊಗಂಡ ಪ್ರಾಯೋಜನೆಗಳನ್ನು ಯೋಜನೆಯ ಮಾರ್ಗಸೂಚಿ ಪ್ರಕಾರ ಬಾಹ್ಯ ಮೌಲ್ಯಮಾಪನಕ್ಕೆ ಒಳಪಡಿಸುವುದನ್ನು ಖಚಿತಪಡಿಸಿಕೊಳ್ಳಲುವುದು.
7. ಕೇಂದ್ರ ಸರ್ಕಾರವು ಯೋಜನೆಯಡಿ ಆಗಾಗ್ಗೆ ನೀಡುವ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸಿರುವ ಬಗ್ಗೆ ಪ್ರಗತಿ ಪರಿಶೀಲನೆ ಮಾಡುವುದು.

ಭಾಗ-3 ವರದಿಗಳು/ಪ್ರಕಟಣೆಗಳು

ಕ್ರ ಸಂ	ಯೋಜನೆಯ ಹೆಸರು	ಲೆಕ್ಕ ಶೀರ್ಷಿಕೆ	ವಿಸ್ತರಣಾ ಸಾಹಿತ್ಯಗಳ ವಿವರ
1	ಕೃಷಿ ವಿಸ್ತರಣೆ ಮತ್ತು ತರಬೇತಿ -ಕೃಷಿ ವಾರ್ತಾ ಘಟಕ	**2401-00-109-021 ಉಶೀ 059**	• 2018–19 ನೇ ಸಾಲಿನ ಕೃಷಿ ಉತ್ಪಾದನಾ ಕಾರ್ಯಕ್ರಮಗಳು)ಯೋಜನಾ ಮಾರ್ಗಸೂಚಿ ಪುಸ್ತಕ(• 2018–19 ನೇ ಸಾಲಿನಲ್ಲಿ ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿ ರೈತರಿಗೆ ದೊರೆಯುವ ಸೌಲಭ್ಯಗಳ ಡಿ

ಅಧ್ಯಾಯ-5

ಅ. ಇಲಾಖೆ ಮತ್ತು ಅದರ ಅಧೀನ ಕಛೇರಿಗಳಲ್ಲಿನ ಒಟ್ಟು ಅಧಿಕಾರಿಗಳು & ಸಿಬ್ಬಂದಿಗಳ ಸಂಖ್ಯೆ ಮತ್ತು ಖಾಲಿ ಸ್ಥಾನ

ಆ. 2019-20 ನೇ ಸಾಲಿನಲ್ಲಿ ನಿವೃತ್ತಿ ಹೊಂದಿದ ಅಧಿಕಾರಿ/ಸಿಬ್ಬಂದಿಗಳ ಕುರಿತು ಮಾಹಿತಿ

ಇ. 2019-20 ನೇ ಸಾಲಿಗೆ ಇಲಾಖೆಗೆ ಸೇರ್ಪಡೆಯಾಗಿರುವ ಹೊರಗುತ್ತಿಗೆ ನೌಕರರ ಕುರಿತು ವಿವರ

ಈ. 2019-20 ನೇ ಸಾಲಿನಲ್ಲಿ ರಾಜ್ಯದಲ್ಲಿ ನಡೆದ ತರಬೇತಿ ಕಾರ್ಯಕ್ರಮಗಳಿಗೆ ಹಾಜರಾದ ಅಧಿಕಾರಿಗಳ ವಿವರ

ಕೃಷಿ ಇಲಾಖೆಯಲ್ಲಿನ ಹುದ್ದೆಗಳ ಮಾಹಿತಿ ವಿವರ ದಿನಾಂಕ: 31.03.2020

ಕ್ರ. ಸಂ	ಹುದ್ದೆಯ ವಿವರ ಗ್ರೂಪ್-ಎ	ಮಂ ಜೂರು	ಭರ್ತಿ	ಖಾಲಿ	ಗಂಡು	ಹೆಣ್ಣು	ಪ.ಜಾ	ಪ.ಪಂ
1	ಕೃಷಿ ಆಯುಕ್ತರು	2	2	0	2	0	0	0
2	ಕೃಷಿ ನಿರ್ದೇಶಕರು	3	3	0	2	1	1	2
3	ಅಪರ ಕೃಷಿ ನಿರ್ದೇಶಕರು	8	1	0	0	1	0	0
4	ಜಂಟಿ/ಅಪರ ನಿರ್ದೇಶಕರು (ಆಡಳಿತ)	1	8	0	8	0	1	0
5	ಜಂಟಿ ಕೃಷಿ ನಿರ್ದೇಶಕರು	51	51	0	33	18	7	2

ಕ್ರ. ಸಂ	ಹುದ್ದೆಯ ವಿವರ	ಮಂ	ಭರ್ತಿ	ಖಾಲಿ	ಗಂಡು	ಹೆಣ್ಣು	ಪ.ಜಾ	ಪ.ಪಂ
6	ಉಪ ಕೃಷಿ ನಿರ್ದೇಶಕರು	85	85	0	59	26	12	3
7	ಮುಖ್ಯ ಲೆಕ್ಕಾಧಿಕಾರಿಗಳು	1	1	0	1	0	0	0
8	ಕಾನೂನು ಅಧಿಕಾರಿ	1	0	1	0	0	0	0
9	ಕಾರ್ಯನಿರ್ವಾಹಕ ಅಭಿಯಂತರರು	1	1	0	1	0	0	0
10	ಸಹಾಯಕ ಕೃಷಿ ನಿರ್ದೇಶಕರು	385	260	125	201	59	45	10
11	ಉಪ ನಿರ್ದೇಶಕರು (ಸಾಂಖ್ಯಿಕ)	1	1	0	0	1	0	0
12	ಸಹಾಯಕ ಕೃಷಿ ನಿರ್ದೇಶಕರು (ರೈ.ಮ)	46	29	17	0	17	8	2
13	ಆಡಳಿತಾಧಿಕಾರಿ	25	4	21	3	1	1	0
14	ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು	2	1	1	1	0	0	0
	ಒಟ್ಟು-ಎ	**612**	**447**	**165**	**311**	**124**	**75**	**19**
	ಗ್ರೂಪ್-ಬಿ							
15	ಕೃಷಿ ಅಧಿಕಾರಿ/ಕೃಷಿ ಅಧಿಕಾರಿ(ರೈ.ಮ)	1589	1064	525	644	420	166	32
16	ಸಹಾಯಕ ಸಾಂಖ್ಯಿಕ ನಿರ್ದೇಶಕರು	1	1	0	1	0	0	0
17	ಮುಖ್ಯ ಕಲಾವಿದ ಮತ್ತು ಶ್ರವಣ ತಜ್ಞ	1	0	1	0	0	0	0
18	ಆಡಳಿತ ಸಹಾಯಕ	41	32	9	25	7	7	2
19	ಸಹಾಯಕ ಕೃಷಿ ಅಧಿಕಾರಿ/ ಸಹಾಯಕ ಕೃಷಿ ಅಧಿಕಾರಿ (ಕೃಷಿ ಇಂಜಿನಿಯರ್) ಮತ್ತು ನೀರು ನಿರ್ವಹಣೆ)/(ರೈ.ಮ)	2370	926	1444	870	56	215	80

ಕ್ರ. ಸಂ	ಹುದ್ದೆಯ ವಿವರ	ಮಂ	ಭರ್ತಿ	ಖಾಲಿ	ಗಂಡು	ಹೆಣ್ಣು	ಪ.ಜಾ	ಪ.ಪಂ
20	ಸಹಾಯಕ ಇಂಜಿನಿಯರ್ (ಸಿವಿಲ್)	2	0	2	0	0	0	0
	ಒಟ್ಟು-ಬಿ	**4004**	**2023**	**1981**	**1540**	**483**	**388**	**114**
	ಗ್ರೂಪ್-ಸಿ							
21	ಅಧೀಕ್ಷಕರು	364	287	77	197	90	43	11
22	ಗ್ರಂಥಪಾಲಕರು	1	1	0	1	0	0	0
23	ನಕ್ಷೆಗಾರರು	1	1	0	1	1	0	0
24	ಮೆಕ್ಯಾನಿಕಲ್ ಫೋರ್ಮೆನ್	2	2	0	2	2	0	0
25	ಸಾಂಖ್ಯಿಕ ನಿರೀಕ್ಷಕರು	2	0	2	0	0	0	0
26	ಕೃಷಿ ಉಪಕರಣ ಮೇಲ್ವಿಚಾರಕರು	12	12	0	12	0	0	0
27	ಪ್ರಥಮ ದರ್ಜೆ ಸಹಾಯಕ	563	412	151	317	95	82	11
28	ಶೀಘ್ರಲಿಪಿಗಾರರು	47	32	15	8	24	3	1
29	ಹಿರಿಯ ಬೆರಳಚ್ಚುಗಾರರು/ ಬೆರಳಚ್ಚುಗಾರರು	367	95		23	72	15	1
30	ಹಿರಿಯ ವಾಹನ ಚಾಲಕ/ ವಾಹನ ಚಾಲಕ	352	62	290	62	0	13	3
31	ರೇಖಾಗಾರ	43	43	0	43	0	0	0
32	ಕೃಷಿ ಸಹಾಯಕ	33	33	0	33	0	11	2
33	ದ್ವಿತೀಯ ದರ್ಜೆ ಸಹಾಯಕ	630	418	212	272	146	85	22
34	ಸಹಾಯಕ ಗ್ರಂಥಪಾಲಕರು	1	0	1	0	0	0	0
35	ಪ್ರಯೋಗ ಶಾಲಾ ಸಹಾಯಕ	65	28	37	21	7	6	0
37	ಕಾಂಪೋಸಿಟರ್	3	3	0	3	0	0	0
38	ಪ್ರಿಂಟರ್	3	3	0	3	0	0	0
39	ಬೈಂಡರ್	1	1	0	1	0	0	0
40	ಹಿರಿಯ ಕಲಾವಿದ/ಕಲಾವಿದ	1	0	1	0	0	0	0
41	ಪ್ರಾಜೆಕ್ಟ್ ಆಪರೇಟರ್	1	1	0	1	0	0	0

ಕ್ರ. ಸಂ	ಹುದ್ದೆಯ ವಿವರ	ಮಂ	ಭರ್ತಿ	ಖಾಲಿ	ಗಂಡು	ಹೆಣ್ಣು	ಪ.ಜಾ	ಪ.ಪಂ
42	ಬಡಿಗ ಕಮ್ಮಾರ	1	0	1	0	0	0	0
	ಒಟ್ಟು-ಸಿ	**2493**	**1434**	**787**	**1000**	**437**	**258**	**51**
	ಗ್ರೂಪ್-ಡಿ							
43	ಅಟೆಂಡರ್	111	45	66	30	15	11	7
44	ಬಾಣಸಿಗ	23	12	11	6	6	6	1
45	ಡಿ ದರ್ಜೆ	920	450	470	250	200	98	32
	ಒಟ್ಟು-ಡಿ	**1054**	**507**	**547**	**286**	**221**	**115**	**40**
	ಫೋಷ್ಪಾರೆ							
1	ಎ	**612**	**447**	**165**	**311**	**124**	**75**	**19**
2	ಬಿ	**4004**	**2023**	**1981**	**1540**	**483**	**388**	**114**
3	ಸಿ	**2493**	**1434**	**787**	**1000**	**437**	**258**	**51**
4	ಡಿ	**1054**	**507**	**547**	**286**	**221**	**115**	**40**
	ಒಟ್ಟು	**8163**	4411	3480	3137	1265	836	224

ವಿವಿಧ ವೃಂದಗಳಲ್ಲಿ ಮಾರ್ಚ್-2020ರವರೆಗೆ ವಯೋನಿವೃತ್ತಿ /ಸ್ವಯಂ ನಿವೃತ್ತಿ ಹಾಗೂ ನಿಧನರಾಗಿರುವವರ ವಿವರ

ಕ್ರ. ಸಂ.	ವೃಂದದ ಹೆಸರು	ವಯೋನಿವೃತ್ತಿ /ಸ್ವಯಂ ನಿವೃತ್ತಿ ಹಾಗೂ ನಿಧನರಾಗಿರುವವರ ಸಂಖ್ಯೆ
1	ಅಪರ ಕೃಷಿ ನಿರ್ದೇಶಕರು	2
2	ಸಹಾಯಕ ಕೃಷಿ ನಿರ್ದೇಶಕರು	7
3	ಸಹಾಯಕ ಕೃಷಿ ನಿರ್ದೇಶಕರು (ರೈತ ಮಹಿಳೆ)	5
4	ಕೃಷಿ ಅಧಿಕಾರಿ	42
5	ಆಡಳಿತಾಧಿಕಾರಿ	1
6	ಆಡಳಿತ ಸಹಾಯಕರು	4

ಕ್ರ. ಸಂ.	ವೃಂದದ ಹೆಸರು	ವಯೋನಿವೃತ್ತಿ /ಸ್ವಯಂ ನಿವೃತ್ತಿ ಹಾಗೂ ನಿಧನರಾಗಿರುವವರ ಸಂಖ್ಯೆ
7	ಅಧೀಕ್ಷಕರ	26
8	ಪ್ರಥಮ ದರ್ಜೆ ಸಹಾಯಕರ	12
9	ದ್ವಿತೀಯ ದರ್ಜೆ ಸಹಾಯಕರ	10
10	ಹಿರಿಯ ವಾಹನ ಚಾಲಕ/ ವಾಹನ ಚಾಲಕ	14
11	ಹಿರಿಯ ಬೆರಳಚ್ಚುಗಾರರ / ಬೆರಳಚ್ಚುಗಾರರ	4
12	ರೇಖಾಗಾರರ	14
13	ಪ್ರಯೋಗ ಶಾಲಾ ಸಹಾಯಕರ	1f
14	ಕೃಷಿ ಉಪಕರಣ ಮೇಲ್ವಿಚಾರಕರು	2
15	ಪ್ರಿಂಟರ್	1
16	ಗ್ರೂಪ್ ಡಿ	9
17	ಪ್ರಯೋಗಶಾಲಾ ಪರಿಚಾರಕರ	5
	ಒಟ್ಟು	**159**
2019-20 ನೇ ಸಾಲಿನಲ್ಲಿ ಪಡೆಯಲಾಗಿರುವ ಹೊರಗುತ್ತಿಗೆ ನೌಕರರ ವಿವರ:		
1	ಡೇಟಾ ಎಂಟ್ರಿ ಆಪರೇಟರ್	175
2	ವಾಹನ ಚಾಲಕರು	102
3	ಗ್ರೂಪ್-ಡಿ	294

ಈ. ತರಬೇತಿ ಕಾರ್ಯಕ್ರಮಗಳ ವಿವರ – 2019-20

ಮಾನವ ಸಂಪನ್ಮೂಲ ಅಬಿsವೃದ್ಧಿಯು ಯಾವುದೇ ಸಂಸ್ಥೆಯ ಅವಶ್ಯಕ ಹಾಗೂ ಅವಿಭಾಜ್ಯನೀಯ ಅಂಗವಾಗಿರುತ್ತದ ಎಲ್ಲ ಕ್ಷೇತ್ರಗಳಲ್ಲಿ ಬೆಳವಣಿಗೆ ಇರುವ ಹಾಗೇ ಕೃಷಿ ರಂಗದಲ್ಲಿಯೂ ತೀವ್ರಗತಿಯ ಬೆಳವಣಿಗೆ ಕಂಡು ಬರುತ್ತಿದ್ದು, ಕೃಷಿ ಜ್ಞಾನವನ್ನು ಕಾಲಕ್ಕನುಗುಣವಾಗಿ ವೃದ್ಧಿಪಡಿಸುವುದು ಅತ್ಯವಶ್ಯಕವಾಗಿರುತ್ತದೆಕೃಷಿ ಕ್ಷೇತ್ರಗಳಲ್ಲಿನ ಆಧುನಿಕ ತಾಂತ್ರಿಕತೆಗಳ ಜ್ಞಾನಾರ್ಜನೆಯನ್ನು ರೈತರಿಗೆ . ತಲುಪಿಸುವಲ್ಲ **(Lab to land)** ವಿಸ್ತರಣಾಧಿಕಾರಿಗಳ ಪಾತ್ರ ಬಹು ಮುಖ್ಯವಾಗಿರುತ್ತದೆ. ಅಲ್ಲದೇ , ಇಂದಿನ ರೈತರ ಬಹುಮುಖ ಆಯಾಮಗಳ ಬೇಡಿಕೆಗಳಿಗೆ ಸ್ಪಂದಿಸಬೇಕಾದಲ್ಲಿ ವಿಸ್ತರಣಾಧಿಕಾರಿಗಳು ಸಹ ತಾಂತ್ರಿಕ ಜ್ಞಾನ, ಜೊತೆ ಜೊತೆಗೆ ಅಪಾರವಾದ ಪೂರಕ ವಿಚಾರಗಳು ಹಾಗೂ ಮಾಹಿತಿಯ ಅರಿವನ್ನು ಪಡೆಯುವುದು ಸದ್ಯದ ಅವಶ್ಯಕತೆಯಾಗಿರುತ್ತದೆ ಈ .ಹಿನ್ನೆಲೆಯಲ್ಲಿ ವಿಸ್ತರಣಾಧಿಕಾರಿಗಳ ಸೃಜನಶೀಲತೆ, ಕೌಶಲ್ಯ ನಿರ್ವಹಣಾ ಮತ್ತು ವೃತ್ತಿ ಸಾಮಥ್ರ್ಯವನ್ನು ಹೆಚ್ಚಿಸಲು ಕೃಷಿ ಇಲಾಖೆಯ ವಿವಿಧ ಹಂತದ ಅಧಿಕಾರಿಗಳನ್ನು ರಾಜ್ಯದ ಪ್ರತಿಷ್ಠಿತ ಸಂಸ್ಥೆಗಳಾದ ಆಡಳಿತ ತರಬೇತಿ ಸಂಸ್ಥೆ **(ATI)**, ಮೈಸೂರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ **(ANSSIRD)**, ಮೈಸೂರು **Fiscal Policy Institute, Bangalore,** ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಬೆಂಗಳೂರು ಇವರು ನಡೆಸುವ ಇಆಡಳಿತ ತರಬೇತಿಗಳು-, ಕೃಷಿ ವಿಶ್ವ ವಿದ್ಯಾನಿಲಯಗಳು ಮತ್ತು ಹೊರ ರಾಜ್ಯದಲ್ಲಿರುವ **Extension Education Institute, MANAGE, NIRD, NIPHM,** ಹೈದರಾಬಾದ್, ಇತ್ಯಾದಿ ಸಂಸ್ಥೆಗಳಿಗೆ ನಿಯೋಜಿಸಲಾಗುತ್ತಿದೆ .

ಫಲಶೃತಿ :

- ವಿವಿಧ ವಿಷಯಗಳ ತರಬೇತಿಗಳಲ್ಲಿ ಪಡೆದುಕೊಂಡಂತಹ ಜ್ಞಾನವನ್ನು ತಮ್ಮ ಕ್ಷೇತ್ರಮಟ್ಟದ ಕಾರ್ಯಕ್ರಮದಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳುತ್ತಿರುವರು .
- ತರಬೇತಿಯಲ್ಲಿ ಪರಿಣಿತರಾದಂತಹ ಅಧಿಕಾರಿಗಳು ಜಿಲ್ಲಾ ಕೃಷಿ ತರಬೇತಿ ಕೇಂದ್ರಗಳಲ್ಲಿ / ಗ್ರಾಮ ಮಟ್ಟದಲ್ಲಿ ಏರ್ಪಡಿಸುವ ವಿವಿಧ ರೈತರ /ಹೋಬಳಿ ಮಟ್ಟದಲ್ಲಿ /ಜಿಲ್ಲಾಮಟ್ಟದಲ್ಲಿ .ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸುವರು
- ತರಬೇತಿಗಳಿಂದ ಅಧಿಕಾರಿಗಳ ಬುದ್ಧಿಮತೆ ಮತ್ತು ಜ್ಞಾನಮಟ್ಟ ಹೆಚ್ಚಿದ್ದು, ಕಠಿಣ ಸಂದರ್ಭಗಳನ್ನು ಲೀಲಾಜಾಲವಾಗಿ ಎದುರಿಸುವ ಆತ್ಮಸ್ಥೈರ್ಯ ಉಂಟಾಗಿರುತ್ತದೆ.

ವಿವಿಧ ತರಬೇತಿಗಳಿಗೆ ಕಳುಹಿಸಲಾದ ಅಧಿಕಾರಿಗಳ ವಿವರ:

ಕ್ರ.ಸಂ	ವಿವರ	ಸಂಖ್ಯೆ	ಷರಾ
1	ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ತರಬೇತಿಗೆ ಹಾಜರಾದ ಅಧಿಕಾರಿಗಳು	468	

ಕ್ರ.ಸಂ	ವಿವರ	ಸಂಖ್ಯೆ	ಷರಾ
2	** ಹೊರದೇಶಗಳಲ್ಲಿ ತರಬೇತಿಗೆ ಹಾಜರಾದ ಅಧಿಕಾರಿಗಳು	**2**	ವಿವರಗಳನ್ನು ನಮೂದಿಸಿದೆ
	ಒಟ್ಟು	**470**	

** ಶ್ರೀ. ಎಮ್. ಎಸ್. ದಿವಾಕರ್, ಅಪರ ಕೃಷಿ ನಿರ್ದೇಶಕರು, ಮಾನವ ಅಭಿವೃದ್ಧಿ ಸಂಪನ್ಮೂಲ ಕೇಂದ್ರ ಕಚೇರಿರವರು National Productivity Council (NPC) & Asian Productivity Organization (APO) ಸಹಯೋಗದೊಂದಿಗೆ Bali, Indonesia ದಲ್ಲಿ ಆಯೋಜಿಸಲಾದ "Agriculture Transformation" ಕುರಿತಾದ ಅಂತರರಾಷ್ಟ್ರೀಯ ತರಬೇತಿ/ಕಾರ್ಯಾಗಾರದಲ್ಲಿ ದಿನಾಂಕ: **30.09.2019** ರಿಂದ **04.10.2019** ರವರೆಗೆ ಭಾಗವಹಿಸಿರುತ್ತಾರೆ.

** ಶ್ರೀ. ಎಮ್. ಎಸ್. ದಿವಾಕರ್, ಅಪರ ಕೃಷಿ ನಿರ್ದೇಶಕರು, ಮಾನವ ಅಭಿವೃದ್ಧಿ ಸಂಪನ್ಮೂಲ ಹಾಗೂ ಶ್ರೀಮತಿ ಗೀತಾ ಹಳ್ಳಿ ಉಪ ಕೃಷಿ ನಿರ್ದೇಶಕರು, ಬೆಳೆ ವಿಮೆ ರವರು " ಸಾರ್ವಜನಿಕ ನೀತಿ ಮತ್ತು ಆಡಳಿತ" ಕುರಿತ ತರಬೇತಿಯನ್ನು ಸೌತ್ ಕೋರಿಯಾ ಪ್ರವಾಸವೂ ಸೇರಿ, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆ , ಡಾ: ವಿ. ಕೆ. ಆರ್.ವಿ.ರಾವ್ ರಸ್ತೆ, ನಾಗರಭಾವಿ, ಬೆಂಗಳೂರು ಇಲ್ಲಿ ದಿನಾಂಕ **20.01.2020** ರಿಂದ ದಿನಾಂಕ: **20.02.2020** ರವರೆಗೆ ಪಡೆದಿರುತ್ತಾರೆ.

ಅಧ್ಯಾಯ - 6

ಅ. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದ ಮಾಹಿತಿ :

ಆ. ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದ ವಿವರ-2016:–

ಇ. ಮಾಹಿತಿ ಹಕ್ಕು ಕಾಯ್ದೆಯಡಿ ಸ್ವೀಕೃತವಾದ ಮನವಿಗಳ ವಿವರ:-

ಈ. ಕೃಷಿ ಉತ್ಪಾದನಾ ಕಾರ್ಯಕ್ರಮ

1. **ಲೆಕ್ಕ ಪರಿಶೋಧನೆಗೆ ಸಂಬಂಧಿಸಿದ ಮಾಹಿತಿ**

2019-20 ನೇ ಸಾಲಿನಲ್ಲಿ ಕೇಂದ್ರ ಕಛೇರಿಯಿಂದ, ಇಲಾಖೆಯ ಅಧೀನ ಕಛೇರಿಗಳ ಲೆಕ್ಕ ತಪಾಸಣೆಯನ್ನು ಕೈಗೊಂಡ ಬಾಬ್ತು ವರದಿ

ಕ್ರ.ಸಂ	ಕಛೇರಿಗಳ ಹೆಸರು	ಲೆಕ್ಕ ತಪಾಸಣಾ ವರದಿ	ಲೆಕ್ಕ ತಪಾಸಣೆ ಕೈಗೊಂದ ದಿನಾಂಕ	ಷರಾ
1.	ಜಂಟಿ ಕೃಷಿ	2014-15 ರಿಂದ 2018-	2-5-2019 ರಿಂದ 6-5-2019	ಸದರಿ ವರ್ಷದ ಲೆಕ್ಕ ತಪಾಸಣೆಗೆ

ಕ್ರ.ಸಂ	ಕಛೇರಿಗಳ ಹೆಸರು	ಲೆಕ್ಕ ತಪಾಸಣಾ ವರದಿ	ಲೆಕ್ಕ ತಪಾಸಣೆ ಕೈಗೊಂದ ದಿನಾಂಕ	ಷರಾ
	ನಿರ್ದೇಶಕರು ಚಿಕ್ಕಬಳ್ಳಾಪುರ.	19		ಸಂಬಂದಿಸಿದ ಆಕ್ಷೇಪಣೆಗಳಿಗೆ ಸಂಬಂದಿಸಿದ ಕಛೇರಿಯಿಂದ ಅನುಸರಣಾ ವರದಿಗಳನ್ನು ಪಡೆದು, ಸೂಕ್ತವಾದ ಮಾಹಿತಿ ದಾಖಲಾತಿಗಳನ್ನು ಒದಗಿಸಿದ ಕಂಡಿಕೆಗಳನ್ನು ಮಾತ್ರ ಕೈಬಿಟ್ಟು ಉಳಿದ ಕಂಡಿಕೆಗಳನ್ನು ಮುಂದುವರೆಸಲಾಗಿದೆ.
2.	ಸಹಾಯಕ ಕೃಷಿ ನಿರ್ದೇಶಕರು ನಂಜನಗೂಡು	2018–19	8–5–2019 ರಿಂದ 10–5–2019	– ಅದೇ –
3.	ಸಹಾಯಕ ಕೃಷಿ ನಿರ್ದೇಶಕರು ಸಿಂಧನೂರು	2017–18– 2018–2019	24–5–2019 ರಿಂದ 25–5–2019	–ಅದೆ–
4.	ಸಹಾಯಕ ಕೃಷಿ ನಿರ್ದೇಶಕರು ಬೈಲಹೊಂಗಲ	2017–18 ರಿಂದ 2018–19	22–5–2019 ರಿಂದ 25–5–2019	–ಅದೆ–
5.	ಸಹಾಯಕ ಕೃಷಿ ನಿರ್ದೇಶಕರು ದೇವನಹಳ್ಳಿ	2017–18 2018–2019	30–5–2019 ರಿಂದ 1–6–2019	– ಅದೇ –
6.	ಸಹಾಯಕ ಕೃಷಿ ನಿರ್ದೇಶಕರು ಹಿರೇಕೆರೂರು	2016–17 ರಿಂದ 2018–2019	9–7–2019 ರಿಂದ 14–7–2019	–ಅದೆ–
7.	ಸಹಾಯಕ ಕೃಷಿ	2018–19	5–6–2019 ರಿಂದ 7–6–2019	–ಅದೆ–

ಕ್ರ.ಸಂ	ಕಛೇರಿಗಳ ಹೆಸರು	ಲೆಕ್ಕ ತಪಾಸಣಾ ವರದಿ	ಲೆಕ್ಕ ತಪಾಸಣೆ ಕೈಗೊಂದ ದಿನಾಂಕ	ಷರಾ
	ನಿರ್ದೇಶಕರು ಆಳಂದ್			
8..	ಸಹಾಯಕ ಕೃಷಿ ನಿರ್ದೇಶಕರು ಚಿತ್ತಾಪುರ	2017–18 ರಿಂದ 2018–19	12–6–2019 ರಿಂದ 15–6–2019	–ಅದೆ–
9.	ಸಹಾಯಕ ಕೃಷಿ ನಿರ್ದೇಶಕರು ವಿಜಯಪುರ	2018–19	26–6–2019ರಿಂದ 29–6–2019	–ಅದೆ–
10.	ಸಹಾಯಕ ಕೃಷಿ ನಿರ್ದೇಶಕರು ಯಲಬುರ್ಗ	2017–18 ರಿಂದ 2018–19	19–6–2019 ರಿಂದ 22–6–2019	–ಅದೆ–
11	ಸಹಾಯಕ ಕೃಷಿ ನಿರ್ದೇಶಕರು ರಾಮದುರ್ಗ	2018–2019	23–6–2019 ರಿಂದ 25–6–2019	–ಅದೆ–
12.	ಸಹಾಯಕ ಕೃಷಿ ನಿರ್ದೇಶಕರು ಶ್ರೀನಿವಾಸಪುರ	2017–18 2018–2019	4–9–2019 ರಿಂದ 7–9–2019.	–ಅದೆ–
13.	ಸಹಾಯಕ ಕೃಷಿ ನಿರ್ದೇಶಕರು ಹಿರಿಯೂರು	2017–18 ರಿಂದ 2018–19	8–7–2019 ರಿಂದ 11–7–2019	–ಅದೆ–
14	ಸಹಾಯಕ ಕೃಷಿ ನಿರ್ದೇಶಕರು ಕುಷ್ಟಗಿ	2017–18 ರಿಂದ 2018–2019	17–7–2019 ರಿಂದ 20–7–2019.	–ಅದೆ–
15.	ಸಹಾಯಕ ಕೃಷಿ	2017–18 ರಿಂದ 2018–	23–7–2019 ರಿಂದ	–ಅದೆ–

ಕ್ರ.ಸಂ	ಕಛೇರಿಗಳ ಹೆಸರು	ಲೆಕ್ಕ ತಪಾಸಣಾ ವರದಿ	ಲೆಕ್ಕ ತಪಾಸಣೆ ಕೈಗೊಂದ ದಿನಾಂಕ	ಷರಾ
	ನಿರ್ದೇಶಕರು ಮೂಡಿಗೆರೆ	2019.	26–7–2019	
16.	ಸಹಾಯಕ ಕೃಷಿ ನಿರ್ದೇಶಕರು ಮಾನವಿ	2017–18 ರಿಂದ 2018–2019	18–9–2019 ರಿಂದ 21–9–2019.	– ಅದೇ –
17.	ಸಹಾಯಕ ಕೃಷಿ ನಿರ್ದೇಶಕರು ಔರಾದ್	2017–18 ರಿಂದ 2018–2019	23–10–2019 ರಿಮದ 25–10–2019.	–ಅದೆ–
18	ಸಹಾಯಕ ಕೃಷಿ ನಿರ್ದೇಶಕರು ಕೊಳ್ಳೇಗಾಲ	2017–18 ರಿಂದ 2018–2019	5–11–2019 ರಿಂದ 8–11–2019	– ಅದೇ –
19	ಸಹಾಯಕ ಕೃಷಿ ನಿರ್ದೇಶಕರು ಭಾಲ್ಕಿ	2017–18 ರಿಂದ 2018–2019.	27–11–2019 ರಿಂದ 30–11–2019.	– ಅದೇ –
20	ಸಹಾಯಕ ಕೃಷಿ ನಿರ್ದೇಶಕರು ಅರಸೀಕೆರೆ	2017–2018 ರಿಂದ 2018–2019	7–1–2020 ರಿಂದ 9–1–2020.	–ಅದೆ–
21	ಸಹಾಯಕ ಕೃಷಿ ನಿರ್ದೇಶಕರು ರಾಯಚೂರು	2017–2018 ರಿಂದ 2018–2019	17–7–2019 ರಿಂದ 20–7–2019.	–ಅದೆ–
22	ಸಹಾಯಕ ಕೃಷಿ ನಿರ್ದೇಶಕರು ಚಿಕ್ಕೋಡಿ	2017–18 ರಿಂದ 2018–19	5–8–2019 ರಿಂದ 8–8–2019.	–ಅದೆ–
23	ಸಹಾಯಕ ಕೃಷಿ ನಿರ್ದೇಶಕರು ಮಂಡ್ಯ	2017–18 ರಿಂದ 2018–19	11–11–2019 ರಿಂದ 14–11–2019	–ಅದೆ–
24.	ಸಹಾಯಕ ಕೃಷಿ	2017–18	27–8–2019 ರಿಂದ	–ಅದೆ–

ಕ್ರ.ಸಂ	ಕಛೇರಿಗಳ ಹೆಸರು	ಲೆಕ್ಕ ತಪಾಸಣಾ ವರದಿ	ಲೆಕ್ಕ ತಪಾಸಣೆ ಕೈಗೊಂದ ದಿನಾಂಕ	ಷರಾ
	ನಿರ್ದೇಶಕರು ಜಮಖಂಡಿ	ರಿಂದ 2018–19	30–8–2019.	
25.	ಸಹಾಯಕ ಕೃಷಿ ನಿರ್ದೇಶಕರು ಚನ್ನಗೆರೆ	2018–19	11–9–2019 ರಿಂದ 12–9–2019.	–ಅದೆ–
26.	ಸಹಾಯಕ ಕೃಷಿ ನಿರ್ದೇಶಕರು ಹೊನ್ನಹಳ್ಳಿ	2017–18	12–9–2019 ರಿಂದ 13–9–2019.	– ಅದೇ –
27.	ಸಹಾಯಕ ಕೃಷಿ ನಿರ್ದೇಶಕರು ಹೊಸದುರ್ಗ	2017–18 ರಿಂದ 2018–19	16–10–2019 ರಿಂದ 19–10–2019.	– ಅದೇ –
28.	ಸಹಾಯಕ ಕೃಷಿ ನಿರ್ದೇಶಕರು ಬೆಳಗಾವಿ	2017–18 ರಿಂದ 2018–19	20–11–2019 ರಿಂದ 23–11–2019.	–ಅದೆ–
29.	ಸಹಾಯಕ ಕೃಷಿ ನಿರ್ದೇಶಕರು ಮಳವಳ್ಳಿ	2017–18	19–8–2019–22–8–2019.	– ಅದೇ –
30.	ಸಹಾಯಕ ಕೃಷಿ ನಿರ್ದೇಶಕರು ಕೊಪ್ಪಳ	2017–18 ರಿಂದ 2018–19	10–2–2019ರಿಂದ 14–2–2019.	– ಅದೇ –

ಅ. 2. ಇಲಾಖೆಯಿಂದ ಅಧೀನ ಕಛೇರಿಗಳ ಹಿಂದಿನ ವರ್ಷಗಳ ಲೆಕ್ಕ ತಪಾಸಣೆಯನ್ನು ಕೈಗೊಂಡ ಬಾಬ್ತು, ಲೆಕ್ಕ ಪರಿವೀಕ್ಷಣೆಯ ವಾಚನಾ ಕಾರ್ಯವನ್ನು 2019–20ನೇ ಸಾಲಿನಲ್ಲಿ ಕೈಗೊಂಡಿರುವ ಕುರಿತು.

ಕ್ರ.ಸಂ.	ಕಛೇರಿಗಳ ಹೆಸರು	ಯಾವ ಅವಧಿಯ ಲೆಕ್ಕ ತಪಾಸಣೆಯ ಪರಿವೀಕ್ಷಣೆ ಮಾಡಿದೆ	ಲೆಕ್ಕ ಪರಿವೀಕ್ಷಣೆಯ ವಾಚನಾ ಕಾರ್ಯ ಕೈಗೊಂಡ ದಿನಾಂಕ	ಷರಾ
1.	ಉಕೃನಿ ಜಿಕೃತಕೇ ಬಾಗಲಕೋಟ್	2014-15 - 2017-2018	31-1-2020	ಸದರಿ ವರ್ಷಗಳ ಲೆಕ್ಕ ತಪಾಸಣೆಗೆ ಸಂಬಂಧಿಸಿದ ಆಕ್ಷೇಪಣೆಗಳಿಗೆ ಅನುಸರಣಾ ವರದಿಗಳನ್ನು ಅವರ ಕಛೇರಿ ಯಿಂದ ಪಡೆದು, ಸರಿಯಾದ ಮಾಹಿತಿ ದಾಖಲಾತಿಗಳನ್ನು ಒದಗಿಸಿದ ಕಂಡಿಕೆಗಳನ್ನು ಮಾತ್ರ ಕೈಬಿಟ್ಟು ಉಳಿದ ಕಂಡಿಕೆಗಳನ್ನು ಮುಂದುವರೆಸಲಾಗಿದೆ.
2.	ಸಹಾಯಕ ಕೃಷಿ ನಿರ್ದೇಶಕರು ಬೀಳಗಿ	2017-2018	31-1-2020	- ಅದೇ-
3.	ಸಹಾಯಕ ಕೃಷಿ ನಿರ್ದೇಶಕರು ಬಾದಾಮಿ	2015-2016	31-1-2020	- ಅದೇ-
4.	ಸಹಾಯಕ ಕೃಷಿ ನಿರ್ದೇಶಕರು ಜಮಖಂಡಿ	2009-10 - 2018-2019	31-1-2020	- ಅದೇ-

ಕ್ರ.ಸಂ.	ಕಛೇರಿಗಳ ಹೆಸರು	ಯಾವ ಅವಧಿಯ ಲೆಕ್ಕ ತಪಾಸಣೆಯ ಪರಿವೀಕ್ಷಣೆ ಮಾಡಿದೆ	ಲೆಕ್ಕ ಪರಿವೀಕ್ಷಣೆಯ ವಾಚನಾ ಕಾರ್ಯ ಕೈಗೊಂಡ ದಿನಾಂಕ	ಷರಾ
5.	ಸಹಾಯಕ ಕೃಷಿ ನಿರ್ದೇಶಕರು ಹೊಸದುರ್ಗ	2017-18-2018-2019.	14-1-2020	- ಅದೇ-
6.	ಸಹಾಯಕ ಕೃಷಿ ನಿರ್ದೇಶಕರು ಹಿರಿಯೂರು	2016-17 - 2018-2019.	14-1-2020	- ಅದೇ-
7.	ಸಹಾಯಕ ಕೃಷಿ ನಿರ್ದೇಶಕರು ಚಳ್ಳಕೆರೆ	2017-18	14-1-2020.	- ಅದೇ-
8	ಸಹಾಯಕ ಕೃಷಿ ನಿರ್ದೇಶಕರು ಗುಬ್ಬಿ	2017-18	18-1-2020	- ಅದೇ-

ಅ. 2. ಸಸ್ಯ ಸಂರಕ್ಷಣಾ ವಿಭಾಗಕ್ಕೆ ಸಂಬಂಧಿಸಿದ ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದ ವಿವರ

2014

1 ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದ ವಿವರ

ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಸಲ್ಲಿಸಲಾಗಿರುವ 26 ರಿಟ್ ಪಿಟಿಷನ್‌ಗಳು

ಕ್ರ. ಸಂ	ಪಿಟಿಷನರ್	ರಿಟ್ ಅರ್ಜಿ ಸಂಖ್ಯೆ.
1.	ಅಗ್ರೋಸಿಂತ್ ಕೆಮಿಕಲ್ಸ್ ಲಿ.	ರಿ.ಪಿ.ಸಂ. 737/2018
2.	ಆಮ್ ಶ್ರಿ ಕೆಮಿಕಲ್ಸ್ ಲಿ	ರಿ.ಪಿ.ಸಂ 44213–44215/2013 (GM-RES)
3.	ಭುವಿ ಕ್ರಾಪ್ ಸೈನ್ಸ್	ರಿ.ಪಿ.ಸಂ. 46650//2013 (GM-RES)

4.	ಕೋರಮಂಡಲ್ ಅಗ್ರೋ ಕೆಮಿಕಲ್ ಇಂಡಸ್ಟ್ರೀಸ್	ರಿ.ಪಿ.ಸಂ. 46963/2013 (GM-RES)
5.	ಕ್ರಾಪೆಕ್ಸ್ ಬಯೋ ಕೆಮಿಕಲ್ಸ್	ರಿ.ಪಿ.ಸಂ 50196/2013 (GM-RES)
6.	ದೇವಿ ಕ್ರಾಪ್ ಸೈನ್ಸ್ ಪ್ರೈ ಲಿ.	ರಿ.ಪಿ.ಸಂ 46308–311 & 46315–317/ 2013
7.	ಫರ್ಟೈಲ್ ಅಗ್ರೋ ಕೆಮ್ ಲಿ	ರಿ.ಪಿ.ಸಂ. 50021/2013 (GM-RES)
8.	ಫ್ಯೂಚುರಾ ಅಗ್ರೋ ಕೆಮಿಕಲ್ಸ್	ರಿ.ಪಿ.ಸಂ. 46736/2013 (GM-RES)
9.	ಜಿ ಐ ಎ ಕ್ರಾಪ್ ಕೇರ್	ರಿ.ಪಿ.ಸಂ. 45517–45517/2013 (GM-RES)
10.	ಹ್ಯಾಪಿ ಲ್ಯಾಂಡ್ಸ್ ಅಗ್ರೋ ಇನ್ಪುಟ್ಸ್ ಪ್ರೈ ಲಿ	ರಿ.ಪಿ.ಸಂ 50022/2013 (GM-RES)
11.	ಹಿಂದುಸ್ಥಾನ್ ಅಗ್ರೋ ಇನ್‌ಸೆಕ್ಟಿಸೈಡ್ಸ್	ರಿ.ಪಿ.ಸಂ. 48737/2013 (GM-RES)
12.	ಇಮೇಜ್ ಕ್ರಾಪ್ ಸೈನ್ಸಸ್	ರಿ.ಪಿ.ಸಂ 49241/2013 (GM-RES)
13.	ಇಂಡಸ್ ವ್ಯಾಲಿ ಕ್ರಾಪ್ ಟೆಕ್ನಾಲಾಜಿ	ರಿ.ಪಿ.ಸಂ. 57353/2013 (GM-RES)
14.	ಕಾರಾಪುರ್ ಅಗ್ರೊ ಪ್ರೈ ಲಿ	ರಿ.ಪಿ.ಸಂ 40407–40410/2013 (GM-RES)
15.	ಕಾವೇರಿ ಸೀಡ್ ಕಂಪನಿ ಲಿ	ರಿ.ಪಿ.ಸಂ 48771–48772/2013 (GM-RES)
16.	ಲಕ್ಷ್ಮಿ ಅಗ್ರೋ ಇಂಡಸ್ಟ್ರೀಸ್	ರಿ.ಪಿ.ಸಂ 50020/2013 (GM-RES)
17.	ಮಾ ಬಯೋ ಸೈನ್ಸ್‌ಸ್ & ಟೆಕ್ನಾಲಜೀಸ್	ರಿ.ಪಿ.ಸಂ. 50154/2013 (GM-RES)
18.	ಮಾಡ್ರನ್ ಅಗ್ರೋ & ಕೆಮಿಕಲ್ ಇಂಡಸ್ಟ್ರೀಸ್	ರಿ.ಪಿ.ಸಂ. 46962/2013 (GM-RES)
19.	ನಕಾಸ ಕ್ರಾಪ್ ಸೈನ್ಸ್ ಪ್ರೈ ಲಿ	ರಿ.ಪಿ.ಸಂ 46739/2013 (GM-RES)
20.	ಸೃಷ್ಟಿ ಅಗ್ರೋ ಸೈನ್ಸ್	ರಿ.ಪಿ.ಸಂ. 103251/2013 (GM-RES)
21.	ಸಿಗ್ಮ ಅಗ್ರೋಕೇರ್ ಪ್ರಾಡಕ್ಟ್ಸ್ ಪ್ರೈ ಲಿ.	ರಿ.ಪಿ.ಸಂ. 46734/2013 (GM-RES)
22.	ಶ್ರಿಕರ್ ಬಯೋಟೆಕ್ ಪ್ರೈ ಲಿ	ರಿ.ಪಿ.ಸಂ. 46282/2013 (GM-RES)
23.	ಸುದರ್ಶನ್ ಅಗ್ರೋ & ಬೈಯೋ ಕೆಮಿಕಲ್ಸ್	ರಿ.ಪಿ.ಸಂ 48740/2013 (GM-RES)
24.	ಸಿನರ್ಜಿ ಅಗ್ರಿ ಸೈನ್ಸ್ ಸ್	ರಿ.ಪಿ.ಸಂ 46973/2013 (GM-RES)
25.	ಥಾಮಿನಿ ಬಯೋ ಕೇರ್	ರಿ.ಪಿ.ಸಂ 48768–48770/2013 (GM-RES)

	26.	ವಿಠಲ್ ಅಗ್ರಿ ಸೊಲ್ಯೂಷನ್ಸ್	ರಿ.ಪಿ.ಸಂ 46649/2013 (GM-RES)
	ವಿಷಯ: ನೋಂದಣಿಯಾಗದ ಜೈವಿಕ ಪೀಡೆನಾಶಕಗಳು ಹಾಗೂ ಜೈವಿಕ ಗೊಬ್ಬರಗಳ ಮಾರಾಟದ ಬಗ್ಗೆ		
	ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪಿಟಿಷನ್‌ರ್‌ಗಳು ಜೈವಿಕ ಉತ್ಪನ್ನಗಳ ಮಾರಾಟದಲ್ಲಿ ಎದುರುದಾರರು ಅಡ್ಡಿಪಡಿಸಬಾರದೆಂದು ರಿಟ್ ಪಿಟಿಷನ್ ಸಲ್ಲಿಸಿರುತ್ತಾರೆ.		

1	ಕರ್ನಾಟಕ ಸರ್ಕಾರ-ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಕೃಷಿ ನಿರ್ದೇಶಕರು ಹಾಗೂ ಇತರರು ಎದುರುದಾರರಾಗಿರುತ್ತಾರೆ.
2	ಎದುರುದಾರರ ಪರವಾಗಿ ಕಂಡಿಕೆವಾರು ಉತ್ತರಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. ನ್ಯಾಯಾಲಯದ ಆದೇಶದಂತೆ ಮೇಲಿನ ಎಲ್ಲಾ ರಿಟ್ ಪಿಟಿಷನ್‌ಗಳ ವಿಚಾರಣೆಯನ್ನು ಜೊತೆಗೂಡಿಸಲಾಗಿರುತ್ತದೆ.
3.	ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಸಲ್ಲಿಸಲಾಗಿರುವ ರಿಟ್ ಪಿಟಿಷನ್ ಸಂ: 51734/2013 (ಉಒ-ಖಇS) ಆಫ್ ಮೆ. ಮೈಕ್ರೋಟೆಕ್ ಅಗ್ರೋ ಇಂಡಿಯಾ ಲಿ., ದಾವಣಗೆರೆ ಮತ್ತು ರಿಟ್ ಪಿಟಿಷನ್ ಸಂ: 51735/2013 (ಉಒ-ಖಇS) ಆಫ್ ಮೆ. ಚೈತ್ರ ಫರ್ಟಿಲೈಸರ್ಸ್ ಅಂಡ್ ಕೆಮಿಕಲ್ಸ್ ಪ್ರೈ.ಲಿ., ಮೈಸೂರು ಇವರಿಂದ
	ವಿಷಯ: ಕೃಷಿ ವಿಸ್ತøತ ಯೋಜನೆ-ವರ್ಕ್ ಪ್ಲಾನ್ ಅಡಿ ಜೈವಿಕ ನಿಯಂತ್ರಣ ಪ್ರಯೋಗಾಲಯಗಳ ಸ್ಥಾಪನೆಗೆ ಸಹಾಯಾನುದಾನ ನೀಡುವ ಬಗ್ಗೆ.
	ಎರಡನೇ ಕಂತಿನ ಅನುದಾನಕ್ಕಾಗಿ ಕೋರುತ್ತಾ, ಸಂಬಂಧಪಟ್ಟವರಿಗೆ ಆದೇಶ ನೀಡುವಂತೆ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಲ್ಲಿಸಿರುತ್ತಾರೆ.
	ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರ-ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಆಯುಕ್ತರು ಮತ್ತು ಕೃಷಿ ನಿರ್ದೇಶಕರು ಎದುರುದಾರರಾಗಿರುತ್ತಾರೆ.
	3ನೇ ಮತ್ತು 4 ನೇ ಎದುರುದಾರರಾದ ಕ್ರಮವಾಗಿ ಕೃಷಿ ಆಯುಕ್ತರು ಮತ್ತು ಕೃಷಿ ನಿರ್ದೇಶಕರ ಪರವಾಗಿ ಕಂಡಿಕೆವಾರು ಉತ್ತರಗಳನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದ್ದು ಪ್ರಕರಣವು ವಿಚಾರಣೆ ಹಂತದಲ್ಲಿರುತ್ತದೆ. ನ್ಯಾಯಾಲಯದ ಆದೇಶದಂತೆ ಎರಡೂ ರಿಟ್ ಪಿಟಿಷನ್‌ಗಳ ವಿಚಾರಣೆಯನ್ನು ಜೊತೆಗೂಡಿಸಲಾಗಿರುತ್ತದೆ.

ಇ.) ಮಾಹಿತಿ ಹಕ್ಕು ಕಾಯ್ದೆಯಡಿ ಸ್ವೀಕೃತವಾದ ಮನವಿಗಳ ವಿವರ:-

2019–20ನೇ ಸಾಲಿನಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೋರಿ 131 ಅರ್ಜಿಗಳು ಸ್ವೀಕೃತವಾಗಿರುತ್ತದೆ. ಹಿಂದಿನ ಬಾಕಿ ಇರುವುದಿಲ್ಲ.. ಇವುಗಳಲ್ಲಿ 131 ಅರ್ಜಿಗಳಿಗೆ ಮಾರ್ಚ್ 2020 ರ ಅಂತ್ಯಕ್ಕೆ ಮಾಹಿತಿ ಒದಗಿಸಲಾಗಿದೆ. ಹಾಗೂ ಅರ್ಜಿಗಳು ಬಾಕಿ ಇರುವುದಿಲ್ಲ. ಯಾವುದೇ ಅರ್ಜಿ ತಿರಸ್ಕೃತವಾಗಿರುವುದಿಲ್ಲ. ಹಾಗೂ ಸದರಿ ಸಾಲಿನಲ್ಲಿ ಮಾಹಿತಿ ಶುಲ್ಕ ರೂ.7170/– ಸಂಗ್ರಹವಾಗಿದ್ದು ಸರ್ಕಾರಕ್ಕೆ ಜಮಾ ಮಾಡಲಾಗಿದೆ.

1	ಹಿಂದಿನ ಬಾಕಿ	0
2	2019–20 ನೇ ಮಾರ್ಚ್ 2020 ರ ಅಂತ್ಯಕ್ಕೆ	86
3	ಇತರೆ(ವರ್ಗಾವಣೆ)	45
	ಒಟ್ಟು	131

ಈ. 2019–20 ನೇ ಸಾಲಿನ ಕೃಷಿ ಉತ್ಪಾದನಾ ಕಾರ್ಯಕ್ರಮದ ಸಂಕ್ಷಿಪ್ತ ವರದಿ

2019-20 ನೇ ಸಾಲಿನಲ್ಲಿ ಸಮರ್ಪಕ ಹಂಚಿಕೆಯುಕ್ತ ಪೂರ್ವ ಮುಂಗಾರು, ನೈಋತ್ಯ ಮಾರುತ ಹಾಗೂ ಈಶಾನ್ಯ ಮಾರುತಗಳನ್ನು ಅಪೇಕ್ಷಿಸಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಕ್ರಮವಾಗಿ 76.69, 31.48 ಹಾಗೂ 5.50 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಯುವ ಗುರಿಯನ್ನು ಪ್ರಸ್ತಾಪಿಸಲಾಗಿತ್ತು. ಏಕದಳ, ದ್ವಿದಳ ಹಾಗೂ ಎಣ್ಣೆಕಾಳು ಬೆಳೆಗಳ ಉತ್ಪಾದನಾ ಗುರಿಯನ್ನು ಕ್ರಮವಾಗಿ 117.22, 21.45 ಮತ್ತು 14.71 ಲಕ್ಷ ಟನ್ ಎಂದು ಪ್ರಸ್ತಾಪಿಸಲಾಗಿತ್ತು. ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು ಮತ್ತು ತಂಬಾಕು ಬೆಳೆಗಳ ಉತ್ಪಾದನಾ ಗುರಿಯನ್ನು ಕ್ರಮವಾಗಿ 16.58 ಲಕ್ಷ ಬೇಲ್, 400 ಲಕ್ಷ ಟನ್ ಹಾಗೂ 0.72 ಲಕ್ಷ ಟನ್ (0.62 ಲಕ್ಷ ಟನ್ VFC ಹಾಗೂ 0.10 ಲಕ್ಷ ಟನ್ Beedi Tobacco) ಎಂದು ನಿಗಧಿಪಡಿಸಲಾಗಿತ್ತು.

ನೈಋತ್ಯ ಮಾರುತ:

ನೈರುತ್ಯ ಮಾರುತ ಮಳೆಯ ಅವಧಿಯಲ್ಲಿ (ಜೂನ್– ಸೆಪ್ಟಂಬರ್) ರವರೆಗೆ ಸಾಮಾನ್ಯ ಮಳೆ 839 ಮೀ.ಮೀ. ಪ್ರತಿಯಾಗಿ ವಾಸ್ತವಿಕ ಮಳೆ 977 ಮೀ.ಮೀ. ಆಗಿರುತ್ತದೆ.(ಶೇ.+16).

ಈಶಾನ್ಯ ಮಾರುತ ಮಳೆ:

ಈಶಾನ್ಯ ಮಾರುತ ಮಳೆಯ ಅವಧಿಯಲ್ಲಿ (ಅಕ್ಟೋಬರ್–ಡಿಸೆಂಬರ್) ರವರೆಗೆ ಸಾಮಾನ್ಯ ಮಳೆ 188 ಮಿ.ಮೀ. ಪ್ರತಿಯಾಗಿ ವಾಸ್ತವಿಕ ಸರಾಸರಿ ಮಳೆ 288ಮಿ.ಮೀ. ಆಗಿರುತ್ತದೆ. (+54%).

ಒಟ್ಟಾರೆ 2019ನೇ ಸಾಲಿನಲ್ಲಿ ರಾಜ್ಯದಲ್ಲಿ, 31–12–2019 ಅಂತ್ಯಕ್ಕೆ 1155 ಮಿ.ಮೀ. ಸಾಮಾನ್ಯ ಮಳೆಗೆ ಪ್ರತಿಯಾಗಿ 1340 ಮಿ.ಮೀ. ಮಳೆಯಾಗಿರುತ್ತದೆ. (+16%)

ಆಗಸ್ಟ್ ಮಾಹೆಯಲ್ಲಿ ಬಿದ್ದಂತಹ ಹೆಚ್ಚಿನ ಮಳೆ 370 ಮೀ.ಮೀ ಸಾಮನ್ಯ ಮಳೆಗೆ ಪ್ರತಿಯಾಗಿ 370 ಮೀ.ಮೀ ಮಳೆಯಾಗಿರುತ್ತದೆ. ರಾಜ್ಯದ ಕಂದಾಯ ಇಲಾಖೆಯ ಪ್ರಕಟಣೆಯಂತೆ 2019ರ ಮುಂಗಾರು ಹಂಗಾಮಿನಲ್ಲಿ 22 ಜಿಲ್ಲೆಗಳ 103 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ ಹಾಗೂ 18 ಜಿಲ್ಲೆಗಳ 49 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. ಸೆಪ್ಟಂಬರ್ ಮಾಹೆಯ ಮಳೆ ಸಾಮಾನ್ಯ 159 ಮೀ.ಮೀ ಗೆ ಪ್ರತಿಯಾಗಿ 219 ಮೀ.ಮೀ ಮಳೆಯಾಗಿರುತ್ತದೆ ಹಾಗೆಯೇ ಅಕ್ಟೋಬರ್ ಸಾಲಿನಲ್ಲಿ ಸಾಮನ್ಯ ಮಳೆ 136 ಮೀ.ಮೀ ಗೆ ಪ್ರತಿಯಾಗಿ 247 ಮೀ.ಮೀ ಮಳೆಯಾಗಿರುತ್ತದೆ. ಆದುದರಿಂದ ಸೆಪ್ಟಂಬರ್ ಮತ್ತು ಅಕ್ಟೋಬರ್ ನಲ್ಲಿ ಬಿದ್ದಂತಹ ಹೆಚ್ಚಿನ ಮಳೆಯಿಂದಾಗಿ 18 ಜಿಲ್ಲೆಗಳ 79 ತಾಲ್ಲೂಕುಗಳನ್ನು ಹೆಚ್ಚಿನ ಮಳೆ/ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

ಪೂರ್ವ ಮುಂಗಾರು ಹಾಗೂ ನೈರುತ್ಯ ಮಾರುತ ಅವಧಿಯಲ್ಲಿ ಮಾಹೆವಾರು ವಾಡಿಕೆ/ವಾಸ್ತವಿಕ ಮಳೆ ಹಾಗೂ ತಾಲ್ಲೂಕುವಾರು ಹಂಚಿಕೆ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಕ್ರ ಸಂ	ಮಾಹೆ	ವರ್ಗೀಕರಣ–ತಾಲ್ಲೂಕುಗಳ ಸಂಖ್ಯೆ					(ಮಿ.ಮಿ)		
1	ಏಪ್ರಿಲ್	ಅಧಿಕ	ಸಾಮಾನ್ಯ	ಕಡಿಮೆ	ಅತ್ಯಲ್ಪ	ಮಳೆ ಇಲ್ಲಿ	ವಾಡಿಕೆ	ವಾಸ್ತವಿಕ	ವರ್ಗ
2	ಮೇ	**15**	**42**	**92**	**27**	**0**	**35**	**26**	ಕಡಿಮೆ
	ಪೂರ್ವ ಮುಂಗಾರು						**125**	**71**	ಕಡಿಮೆ
	ಜೂನ್	**9**	**37**	**54**	**76**	**0**	**83**	**43**	ಕಡಿಮೆ
	ಜುಲೈ	**41**	**59**	**71**	**5**	**0**	**195**	**142**	ಕಡಿಮೆ
	ಆಗಸ್ಟ್	**20**	**62**	**93**	**1**	**0**	**280**	**247**	ಹೆಚ್ಚು
	ಸೆಪ್ಟಂಬರ್	**114**	**27**	**29**	**6**	**0**	**206**	**370**	ಹೆಚ್ಚು
	ನೈರುತ್ಯ ಮಾರುತ*	**63**	**82**	**31**	**0**	**0**	**159**	**219**	ಹೆಚ್ಚು
	ನೈರುತ್ಯ ಮಾರುತ (ಜೂನ್ ರಿಂದ ಸೆಪ್ಟಂಬರ್ ವರೆಗೆ)								

ಬೆಳೆ ವಿಸ್ತೀರ್ಣ:

ಮುಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳ ವಿಸ್ತೀರ್ಣದ ಗುರಿ 76.69 ಲಕ್ಷ ಹೆಕ್ಟೇರ್ ಇದ್ದು, 68.84 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ (ಶೇಕಡ 90) ಬಿತ್ತನೆ ಕೈಗೊಳ್ಳಲಾಗಿರುತ್ತದೆ. ಸಾಮಾನ್ಯ ಮುಂಗಾರು ಬಿತ್ತನೆ ವಿಸ್ತೀರ್ಣ 67.16 ಲಕ್ಷ ಹೆಕ್ಟೇರ್‌ರಷ್ಟು ಇರುತ್ತದೆ ಮತ್ತು ಹಿಂದಿನ ವರ್ಷದಲ್ಲಿ 66.43 ಲಕ್ಷ ಹೆಕ್ಟೇರ್ ಬಿತ್ತನೆ ಪ್ರಗತಿಯಾಗಿರುತ್ತದೆ.

ಬರಗಾಲ ಘೋಷಣೆ:

2019ರ ಮುಂಗಾರು ಹಂಗಾಮಿನಲ್ಲಿ ಮಳೆಯ ಅಭಾವ, ಒಣ ಹವೆ ಅವಧಿ ಮತ್ತು ತೇವಾಂಶ ಕೊರತೆಯ ಆಧಾರದ ಮೇಲೆ ಸರ್ಕಾರ 49ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಘೋಷಿಸಿರುತ್ತದೆ.

ಆಗಸ್ಟ್ ಮಾಹೆಯಲ್ಲಿ ಬಿದ್ದಂತಹ ಹೆಚ್ಚಿನ ಮಳೆ 206 ಮೀ.ಮೀ ಸಾಮಾನ್ಯ ಮಳೆಗೆ ಪ್ರತಿಯಾಗಿ 370 ಮೀ.ಮೀ ಮಳೆಯಾಗಿರುತ್ತದೆ. ರಾಜ್ಯದ ಕಂದಾಯ ಇಲಾಖೆಯ ಪ್ರಕಟಣೆಯಂತೆ 2019ರ ಮುಂಗಾರು ಹಂಗಾಮಿನಲ್ಲಿ 22 ಜಿಲ್ಲೆಗಳ 103 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ. ಸೆಪ್ಟಂಬರ್ ಮಾಹೆಯ ಮಳೆ ಸಾಮಾನ್ಯ 159 ಮೀ.ಮೀ ಗೆ ಪ್ರತಿಯಾಗಿ 219 ಮೀ.ಮೀ ಮಳೆಯಾಗಿರುತ್ತದೆ ಹಾಗೆಯೇ ಅಕ್ಟೋಬರ್ ಸಾಲಿನಲ್ಲಿ ಸಾಮನ್ಯ ಮಳೆ 136 ಮೀ.ಮೀ ಗೆ ಪ್ರತಿಯಾಗಿ 247 ಮೀ.ಮೀ ಮಳೆಯಾಗಿರುತ್ತದೆ. ಆದುದರಿಂದ ಸೆಪ್ಟಂಬರ್ ಮತ್ತು ಅಕ್ಟೋಬರ್ ನಲ್ಲಿ ಬಿದ್ದಂತಹ ಹೆಚ್ಚಿನ ಮಳೆಯಿಂದಾಗಿ 18 ಜಿಲ್ಲೆಗಳ 79 ತಾಲ್ಲೂಕುಗಳನ್ನು ಹೆಚ್ಚಿನ ಮಳೆ/ಪ್ರವಾಹ ಪೀಡಿತ ತಾಲ್ಲೂಕುಗಳೆಂದು ಘೋಷಿಸಲಾಗಿದೆ.

ಹಿಂಗಾರು:

ಹಿಂಗಾರು ಬೆಳೆ ಕಾರ್ಯಕ್ರಮ ಮಣ್ಣಿನ ತೇವಾಂಶ ಹಾಗೂ ಅಕ್ಟೋಬರ್ರಿಂದ ಡಿಸೆಂಬರ್ ಮಾಹೆಯವರೆಗೂ ಈಶಾನ್ಯ ಮಾರುತ ಮಳೆಯ ಮೇಲೆ ಅವಲಂಬಿತವಾಗಿರುತ್ತದೆ. ಹಿಂಗಾರು ಹಂಗಾಮಿನ ಒಟ್ಟು ವಿಸ್ತೀರ್ಣದಲ್ಲಿ ಶೇ. 90 ರಷ್ಟು ಪಾಲು ರಾಜ್ಯದ ಉತ್ತರ ಜಿಲ್ಲೆಗಳಲ್ಲಿ ಇರುತ್ತದೆ.

ಹಿಂಗಾರು ಹಂಗಾಮಿನಲ್ಲಿ ವಿವಿಧ ಕೃಷಿ ಬೆಳೆಗಳನ್ನು 31.48 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆ ಗುರಿಗೆ 27.66 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿರುತ್ತದೆ. (ಶೇ.88)

ಈಶಾನ್ಯ ಮಾರುತ:

ಅಕ್ಟೋಬರ್ ಮಾಹೆಯಲ್ಲಿ ರಾಜ್ಯದಲ್ಲಿ ಸಾಮಾನ್ಯ ಮಳೆ 136 ಮಿ.ಮೀ.ಗೆ ಪ್ರತಿಯಾಗಿ ವಾಸ್ತವಿಕ ಸರಾಸರಿ ಮಳೆಯ ಪ್ರಮಾಣ 247 ಮಿ.ಮೀ.ರಷ್ಟಾಗಿ ಹೆಚ್ಚಿನ ಮಳೆಯಾಗಿರುತ್ತದೆ.

ನವೆಂಬರ್ ಮಾಹೆಯಲ್ಲು ಸಹ ರಾಜ್ಯದಲ್ಲಿ ಮಳೆಯ ಪ್ರಮಾಣ ಸಾಮಾನ್ಯ ಮಳೆ 82 ಮಿ.ಮೀ. ಗೆ ಪ್ರತಿಯಾಗಿ ವಾಸ್ತವಿಕ ಸರಾಸರಿ ಮಳೆ 41 ಮಿ.ಮೀ.ರಷ್ಟಾಗಿದ್ದು ಹಿಂಗಾರು ಬೆಳೆಗಳಿಗೆ ಹೆಚ್ಚಿನ ತೇವಾಂಶವಿದ್ದು ಬಿತ್ತನೆ ತಡವಾಗಿರುತ್ತದೆ.

ಡಿಸೆಂಬರ್ ಮಾಹೆಯಲ್ಲಿ ಸಾಮಾನ್ಯ ಮಳೆ 10 ಮಿ.ಮೀ.ಗೆ ಪ್ರತಿಯಾಗಿ ವಾಸ್ತವಿಕ ಸರಾಸರಿ ಮಳೆಯ ಪ್ರಮಾಣ 12 ಮಿ.ಮೀ. ರಷ್ಟಾಗಿರುತ್ತದೆ.

2019 ರ ಅಕ್ಟೋಬರ್ 1 ರಿಂದ ಡಿಸೆಂಬರ್ 31 ರವರೆಗೆ ವಾಡಿಕೆ ಮಳೆ 188 ಮಿ.ಮೀ.ಗೆ ಪ್ರತಿಯಾಗಿ 288 ಮಿ.ಮೀ.ರಷ್ಟಾಗಿರುತ್ತದೆ (+54%). ಈಶಾನ್ಯ ಮಾರುತ ಅವಧಿಯಲ್ಲಿ ಮಳೆಯ ಪ್ರಮಾಣ 44 ತಾಲ್ಲೂಕುಗಳಲ್ಲಿ ಸಾಮಾನ್ಯರಷ್ಟು, 7 ತಾಲ್ಲೂಕುಗಳಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಹಾಗೂ ಉಳಿದ 1 ತಾಲ್ಲೂಕುನಲ್ಲಿ ಸಾಮಾನ್ಯಕ್ಕಿಂತ ಅತ್ಯಲ್ಪವಾಗಿರುತ್ತದ್ದು 124 ತಾಲ್ಲೂಕುಗಳಲ್ಲಿ ಹೆಚ್ಚಿನ ಮಳೆಯಾಗಿರುತ್ತದೆ.

2019–20 ಹಿಂಗಾರು ಹಂಗಾಮಿನಲ್ಲಿ ಮಾಹೆವಾರು ವಾಡಿಕೆ/ವಾಸ್ತವಿಕ ಮಳೆ ವಿವರ:

ಕ್ರ ಸಂ	ಮಾಹೆ	ವರ್ಗೀಕರಣ–ತಾಲ್ಲೂಕುಗಳ ಸಂಖ್ಯೆ					(ಮಿ.ಮಿ)		
		ಅಧಿಕ	ಸಾಮಾನ್ಯ	ಕಡಿಮೆ	ಅತ್ಯಲ್ಪ	ಮಳೆ ಇಲ್ಲಿ	ವಾಡಿಕೆ	ವಾಸ್ತವಿಕ	ವರ್ಗ
1	ಅಕ್ಟೋಬರ್	**142**	**29**	**4**	**1**	**0**	**136**	**247**	ಹೆಚ್ಚು
2	ನವೆಂಬರ್	**19**	**38**	**70**	**49**	**0**	**41**	**29**	ಸಾಮಾನ್ಯ
3	ಡಿಸೆಂಬರ್	**49**	**27**	**55**	**45**	**0**	**10**	**12**	ಸಾಮಾನ್ಯ
	ಈಶಾನ್ಯ ಮಾರುತ*	**124**	**44**	**7**	**1**	**0**	**188**	**288**	ಹೆಚ್ಚು
	*ಈಶಾನ್ಯ ಮಾರುತ (ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ)								

ಬೆಳೆ ವಿಸ್ತೀರ್ಣ:

ಹಿಂಗಾರು ಬೆಳೆಗಳ ಬಿತ್ತನೆ ಗುರಿ 31.48 ಲಕ್ಷ ಹೆಕ್ಟೇರ್‌ಗೆ ಪ್ರತಿಯಾಗಿ ಡಿಸೆಂಬರ್ ಅಂತ್ಯಕ್ಕೆ 27.66 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆಯಾಗಿ ಶೇ. 88 ರಷ್ಟು ಪ್ರಗತಿಯಾಗಿರುತ್ತದೆ. ಹಿಂಗಾರು ಹಂಗಾಮಿನಲ್ಲಿ ಸಾಮಾನ್ಯ ಬಿತ್ತನೆ ಕ್ಷೇತ್ರ 30.07 ಲಕ್ಷ ಹೆಕ್ಟೇರ್ ಹಾಗೂ ಹಿಂದಿನ ವರ್ಷದ ಬಿತ್ತನೆ ಪ್ರಗತಿ 27.89 ಲಕ್ಷ ಹೆಕ್ಟೇರ್‌ನಷ್ಟಿರುತ್ತದೆ.

ಬೇಸಿಗೆ ಹಂಗಾಮು:

ರಾಜ್ಯದಲ್ಲಿ ಸಾಮಾನ್ಯವಾಗಿ ಬೇಸಿಗೆ ಬೆಳೆಗಳನ್ನು ವಿವಿಧ ನೀರಾವರಿ ಮೂಲಗಳ ಅಡಿಯಲ್ಲಿ ಸುಮಾರು 5.50 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದೆ. ಬೇಸಿಗೆ ಬೆಳೆಗಳ ಬಿತ್ತನೆ ಡಿಸೆಂಬರ್ ನಿಂದ ಪ್ರಾರಂಭವಾಗಿ (ಉತ್ತರ ಜಿಲ್ಲೆಗಳ ಕೆಲವು ಭಾಗಗಳಲ್ಲಿ ಹಿಂಗಾರು/ಬೇಸಿಗೆ ಹಂಗಾಮಿನ ಶೇಂಗಾ ಅಕ್ಟೋಬರ್ 2ನೇ ಪಾಕ್ಷಿಕದಲ್ಲಿ) ಮಾರ್ಚ್ ಮಾಹೆಯ ಮಧ್ಯದಲ್ಲಿ ಪೂರ್ಣಗೊಳ್ಳುತ್ತದೆ. ಬೇಸಿಗೆ ಬೆಳೆಗಳ ಉತ್ಪಾದನೆ ಪ್ರಮುಖ ಜಲಾಶಯಗಳಲ್ಲಿ, ಮಧ್ಯಮ/ಸಣ್ಣ ನೀರಾವರಿ ಕೆರೆಗಳಲ್ಲಿ ನೀರಿನ ಲಭ್ಯತೆ ಹಾಗೂ ಸಾಕಷ್ಟು ವಿದ್ಯುಚ್ಛಕ್ತಿ ಸರಬರಾಜಿನ ಮೇಲೆ ಅವಲಂಬಿಸಿರುತ್ತದೆ. ಬೇಸಿಗೆ ಹಂಗಾಮಿನಲ್ಲಿ 5.50 ಲಕ್ಷ ಹೆಕ್ಟೇರ್ ಬಿತ್ತನೆ ಗುರಿಗೆ 5.05 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡಲಾಗಿದೆ ಹಾಗೂ ಹಿಂದಿನ ವರ್ಷದ ಬಿತ್ತನೆ ಪ್ರಗತಿ 2.81 ಲಕ್ಷ ಹೆಕ್ಟೇರ್‌ನಷ್ಟಿರುತ್ತದೆ

ನಿರೀಕ್ಷಿತ ಉತ್ಪಾದನೆ:

ರಾಜ್ಯದಲ್ಲಿ ಶೇ. 66 ರಷ್ಟು ಸಾಗುವಳಿ ವಿಸ್ತೀರ್ಣ ಮಳೆಯ ಮೇಲೆ ಅವಲಂಬಿಸಿರುವ ಹಿನ್ನೆಲೆಯಲ್ಲಿ ಮತ್ತು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ 3ನೇ ಮುಂಗಡದ ಅಂದಾಜುಗಳ ಪ್ರಕಾರ ಏಕದಳ ಧಾನ್ಯಗಳು, ದ್ವಿದಳ ಧಾನ್ಯಗಳು ಮತ್ತು ಎಣ್ಣೆಕಾಳುಗಳ ಉತ್ಪಾದನಾ ಗುರಿ – 117.22, 21.45 ಮತ್ತು 14.71 ಲಕ್ಷ ಟನ್‌ಗೆ ಎದುರಾಗಿ ಕ್ರಮವಾಗಿ 105.36, 19.58 ಮತ್ತು 10.15 ಲಕ್ಷ ಟನ್ ಅಂದಾಜಿಸಲಾಗಿದೆ.

ಬೆಳೆವಾರು ವಿಸ್ತೀರ್ಣ ಮತ್ತು ಉತ್ಪಾದನೆ ಗುರಿ ಹಾಗೂ ಉತ್ಪಾದನಾ ಅಂದಾಜುಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

2020–21ನೇ ಸಾಲಿನ ಕೃಷಿ ಉತ್ಪಾದನಾ ಕಾರ್ಯಕ್ರಮ

2010–11 ರಿಂದ 2019–20ನೇ ಸಾಲಿನವರೆಗೆ ವಿವಿಧ ಹಂಗಾಮುಗಳಲ್ಲಿ ಕೃಷಿ ಬೆಳೆಗಳ ವಿಸ್ತೀರ್ಣ ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ವಿವಿಧ ಹಂಗಾಮುಗಳಲ್ಲಿ ಕೃಷಿ ಬೆಳೆಗಳಿಂದ ಆವರಿಸಿದ ವಿಸ್ತೀರ್ಣವನ್ನು ಪರಿಗಣಿಸಿ ಮತ್ತು 2020–21 ನೇ ಸಾಲಿನಲ್ಲಿ ಸಮರ್ಪಕ ಹಂಚಿಕೆಯ ಪೂರ್ವ ಮುಂಗಾರು, ನೈಋತ್ಯ ಮಾರುತ ಹಾಗೂ ಈಶಾನ್ಯ ಮಾರುತಗಳನ್ನು ಅಪೇಕ್ಷಿಸಿ ಮುಂಗಾರು, ಹಿಂಗಾರು ಮತ್ತು ಬೇಸಿಗೆ ಹಂಗಾಮುಗಳಲ್ಲಿ ಕ್ರಮವಾಗಿ 73.00, 32.00 ಹಾಗೂ 5.00 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ವಿವಿಧ ಕೃಷಿ ಬೆಳೆಗಳನ್ನು ಬೆಳೆಯುವ ಗುರಿಯನ್ನು ಪ್ರಸ್ತಾಪಿಸಲಾಗಿದೆ.

ಏಕದಳ, ದ್ವಿದಳ ಹಾಗೂ ಎಣ್ಣೆಕಾಳು ಬೆಳೆಗಳ ಉತ್ಪಾದನಾ ಗುರಿಯನ್ನು ಕ್ರಮವಾಗಿ 110.02, 23.02 ಮತ್ತು 13.05 ಲಕ್ಷ ಟನ್ ಎಂದು ಹಮ್ಮಿಕೊಳ್ಳಲಾಗಿದೆ. ವಾಣಿಜ್ಯ ಬೆಳೆಗಳಾದ ಹತ್ತಿ, ಕಬ್ಬು ಮತ್ತು ತಂಬಾಕು ಬೆಳೆಗಳ ಉತ್ಪಾದನಾ ಗುರಿಯನ್ನು ಕ್ರಮವಾಗಿ 13.89 ಲಕ್ಷ ಬೇಲ್, 400 ಲಕ್ಷ ಟನ್ ಹಾಗೂ 0.73 ಲಕ್ಷ ಟನ್ ಎಂದು ನಿಗಧಿಪಡಿಸಲಾಗಿದೆ.

ಅನುಭಂದ–1

ಕ್ರಸಂ	ಬೆಳೆಗಳು	ವಿಸ್ತೀರ್ಣ(ಲಕ್ಷ ಹೆ.)		ಉತ್ಪಾದನೆ(ಲಕ್ಷ ಹೆ.)	
		ಗುರಿ	ಸಾಧನೆ	ಗುರಿ	ಸಾಧನೆ
I	ಏಕದಳ ಧಾನ್ಯಗಳು				
1	ಅಕ್ಕಿ	**13.06**	**11.70**	**40.34**	**36.14**
2	ಜೋಳ	**11.33**	**8.00**	**14.01**	**8.91**
3	ರಾಗಿ	**7.45**	**6.27**	**12.61**	**11.21**
4	ಮುಸುಕಿನಜೋಳ	**13.82**	**13.14**	**45.37**	**43.97**
5	ಸಜ್ಜೆ	**2.22**	**2.41**	**2.66**	**2.77**
6	ಗೋಧಿ	**2.04**	**1.66**	**2.35**	**2.08**
7	ಸಿರಿಧಾನ್ಯಗಳು	**0.44**	**0.44**	**0.22**	**0.28**
8	ಒಟ್ಟು ಏಕದಳ ಧಾನ್ಯಗಳು	**50.35**	**43.62**	**117.22**	**105.36**

ಕ್ರಸಂ	ಬೆಳೆಗಳು	ವಿಸ್ತೀರ್ಣ(ಲಕ್ಷ ಹೆ.)		ಉತ್ಪಾದನೆ(ಲಕ್ಷ ಹೆ.)	
		ಗುರಿ	ಸಾಧನೆ	ಗುರಿ	ಸಾಧನೆ
II	ದ್ವಿದಳ ಧಾನ್ಯಗಳು				
1	ತೊಗರಿ	**11.89**	**12.35**	**9.81**	**8.65**
2	ಕಡಲೆ	**12.49**	**10.45**	**8.74**	**8.10**
3	ಹುರಳಿ	**1.91**	**1.52**	**0.96**	**0.94**
4	ಉದ್ದು	**1.05**	**0.64**	**0.45**	**0.27**
5	ಹೆಸರು	**4.15**	**2.93**	**1.44**	**0.88**
6	ಅಲಸಂದಿ ಮತ್ತು ಇತರೆ	**1.05**	**0.50**	**0.44**	**0.51**
7	ಅವರೆ	**0.79**	**0.64**	**0.68**	**0.24**
	ಒಟ್ಟು ದ್ವಿದಳ ಧಾನ್ಯಗಳು	**33.33**	**29.04**	**21.45**	**19.58**
	ಒಟ್ಟು ಆಹಾರ ಧಾನ್ಯಗಳು	**83.69**	**72.66**	**138.67**	**124.95**
III	ಎಣ್ಣೆಕಾಳು ಬೆಳೆಗಳು				
1	ನೆಲಗಡಲೆ	**8.45**	**5.51**	**7.77**	**5.63**
2	ಎಳ್ಳು	**0.50**	**0.22**	**0.32**	**0.17**
3	ಸೂರ್ಯಕಾಂತಿ	**3.32**	**1.45**	**2.06**	**0.99**
4	ಹರಳು	**0.16**	**0.05**	**0.13**	**0.04**
5	ಹುಚ್ಚೆಳ್ಳು	**0.15**	**0.04**	**0.04**	**0.01**
6	ಸಾಸುವೆ	**0.03**	**0.01**	**0.01**	**0.002**
7	ಸೋಯಾಅವರೆ	**3.24**	**2.85**	**4.04**	**3.14**
8	ಕುಸುಬೆ	**0.48**	**0.21**	**0.36**	**0.16**

ಕ್ರಸಂ	ಬೆಳೆಗಳು	ವಿಸ್ತೀರ್ಣ(ಲಕ್ಷ ಹೆ.)		ಉತ್ಪಾದನೆ(ಲಕ್ಷ ಹೆ.)	
		ಗುರಿ	ಸಾಧನೆ	ಗುರಿ	ಸಾಧನೆ
9	ಅಗಸೆ	**0.06**	**0.02**	**0.02**	**0.007**
	ಒಟ್ಟು ಎಣ್ಣೆಕಾಳುಗಳು	**16.38**	**10.36**	**14.71**	**10.15**
IV	ವಾಣಿಜ್ಯ ಬೆಳೆಗಳು				
1	ಹತ್ತಿ	**6.67**	**6.37**	**16.58**	**15.58**
2	ಕಬ್ಬು	**6.06**	**6.85**	**400.00**	**396.00**
3	ತಂಬಾಕು	**0.88**	**0.86**	**0.72**	**0.81**
	ಒಟ್ಟು ವಿಸ್ತೀರ್ಣ	**113.67**	**97.10**		

ಮೂಲ: *2019–20 ರ 3ನೇ ಅಂದಾಜು ವರದಿ, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ ಪ್ರಕಾರ

ಜಲಾನಯನ ಅಭಿವೃದ್ಧಿ ಇಲಾಖೆ

ವಾರ್ಷಿಕ ವರದಿ - 2019–20

ನಮ್ಮ ದೂರ ದೃಷ್ಟಿ

1. ಗ್ರಾಮೀಣ ಕರ್ನಾಟಕ ಭಾಗಗಳಲ್ಲಿ ಕೃಷಿ ಉತ್ಪಾಧನೆ ಹೆಚ್ಚಿಸುವ ದಿಶೆಯಲ್ಲಿ ಮಳೆಯಾಧಾರಿತ, ಅವನತಿ ಹೊಂದಿದ ಭೂಮಿಗಳಲ್ಲಿ ಭೂಸಂಪನ್ಮೂಲಗಳ ಸುಸ್ಥಿರತೆ ಅಭಿವೃದ್ಧಿಪಡಿಸುವುದು.
2. ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನ ಸಹಭಾಗಿತ್ವದೊಂದಿಗೆ ಸುಸ್ಥಿರತೆ ಅಭಿವೃದ್ಧಿ ಸಾಧಿಸುವುದು ಹಾಗೂ ಮಳೆಯಾಧಾರಿತ, ಅವನತಿ ಹೊಂದಿದ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಜೀವನಾಧಾರಿತ ಉದ್ಯೋಗಾವಕಾಶಗಳನ್ನು ವೃದ್ಧಿಸುವುದು.

ನಮ್ಮ ಧ್ಯೇಯ

ಜನರ ಸಹಭಾಗಿತ್ವದ, ವಿಕೇಂದ್ರೀಕೃತ, ಕಡಿಮೆ ವೆಚ್ಚ, ಅಧಿಕ ಉತ್ಪಾದಿತ, ಪಾರದರ್ಶಕ ಮತ್ತು ಸುಸ್ಥಿರ ಜಲಾನಯನ ಅಭಿವೃದ್ಧಿ ಉಪಚಾರಗಳ ಪ್ಯಾಕೇಜ್ ಅನ್ನು ಕೆಳಕಂಡ ಅವಶ್ಯಕತೆಗಳನ್ನು ಪೂರೈಸಲು ಅಭಿವೃದ್ಧಿಪಡಿಸುವುದು ನಮ್ಮ ಮುಖ್ಯ ಧ್ಯೇಯವಾಗಿದೆ.

1. ಗ್ರಾಮೀಣ ಜನರ ಜೀವನಾವಶ್ಯಕತೆಗಳನ್ನು ಪೂರೈಸುವುದು.
2. ಕಡು ಬಡವರಿಗೆ ಉದ್ಯೋಗ ಮತ್ತು ಆದಾಯ ಉತ್ಪನ್ನ ಚಟುವಟಿಕೆಗಳ ಲಭ್ಯತೆ ಹೆಚ್ಚಿಸುವುದು.
3. ನೈಸರ್ಗಿಕ ಸಂಪನ್ಮೂಲಗಳ ಉತ್ಪಾದನಾ ಸಾಮಥ್ರ್ಯವನ್ನು ಹೆಚ್ಚಿಸುವುದು.
4. ಬಡತನ ನಿವಾರಣೆ ಮಾಡುವುದು ಮತ್ತು ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು, ಸಸ್ಯ ಸಂಪತ್ತು ಮತ್ತು ಜಾನುವಾರು ಸಂಪತ್ತುಗಳ ಅವನತಿಯನ್ನು ತಡೆಯುವುದು.

ಪೀಠಿಕೆ

ಭಾರತ ದೇಶವು ಕೃಷಿ ಪ್ರಧಾನ ದೇಶವಾಗಿದ್ದು, ಶೇ **65** ಕ್ಕಿಂತಲೂ ಹೆಚ್ಚು ಜನ ಸಂಖ್ಯೆಯು ಕೃಷಿಯನ್ನೇ ಅವಲಂಬಿಸಿದೆ. ಭಾರತದ ಕೃಷಿಯು ಮಳೆಯಾಧಾರಿತವಾಗಿದ್ದು, ಈ ಮಳೆಯ ಪ್ರಮಾಣದಲ್ಲಿ ಪ್ರತಿ ವರ್ಷವೂ ಏರಿಳಿತವಾಗುತಿದ್ದು ಒಂದೇ ಸಮನಾಗಿ ಇರುವುದಿಲ್ಲ. ಸರಿ ಸುಮಾರು ಮುಕ್ಕಾಲು ಭಾಗ **(3/4)** ಕೃಷಿ ಯೋಗ್ಯ ಭೂಮಿಯು ಮಳೆಯನ್ನೇ ಅವಲಂಬಿಸಿದೆ.

ಯಾವುದೇ ಒಂದು ಬೆಳೆಯ ಉತ್ಪಾದನಾ ಸಾಮರ್ಥ್ಯವು ಮುಖ್ಯವಾಗಿ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ ಮತ್ತು ನೀರು ಜೊತೆಗೆ ಬೆಳೆ ನಿರ್ವಹಣಾ ಪದ್ಧತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ಈ ಎರಡು ಮುಖ್ಯ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ವೈಜ್ಞಾನಿಕ ಬಳಕೆ ಸುಸ್ಥಿರ ಮಳೆಯಾಧಾರಿತ ಕೃಷಿಗೆ ಅತಿ ಮುಖ್ಯವಾಗಿರುತ್ತದೆ. ಮಳೆಯಾಧಾರಿತ ಸಮಗ್ರ

ಕೃಷಿ ಅಭಿವೃದ್ಧಿಗೆ ಜಲಾನಯನ ಪರಿಕಲ್ಪನೆಯು ಮೂಲ ಮಂತ್ರವಾಗಿದ್ದು, ಇದು ಪ್ರಸ್ತುತ ನಮ್ಮ ಉದ್ದೇಶ ಮತ್ತು ಗುರಿಗಳನ್ನು ತಲುಪುವಲ್ಲಿ ಅತ್ಯಂತ ಪ್ರಮುಖ ಸಾಧನವಾಗಿ ಪರಿಣಮಿಸಿದೆ.

ಕರ್ನಾಟಕದಲ್ಲಿ ಜಲಾನಯನ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಏಕೆಂದರೆ, ಸುಮಾರು ಶೇ 75 ರಷ್ಟು ಬೆಳೆ ಪ್ರದೇಶವು ಅತಿ ಕಡಿಮೆ ಮತ್ತು ಅನಿಶ್ಚಿತ ಮಳೆಯನ್ನಾಧರಿಸಿದೆ. ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶವು **190.50** ಲಕ್ಷ ಹೆಕ್ಟೇರ್ರಷ್ಟಿದ್ದು, ಅದರಲ್ಲಿ **129.70** ಲಕ್ಷ ಹೆಕ್ಟೇರ್ ಪ್ರದೇಶವು ಜಲಾನಯನ ಅಭಿವೃದ್ಧಿಗೆ ಲಭ್ಯವಿರುತ್ತದೆ. ಇದರಲ್ಲಿ **2019-20** ನೇ ಸಾಲಿನ ಮಾರ್ಚ್-**2020** ರ ಅಂತ್ಯಕ್ಕೆ ಸುಮಾರು **70.84** ಲಕ್ಷ ಹೆಕ್ಟೇರ್ರಷ್ಟು ಪ್ರದೇಶವನ್ನು ಉಪಚರಿಸಲಾಗಿದೆ ಇನ್ನುಳಿದ ಸುಮಾರು **58.86** ಲಕ್ಷ ಹೆಕ್ಟೇರ್ ಪ್ರದೇಶವನ್ನ್ನು (ಈ ಪೈಕಿ **6.55** ಲಕ್ಷ ಹೆಕ್ಟೇರ್ ಪ್ರದೇಶವು ಪ್ರಸ್ತುತ ಉಪಚರಿಸಲಾಗುತ್ತಿದೆ) ಜಲಾನಯನ ಅಭಿವೃದ್ಧಿಯಡಿ ಉಪಚರಿಸಲ್ಪಡಬೇಕಿದೆ.

ಕರ್ನಾಟಕದಲ್ಲಿ ಜಲಾನಯನ ಅಭಿವೃದ್ಧಿಯ ಪ್ರಾಮುಖ್ಯತೆ

ಕರ್ನಾಟಕ ರಾಜ್ಯದ ಬರಪೀಡಿತ ಪ್ರದೇಶಗಳ ಅದರಲ್ಲೂ ಸುಮಾರು ಶೇ.79 ರಷ್ಟು ಉಳುಮೆ ಯೋಗ್ಯ ಪ್ರದೇಶದ ಭೂ ಸಂಪನ್ಮೂಲಗಳ ನಿರ್ವಹಣೆಯನ್ನು ಸಂಪನ್ಮೂಲ ರಹಿತ ಬಡರೈತರೇ ನಿರ್ವಹಿಸುತ್ತಿದ್ದಾರೆ. ತೀವ್ರ ಮಣ್ಣಿನ ಕೊಚ್ಚೆಣೆಯಿಂದ, ಮಣ್ಣು ಮತ್ತು ನೀರಿನ ಸಂಪನ್ಮೂಲಗಳು ಕ್ಷೀಣಿಸುವುದರೊಂದಿಗೆ, ಮಣ್ಣಿನ ಫಲವತ್ತತೆ, ಬೆಳೆ ಇಳುವರಿ ಹಾಗೂ ಅಂತರ್ಜಲ ಮಟ್ಟ ಗಣನೀಯವಾಗಿ ಕುಸಿಯುತ್ತಿದೆ. ಅರಣ್ಯ ನಾಶ, ಹುಲ್ಲುಗಾವಲಿನ ನಾಶ ಹಾಗೂ ಜೈವಿಕ ಉತ್ಪತ್ತಿಯು ಗಣನೀಯವಾಗಿ ಕ್ಷೀಣಿಸುತ್ತಿದೆ. ರಾಜ್ಯದಲ್ಲಿ ಬೆಳೆಯುತ್ತಿರುವ ಜನ ಹಾಗೂ ಜಾನುವಾರುಗಳ ಸಂಖ್ಯೆಗನುಗುಣವಾಗಿ ಆಹಾರ, ಹುಲ್ಲು ಮತ್ತು ಉರುವಲಿನ ಅವಶ್ಯಕತೆ ಪೂರೈಸಲು ನಮಗೆ ಉಳಿದಿರುವುದೊಂದೇ ದಾರಿ ಎಂದರೆ ಮಳೆಯಾಶ್ರಿತ ಖುಷ್ಕಿ ಪ್ರದೇಶದ ಉತ್ಪಾದನಾ ಸಾಮರ್ಥ್ಯವನ್ನು ಸುಸ್ಥಿರಗೊಳಿಸುವುದು. ಈ ಸುಸ್ಥಿರ ಅಭಿವೃದ್ಧಿಯು ಸೂಕ್ತ ಮಣ್ಣು ಮತ್ತು ನೀರು ಸಂರಕ್ಷಣಾ ತಂತ್ರಜ್ಞಾನ, ಖುಷ್ಕಿ ಹವಾಮಾನಕ್ಕೆ ಸೂಕ್ತವಾದ ಬೆಳೆ - ತಳಿಗಳ ಅಭಿವೃದ್ಧಿ, ಅತ್ಯುತ್ತಮ ಕೃಷಿ ವಿಸ್ತರಣಾ ಸೇವೆಗಳು ಮತ್ತು ಉತ್ತಮ ಮಾರುಕಟ್ಟೆ, ಸಾಲ ಸೌಲಭ್ಯ ಹಾಗೂ ಉತ್ಪಾದನಾ ಸಾಮಗ್ರಿಗಳ ಲಭ್ಯತೆಯನ್ನು ಸೂಕ್ತ ಸಮಯದಲ್ಲಿ ಖುಷ್ಕಿ ಪ್ರದೇಶದ ರೈತರಿಗೆ ದೂರೆಯುವಂತೆ ಮಾಡವುದು.

ದೇಶದ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ರಾಜ್ಯವು ಅತೀ ಹೆಚ್ಚಿನ ಬರಪೀಡಿತ ಪ್ರದೇಶವನ್ನು (ಶೇ.79) ಹೊಂದಿದೆ. ಇಡೀ ದೇಶದಲ್ಲೇ ರಾಜಸ್ಥಾನವನ್ನು ಬಿಟ್ಟರೆ, ಕರ್ನಾಟಕವು ಖುಷ್ಕಿ ಭೂಮಿಯ ವಿಸ್ತೀರ್ಣದಲ್ಲಿ 2ನೇ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ ಜಲಾನಯನ ಅಭಿವೃದ್ಧಿ ಪರಿಕಲ್ಪನೆಯಡಿ ಒಳಪಟ್ಟ ಭೂ ಪ್ರದೇಶ

- ಒಟ್ಟು ಭೌಗೋಳಿಕ ಪ್ರದೇಶ : **190.50** ಲಕ್ಷ ಹೆಕ್ಟೇರ್
- ಉಪಚಾರಕ್ಕೆ ಲಭ್ಯವಿರುವ ಒಟ್ಟು ಪ್ರದೇಶ : **129.70** ಲಕ್ಷ ಹೆಕ್ಟೇರ್
- ಈಗಾಗಲೇ ಉಪಚರಿಸಲ್ಪಟ್ಟ ಪ್ರದೇಶ : **70.84** ಲಕ್ಷ ಹೆಕ್ಟೇರ್

- ಉಪಚಾರಕ್ಕೆ ಬಾಕಿ ಇರುವ ಪ್ರದೇಶ : 58.86 ಲಕ್ಷ ಹೆಕ್ಟೇರ್:

(ಪ್ರಸ್ತುತ ಉಪಚರಿಸುತ್ತಿರುವ ಪ್ರದೇಶವನ್ನೊಳಗೊಂಡು)

- ಉಪಚಾರಕ್ಕೆ ಲಭ್ಯವಾಗದ ಪ್ರದೇಶ : 60.80 ಲಕ್ಷ ಹೆಕ್ಟೇರ್



ಜಲಾನಯನ ಅಭಿವೃದ್ಧಿ ಯೋಜನೆಗಳ ಧ್ಯೇಯೋದ್ದೇಶಗಳು ಮತ್ತು ಗುರಿಗಳು :

1. ಮಣ್ಣಿನ ಸವೆತ, ಕೊಚ್ಚಣೆ ಮತ್ತು ಪೋಷಕಾಂಶಗಳ ನಷ್ಟ ತಡೆಯುವುದು.
2. ಮೇಲ್ಮೈ ನೀರಿನ ಮಟ್ಟ ಮತ್ತು ಅಂತರ್ಜಲದ ಲಭ್ಯತೆಯನ್ನು ಹೆಚ್ಚಿಸುವುದು.
3. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು
4. ಹಸರೀಕರಣದಲ್ಲಿ ಹೆಚ್ಚಳ
5. ಹಾಲಿನ ಉತ್ಪನ್ನ ಮತ್ತು ತೋಟಗಾರಿಕೆ ಉತ್ಪಾದನೆಯನ್ನು ಹೆಚ್ಚಿಸುವುದು
6. ಮೇವಿನ ಹುಲ್ಲು ಮತ್ತು ಉರುವಲಿನ ಲಭ್ಯತೆಯನ್ನು ಹೆಚ್ಚಿಸುವುದು.
7. ಕುಟುಂಬದ ಆದಾಯವನ್ನು ಹೆಚ್ಚಿಸುವುದು
8. ಗ್ರಾಮೀಣ ಸಮುದಾಯದ ಜೀವನ ಮಟ್ಟವನ್ನು ಸುಧಾರಿಸುವುದು.
9. ಸಮುದಾಯ ಆಧಾರಿತ ಸಂಘಟನೆಗಳ ಮುಖಾಂತರ ಸ್ಥಳೀಯ ಸಂಘಸಂಸ್ಥೆಗಳ ಸುಸ್ಥಿರ ಅಭಿವೃದ್ಧಿ.

ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಸರ್ಕಾರೇತರ ಸಂಸ್ಥೆಗಳ ಸಾಂಸ್ಥಿಕ ಬೆಂಬಲದಲ್ಲಿ ಸಮುದಾಯದ ಸಂಘಟನೆ ಮತ್ತು ಬಲವರ್ಧನೆಯನ್ನು ಸಾಧಿಸುವುದು.

ಅಧ್ಯಾಯ-1

ಜಲಾನಯನ ಅಭಿವೃದ್ಧಿಯ ಇತಿಹಾಸ

ಜಲಾನಯನ ಅಭಿವೃದ್ಧಿ ಇಲಾಖೆ (2000ದ ನಂತರ) :

ಕೃಷಿ ಉತ್ಪಾದನೆಯ ಬೆಳವಣಿಗೆಗೆ ಮಣ್ಣು ಮತ್ತು ನೀರು ಸಂರಕ್ಷಣೆಯು ಅತ್ಯಂತ ಮೂಲಭೂತವಾದದ್ದು. ಕರ್ನಾಟಕ ಕೃಷಿ ಇಲಾಖೆಯ ಮುಂದಾಳತ್ವದಲ್ಲಿ ದೊಡ್ಡ ಪ್ರಮಾಣದಲ್ಲಿ ಕ್ಷೇತ್ರ ಬದುಗಳನ್ನು ಹಾಕುವ ಕಾರ್ಯಕ್ರಮ ಹಿಂದಿನಿಂದಲೂ ಚಾಲನೆಯಲ್ಲಿತ್ತು. 2000ನೇ ಸಾಲಿನಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಬದಲಾವಣೆಗಳಾದವು. ಪ್ರತ್ಯೇಕ ಜಲಾನಯನ ಅಭಿವೃದ್ಧಿ ಇಲಾಖೆಯನ್ನು 2000 ವರ್ಷದಲ್ಲಿ ಪಾರಂಭಿಸಲಾಯಿತು. ಜಲಾನಯನ ಅಭಿವೃದ್ಧಿಯನ್ನು ಹೆಚ್ಚು ವೃತ್ತಿಪರವನ್ನಾಗಿ ಮಾಡಲು ಮತ್ತು ಇತರ ಇಲಾಖೆಗಳೊಂದಿಗೆ ಸಹಕಾರ ಮತ್ತು ಸವಾನ್ವಯ ಸಾಧಿಸಲು ಈ ಇಲಾಖೆಯನ್ನು ಪ್ರಾರಂಭಿಸಿ ಜನಸಹಭಾಗಿತ್ವ ಎಂಬ ಚಿಂತನೆಯನ್ನು ಪುನರ್ ಪರಿಶೀಲಿಸಿ, ಪುನರುಚ್ಚರಿಸಿ, ಪುನರ್ ರಚನೆ ಮಾಡಿ ಶಕ್ತಿಯುತಗೊಳಿಸಿ ಇಲಾಖೆಯ ಕಾರ್ಯಕ್ರಮಗಳಾದ ಜನ ಸಹಭಾಗಿತ್ವದೊಂದಿಗೆ ಮಳೆಯಾಶ್ರಿತ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ (2002) ಮತ್ತು ಪ್ರಧೇಶಾಭಿವೃದ್ಧಿ ಕಾರ್ಯಕ್ರಮಗಳಾದ ಡಿಪಿಎಪಿ, ಡಿಡಿಪಿ, ಐಡಬ್ಲ್ಯೂಡಿಪಿ (ಹರಿಯಾಲಿ 2003) ಗಳ ಅನುಷ್ಠಾನ ಪ್ರಾರಂಭವಾಯಿತು. ಕೃಷಿ ಇಲಾಖೆಯಿಂದ ಅನುಷ್ಠಾನವಾಗುವ ಎಲ್ಲಾ ಕಾರ್ಯಕ್ರಮಗಳ ಜೊತೆಗೆ ಪ್ರದೇಶಾಭಿವೃದ್ಧಿ ಯೋಜನೆಗಳು ಜಲಾನಯನ ಅಭಿವೃದ್ಧಿ ಇಲಾಖೆಗೆ 2005 ರಲ್ಲಿ ವರ್ಗಾವಣೆಯಾದವು.

ಕರ್ನಾಟಕದಲ್ಲಿ ಪ್ರತ್ಯೇಕ ಜಲಾನಯನ ಅಭಿವೃದ್ಧಿ ಇಲಾಖೆಯ ಪ್ರಾರಂಭ:

ರಾಜ್ಯದಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಜನ ಸಂಖ್ಯೆಗನುಗುಣವಾಗಿ ಆಹಾರದ ಬೇಡಿಕೆಯು ಹೆಚ್ಚುತ್ತಿರುವುದರಿಂದ ಉತ್ಪಾದಕತೆಯನ್ನು ಹೆಚ್ಚಿಸಲು ಮಳೆ ಆಶ್ರಿತ ಪ್ರದೇಶವನ್ನು ಜಲಾನಯನ ಪದ್ಧತಿಯಡಿ ತರುವುದು ಅವಶ್ಯ ಮತ್ತು ಅನಿವಾರ್ಯವೂ ಹೌದು.

ವಿವಿಧ ಇಲಾಖೆಗಳು ಎಂದರೆ ಕೃಷಿ ಇಲಾಖೆಯಲ್ಲಿ ವಿವಿಧ ಮಣ್ಣು ಮತ್ತು ನೀರು ಸಂರಕ್ಷಣಾ ಕಾರ್ಯಕ್ರಮಗಳು ಮತ್ತು ಜಲಾನಯನ ಯೋಜನೆಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಂದ ಅನುಷ್ಠಾನವಾಗುವ ಜಲಾನಯನ ಆಧಾರದ ಅಭಿವೃದ್ಧಿ ಕಾರ್ಯಕ್ರಮಗಳು, ತೋಟಗಾರಿಕೆ, ಅರಣ್ಯ ಮತ್ತು ಪಶು ಸಂಗೋಪನೆ ಇಲಾಖೆಗಳಿಂದಲೂ ವಿವಿಧ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯಾ ಇಲಾಖೆಗಳೇ ಅನುಷ್ಠಾನ ಮಾಡುತ್ತಿದ್ದವು. ಇದಲ್ಲದೆ ಜಲಾನಯನ ಅಭಿವೃದ್ಧಿಯಲ್ಲಿ ಇತರ ಮುಖ್ಯ ಅಂಶಗಳೆಂದರೆ ಭೂರಹಿತ ಆದಾಯ ಉತ್ಪನ್ನ ಚಟುವಟಿಕೆಗಳು, ಸರ್ಕಾರೇತರ ಮತ್ತು ಗ್ರಾಮೀಣ ಸಂಸ್ಥೆಗಳ ಸಹಭಾಗಿತ್ವ. ಆದ್ದರಿಂದ ಕರ್ನಾಟಕ ಸರ್ಕಾರವು ವಿವಿಧ ಅಂಶಗಳನ್ನು ಪರಿಗಣಿಸಿ ಹಾಗೂ ಯೋಜನೆಗೆ ವಿಶ್ವಬ್ಯಾಂಕ್‌ನಿಂದ ನೆರವು ಪಡೆಯುವಾಗ ನೀಡಿದ ವಾಗ್ದಾನವನ್ನು ಒಳಗೊಂಡಂತೆ ಯೋಜನೀಕರಣ ಅನುಷ್ಠಾನ ಮತ್ತು ಮೇಲ್ವಿಚಾರಣೆಗಳ ಸಮನ್ವಯವನ್ನು ಸಾಧಿಸಲು ಹೊಸದಾಗಿ ಪ್ರತ್ಯೇಕವಾಗಿ ಬಹು ವಿಭಾಗೀಯ ತಂಡದ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಸ್ಥಾಪಿಸುವುದು ಸೂಕ್ತವೆಂದು ನಿರ್ಧರಿಸಲಾಯಿತು.

ಸರ್ವತೋಮುಖ ಮತ್ತು ಸಮಗ್ರ ಜಲಾನಯನ ಅಭಿವೃದ್ಧಿಯ ಪ್ರಮುಖ ಉದ್ದೇಶದಿಂದ ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: ಎಎಚ್‌ಡಿ/206/ಎಎಂಎಲ್/94/(ಸಂ.III) ದಿನಾಂಕ: 31-12-1999 ರಲ್ಲಿ 01-04-2000 ರಿಂದ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿತು. ಈ ಇಲಾಖೆಗೆ ಕೃಷಿ, ಭೂಸಂರಕ್ಷಣೆ, ಅರಣ್ಯೀಕರಣ, ತೋಟಗಾರಿಕೆ, ಪಶು ಸಂಗೋಪನೆ, ಹುಲ್ಲುಗಾವಲು ಅಭಿವೃದ್ಧಿ, ಆದಾಯ ಉತ್ಪನ್ನ ಚಟುವಟಿಕೆಗಳ ಸೂತ್ರೀಕರಣ, ಯೋಜನೀಕರಣ ಮತ್ತು ಅನುಷ್ಠಾನ ಕ್ರಮಗಳ ಸಮನ್ವಯ ಮತ್ತು ಸಮಗ್ರ ರೀತಿಯಲ್ಲಿ ಜಲಾನಯನ ಅಭಿವೃದ್ಧಿ ಆಧಾರದ ಮೇಲೆ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ.

ಅಧ್ಯಾಯ-2

ಜಲಾನಯನ ಅಭಿವೃದ್ಧಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಜಲಾನಯನ ಕಾರ್ಯಕ್ರಮಗಳು / ಯೋಜನೆಗಳು.

1.ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ - ಜಲಾನಯನ ಅಭಿವೃದ್ಧಿ ಮತ್ತು ಇತರೆ ಉಪಚಾರಗಳು (ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ)

ಅ)	ಯೋಜನೆಯ ಹೆಸರು ಮತ್ತು ಜಾರಿಗೊಳಿಸಿದ ವರ್ಷ	ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಜಲಾನಯನ ಅಭಿವೃದ್ಧಿ ಜಾರಿಗೊಳಿಸಿದ ವರ್ಷ 2009-10
ಆ)	ಆಯವ್ಯಯ ಶೀರ್ಷಿಕೆ	2402-00-102-0-30 (ಯೋಜನೆ)
ಇ)	ಯೋಜನೆ ಅಡಿಯಲ್ಲಿ ಇದ್ದಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲು	60:40 ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನವನ್ನು ಭರಿಸುತ್ತವೆ. ಸಮತಟ್ಟಾದ ಪ್ರದೇಶದಲ್ಲಿ ರೂ. 12000/ಹೆಕ್ಟೇರ್, ಮರುಭೂಮಿ ಮತ್ತು ಗುಡ್ಡ ಗಾಡು ಪ್ರದೇಶದಲ್ಲಿ ರೂ. 15000/ಹೆಕ್ಟೇರ್
ಈ)	ಯೋಜನೆಯ ಉದ್ದೇಶಗಳು	▪ ಮಣ್ಣು, ತೇವಾಂಶ ಮತ್ತು ಪೋಶಕಾಂಶಗಳನ್ನು ಸಂರಕ್ಷಿಸುವುದು. ಅಂತರ್ಜಲವನ್ನು ಅಭಿವೃದ್ಧಿಗೊಳಿಸುವುದು. ▪ ಕೃಷಿ, ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ ಮೂಲಕ "ಹಸಿರು ಹೊದಿಕೆ'' ಯನ್ನು ವೃದ್ದಿಗೊಳಿಸುವುದು, ▪ ಮೇವು ಮತ್ತು ಉರವಲು ಪೂರೈಕೆಯನ್ನು ಉತ್ತಮಗೊಳಿಸುವುದು.

		▪ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು. ▪ ಸಮುದಾಯ ಸಂಘಟನೆ ಮತ್ತು ಸಾಮರ್ಥ್ಯ ಬಲವರ್ಧನೆ ಹಾಗೂ ಪಶು ಸಂಪತ್ತಿನ ಅಭಿವೃದ್ಧಿಯನ್ನು ಉತ್ತೇಜಿಸುವುದು. ▪ ಭೂ ರಹಿತರಿಗೆ ಜೀವನಾಧಾರಿತ ಬೆಂಬಲ ಚಟುವಟಿಕೆಗಳನ್ನು ಒದಗಿಸುವುದು. ▪ ಉತ್ಪಾದನಾ ವ್ಯವಸ್ಥೆ ಮತ್ತು ಆದಾಯ ಉತ್ಪನ್ನ ಚಟುವಟಿಕೆಗಳು ಮತ್ತು ಕಿರು ಉದ್ದಿಮೆಗಳನ್ನು ಪ್ರೋತ್ಸಾಹಿಸುವುದು. ▪ ಹರಿಯುವ ನೀರಿನ ಪರಿಣಾಮಕಾರಿ ನಿರ್ವಹಣೆ ಮತ್ತು ಸುಧಾರಿತ ಮಣ್ಣು ಹಾಗೂ ತೇವಾಂಶ ಸಂರಕ್ಷಣೆ ಕಾರ್ಯಕ್ರಮಗಳ ಜಲಾನಯನ ಉಪಚಾರಗಳನ್ನು ಮೇಲ್‌ಸ್ಥರ, ಮಧ್ಯಸ್ಥರ ಮತ್ತು ಕೆಳಸ್ಥರಗ¼ಲ್ಲಿ ಕೈಗೊಳ್ಳುವುದು. ಮಳೆನೀರು ಕೊಯ್ಲಿನ ಮುಖೇನ ಮೂಲ ತೇವಾಂಶ ಸಂರಕ್ಷಣೆ ಮತ್ತು ಇತರ ಜಲಾನಯನ ಆಧಾರಿತ ಚಟುವಟಿಕೆಗಳ ಅನುಷ್ಠಾನ ಮಾಡುವುದು. ▪ ಮಳೆಯಾಶ್ರಿತ ಪ್ರದೇಶಗಳಲ್ಲಿ ಸಾಂಪ್ರಾಧಾಯಿಕ ನೀರಿನ ಮೂಲಗಳ ನವೀಕರಣ ಸೇರಿದಂತೆ, ನೀರಿನ ಮೂಲಗಳ ಸೃಷ್ಟಿಗೆ ಸದರಿ ಕಾರ್ಯಕ್ರಮಗಳನ್ನು ನರೇಗಾ ಕಾರ್ಯಕ್ರಮದ ಜೊತೆ ಒಗ್ಗೂಡಿಸಿ ಅನುಷ್ಠಾನ ಮಾಡುವುದು.
ಊ)	ಕಾರ್ಯಕ್ರಮ/ಪ್ರಾಜೆಕ್ಟ್ ಯೋಜನೆಯ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು (ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)	**2019-20** ನೇ ಸಾಲಿನಲ್ಲಿ ಗ್ರಾಮೀಣ ಭಾಗದ ಯೋಜನಾ ವ್ಯಾಪ್ತಿಯ ರೈತರ ಜಮೀನಿನಲ್ಲಿ ಮಾರ್ಚ್-**2020** ರ ಅಂತ್ಯಕ್ಕೆ ಒಟ್ಟು **92451** ಹೆಕ್ಟೇರ್ ಪ್ರದೇಶವನ್ನು ವಿವಿಧ ಜಲಾನಯನ ಚಟುವಟಿಕೆಗಳ ಮುಖೇನ ಉಪಚರಿಸಲಾಗಿದೆ. ಒಟ್ಟು **4294** ನೀರು ಸಂಗ್ರಹಣಾ ವಿನ್ಯಾಸಗಳನ್ನು ರಚಿಸುವುದರ ಮೂಲಕ ಸುಮಾರು **9661** ಹೆಕ್ಟೇರ್ ಮಳೆಯಾಶ್ರಿತ ಪ್ರಧೇಶವನ್ನು ಹೆಚ್ಚುವರಿ ರಕ್ಷಣಾತ್ಮಕ ನೀರಾವರಿ ಪ್ರದೇಶಕ್ಕೆ ಒಳಪಡಿಸಲಾಗಿದೆ ಹಾಗೂ **19,735**

		ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ..
ಊ	ಹಣಕಾಸು (ರೂ. ಲಕ್ಷಗಳಲ್ಲಿ)	ರೂ.16600.00 ಲಕ್ಷಗಳು

ವೆಚ್ಚ: ರೂ. ಲಕ್ಷಗಳಲ್ಲಿ

2017-18		ಪರಿಷ್ಕೃತ ಅಂದಾಜು 2018-19		ಆಯವ್ಯಯ ಅಂದಾಜು 2019-20	
ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ(ಮಾರ್ಚ್-2020ರ ಅಂತ್ಯಕ್ಕೆ)
71886.00	40667.67	58369.00	46006.00	28395.02	25508.94

ಭೌತಿಕ ಸಾಧನೆ: ಘಟಕ: ಹೆಕ್ಟೇರ್

2017-18		2018-19		2019-20	
ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ ಮಾರ್ಚ್-2020ರ ಅಂತ್ಯಕ್ಕೆ)
2,00,259	1,36,258 ಹೇಕ್ಟೇರ್/ 10717 ನೀರು ಸಂಗ್ರಹಣಾ ವಿನ್ಯಾಸಗಳು	1,50,516	2,34,400 ಹೇಕ್ಟೇರ್/ 9148 ನೀರು ಸಂಗ್ರಹಣಾ ವಿನ್ಯಾಸಗಳು	82918ಹೆ. 2837 ನೀರು ಸಂಗ್ರಹಣಾ ವಿನ್ಯಾಸಗಳು	92451 ಹೆ. 4294 ನೀರು ಸಂಗ್ರಹಣಾ ವಿನ್ಯಾಸಗಳು

ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ (ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ) ಯೋಜನೆಯನ್ನು 2009-10 ನೇ ಸಾಲಿನಿಂದ ರಾಜ್ಯದ 29 ಜಿಲ್ಲೆಗಳ 165 ತಾಲ್ಲೂಕುಗಳಲ್ಲಿ ಒಟ್ಟು 569 ಯೋಜನೆಗಳನ್ನು ಪ್ರಾರಂಭಿಸಲಾಗಿದೆ. 2018-19ನೇ ಸಾಲಿನಲ್ಲಿ 31.8.2019 ರಿಂದ ಬ್ಯಾಚ್-V ಮತ್ತು ಬ್ಯಾಚ್- VI ರ 132 ಯೋಜನೆಗಳನ್ನು ರಾಜ್ಯದಲ್ಲಿ ಸ್ಥಗಿತಗೊಳಿಸಲಾಗಿದೆ.

2019-20 ನೇ ಸಾಲಿನಲ್ಲಿ 116 ಬ್ಯಾಚ್-III ಮತ್ತು 67 ಬ್ಯಾಚ್-IV ರ ಯೋಜನೆಗಳು ಮಾತ್ರ ಚಾಲ್ತಿಯಲ್ಲಿದ್ದು ಉಳಿಕೆ ಕಾಮಗಾರಿ/ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗಿದೆ. ಈ ಯೋಜನೆಗಳು

ಮಾರ್ಚ್-2020 ಕ್ಕೆ ಅಂತ್ಯಗೊಳ್ಳಬೇಕಿತ್ತು, ಆದರೆ ಕೇಂದ್ರ ಸರ್ಕಾರದ ಸೂಚನೆಯಂತೆ ಈ ಯೋಜನೆಗಳನ್ನು ಆಗಸ್ಟ್-2020 ರ ಅಂತ್ಯದವರೆಗೆ ಮುಂದುವರೆಸಲಾಗಿದೆ. ಕ್ಷೇತ್ರ ಮಟ್ಟದಲ್ಲಿ ಸಿಬ್ಬಂದಿಗಳು/ಅಧಿಕಾರಿಗಳ ಪೂರ್ಣಮಟ್ಟದಲ್ಲಿ ನೇಮಕಾತಿಯ ಅತ್ಯವಶ್ಯಕವಾಗಿರುತ್ತದೆ. ಇದರಿಂದಾಗಿ ಕ್ಷೇತ್ರ ಮಟ್ಟದಲ್ಲಿ ಯೋಜನೆಯ ಉಪಯೋಗಗಳನ್ನು ಪಲಾನುಭವಿಗಳಿಗೆ ತಲುಪಿಸಿ, ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಹಕಾರಿಯಾಗಿರುತ್ತದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ (ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ) ಯೋಜನೆಯಡಿ ಬ್ಯಾಚ್-I ಮತ್ತು ಬ್ಯಾಚ-II ರ ಯೋಜನೆಗನ್ನು ಕ್ರಮವಾಗಿ ಮಾರ್ಚ-2017 ಮತ್ತು ಮಾರ್ಚ್-2018 ರ ಅಂತ್ಯಕ್ಕೆ ಮುಕ್ತಾಯಗೊಂಡಿದ್ದು. ಎಲ್ಲಾ 246 ಯೋಜನೆಗಳ ಅಂತಿಮ ಮುಕ್ತಾಯ ಮತ್ತು ಮೌಲ್ಯಮಾಪನ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಬ್ಯಾಚ್-III ಮತ್ತು ಬ್ಯಾಚ-IV ರ ಜಲಾನಯನ ಯೋಜನೆಗಳ ಉಸ್ತುವಾರಿ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲೀಕರಣಕ್ಕಾಗಿ ಮೆ. ರಿಮೋಟ್ ಸೆನ್ಸಿಂಗ್ ಇನ್‌ಸ್ಟ್ರುಮೆಂಟ್ಸ್, ಹೈದರಾಬಾದ್ (M/s RSI) ಸಂಸ್ಥೆಯನ್ನು ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ಕಂದಾಯ ವಿಭಾಗಗಳಿಗೆ ಆಯ್ಕೆಮಾಡಿ, ಉಸ್ತುವಾರಿ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲೀಕರಣ ಕಾರ್ಯಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

II. ಜಲಾನಯನ ಅಭಿವೃದ್ಧಿಯ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮ

ಅ)	ಯೋಜನೆಯ ಹೆಸರು ಮತ್ತು ಜಾರಿಗೊಳಿಸಿದ ವರ್ಷ	ಜಲಾನಯನ ಅಭಿವೃದ್ಧಿಯ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮ ಜಾರಿಗೊಳಿಸಿದ ದಿನಾಂಕ 5ನೇ ನವಂಬರ್ 2019 ರಿಂದ (2019-20)
ಆ)	ಆಯವ್ಯಯ ಶೀರ್ಷಿಕೆ	4402-00-102-0-05
ಇ)	ಯೋಜನೆ ಅಡಿಯಲ್ಲಿ ಇದ್ದಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲು	ಸಂಪೂರ್ಣ ರಾಜ್ಯ ಸರ್ಕಾರದ ಕಾರ್ಯಕ್ರಮ
ಈ)	ಯೋಜನೆಯ ಉದ್ದೇಶಗಳು	• ಭೂ ಸಂಪನ್ಮೂಲ ಮಾಹಿತಿಯ ಆಧಾರದ ಮೇಲೆ ಮತ್ತು/ಅಥವಾ ವೈಜ್ಞಾನಿಕ ಜಲಾನಯನ ತತ್ವದ ಮೇಲೆ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ತಮವಾಗಿ ನಿರ್ವಹಿಸಿ ಮಳೆಯಾಶ್ರಿತ ಪ್ರದೇಶದ ಕೃಷಿ ಭೂಮಿಯ ಫಲವತ್ತತೆ ಹಾಗೂ ಅದರ ಉತ್ಪನ್ನ

		ಶಕ್ತಿಯನ್ನು ಹೆಚ್ಚಿಸುವುದು. • ಮಣ್ಣು ಮತ್ತು ನೀರಿನ ಸಂರಕ್ಷಣೆ ಹಾಗೂ ಅಂತರ್ಜಲ ಮರುಪೂರಣವನ್ನು ಸುಧಾರಿಸುವುದು. • ತೇವಾಂಶ ಲಭ್ಯತೆ ಹಾಗೂ ರಕ್ಷಾಣಾತ್ಮಕ ನೀರಾವರಿಗೆ ಮಳೆ ನೀರು ಕೊಯ್ಲು ಕ್ರಮಗಳನ್ನು ಅಳವಡಿಸುವುದು. • ವ್ಯವಸಾಯ ಯೋಗ್ಯವಲ್ಲದ ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸುವುದು. • ಜಲಾನಯನ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಜೀವನ ಮಟ್ಟ ಸುಧಾರಣೆಗೊಳಿಸುವುದರೊಂದಿಗೆ, ಆಸ್ತಿ ರಹಿತ ದುರ್ಬಲ ವರ್ಗದ ಜನರಿಗೆ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯ ನೀಡುವುದು ಮತ್ತು ಗುಣಮಟ್ಟದ ಕೌಶಲ್ಯ ಆಧಾರಿತ ತರಬೇತಿಯ ಮೂಲಕ, ಸ್ಥಳೀಯವಾಗಿ ಉದ್ಯೋಗವಕಾಶಗಳನ್ನು ಒದಗಿಸುವುದು. • ಯೋಜನಾ ಪ್ರದೇಶದ ವ್ಯಾಪ್ತಿಯ ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಮೂಲಕ ಮಣ್ಣಿನ ಆರೋಗ್ಯ ಸುಧಾರಿಸುವುದು • ಜಲಾನಯನ ಪ್ರದೇಶದಲ್ಲಿ ಹಸಿರು ಹೊದಿಕೆಯ ಹೆಚ್ಚಳ • ಇಂಧನ, ಮೇವು ಉತ್ಪಾದನೆ ಮತ್ತು ಹಾಲು ಉತ್ಪಾದನೆಯಲ್ಲಿ ಹೆಚ್ಚಳ • ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ ಮಾಡಲು ಸ್ಥಳೀಯ ಸಮುದಾಯ ಸಂಘಟನೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.

ಊ)	ಕಾರ್ಯಕ್ರಮ/ಪ್ರಾಜೆಕ್ಟ್ ಯೋಜನೆಯ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು (ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)	ಈ ಯೋಜನೆಯನ್ನು 5ನೇ ನವಂಬರ್ 2019 ರಿಂದ ರಾಜ್ಯದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಯೋಜನೆಯ ಪ್ರಾರಂಭಿಕ ಹಂತದ ಚಟುವಟಿಕೆಗಳಾದ ಪ್ರವೇಶ ದ್ವಾರ ಚಟುವಟಿಕೆ, ಅರಿವು ಮೂಡಿಸುವ ಕಾರ್ಯಕ್ರಮ ಗಳನ್ನು ಪ್ರಸಕ್ತ ವರ್ಷದಲ್ಲಿ ಅನುಷ್ಠಾನ ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ. ಈ ಯೋಜನೆಯಡಿ ಇದುವರೆವಿಗೂ 300 ನೀರು ಸಂಗ್ರಹಣಾ ವಿನ್ಯಾಸಗಳು 99,930 ಮನೆಯಂಗಳ ಕೈತೋಟ ಕಾರ್ಯಕ್ರಮವನ್ನು ಹಾಗೂ 288 ಡೌನರ್ಸ್ ಹಸು ಎತ್ತುವ ಸಾಧನಗಳನ್ನು ವಿತರಿಸಲಾಗಿದೆ. 18,400 ಜನ ಫಲಾನುಭವಿಗಳಿಗೆ ಸಹಾಯ ಮಾಡಲಾಗಿದೆ.
ಊ	ಹಣಕಾಸು (ರೂ. ಲಕ್ಷಗಳಲ್ಲಿ)	ರೂ.2500.00 ಲಕ್ಷಗಳು

ವೆಚ್ಚ: (ರೂ.ಲಕ್ಷಗಳಲ್ಲಿ)

2017-18		ಪರಿಷ್ಕೃತ ಅಂದಾಜು 2018-19		ಆಯವ್ಯಯ ಅಂದಾಜು 2019-20	
ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)
-	-	-	-	2500.00	2368.79

ಭೌತಿಕ ಸಾಧನೆ: ಘಟಕ: ಹೆಕ್ಟೇರ್

2017-18		2018-19		2019-20	
ಗುರಿ	ಸಾಧನೆ	ಗುರಿ	ಗುರಿ	ಸಾಧನೆ	ಗುರಿ
-	-	-	-	400 (ನೀರು ಸಂಗ್ರಹಣಾ ವಿನ್ಯಾಸಗಳು)	300 ನೀರು ಸಂಗ್ರಹಣಾ ವಿನ್ಯಾಸಗಳು, 288 ಹಸು ಎತ್ತುವ ಸಾಧನಗಳು

ಜಲಾನಯನ ಅಭಿವೃದ್ಧಿಯ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮವನ್ನು 2019-20 ನೇ ಸಾಲಿನಿಂದ ರಾಜ್ಯದ 29 ಜಿಲ್ಲೆಗಳ 100 ಬರಪೀಡಿತ ಮತ್ತು ಅಂತರ್ಜಲ ಶೋಷಿತ ತಾಲ್ಲೂಕುಗಳಲ್ಲಿ ಒಟ್ಟು 100 ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಪ್ರತಿ ತಾಲ್ಲೂಕಿನಲ್ಲಿ 3000 ರಿಂದ 5000 ಹೆಕ್ಟೇರ್ ಪ್ರದೇಶವನ್ನು ಭೂ ಸಂಪನ್ಮೂಲ ಸಮೀಕ್ಷೆಯ ಆಧಾರದ ಮೇಲೆ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣ ಉಪಚಾರದ ವಿಧಾನದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಮತ್ತು ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ ಕಾರ್ಯಕ್ರಮದೊಡನೆ ಒಗ್ಗೂಡಿಸಿ ಬರ ನಿರೋಧಕ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗುವುದು. ಈ ಕಾರ್ಯಕ್ರಮವನ್ನು ಜಲಾನಯನ ಸಮಿತಿಗಳ ಮೂಲಕ ಅನುಷ್ಠಾನ ಮಾಡಲಾಗುವುದು.

III. ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆಯ -II (ಸುಜಲ-III)

ಜಲಾನಯನ ಅಭಿವೃದ್ಧಿ ಇಲಾಖೆಯು ವಿಶ್ವಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-(ಸುಜಲ-III) 2013-14ನೇ ಸಾಲಿನಿಂದ ರಾಜ್ಯದ 12 ಜಿಲ್ಲೆಗಳಾದ ಚಾಮರಾಜನಗರ, ದಾವಣಗೆರೆ, ತುಮಕೂರು, ಚಿಕ್ಕಮಗಳೂರು, ರಾಯಚೂರು, ಕೊಪ್ಪಳ, ಕಲಬುರಗಿ, ಯಾದಗಿರಿ, ಗದಗ, ಬೀದರ್, ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆಗಳ ಆಯ್ದ 2534 ಕಿರುಜಲಾನಯನಗಳಲ್ಲಿ ಡಿಸೆಂಬರ್ 2019 ರವರೆಗೆ ಅನುಷ್ಠಾನಗೊಳಿಸಲಾಗಿರುತ್ತದೆ. ಯೋಜನಾ ಮೊತ್ತವನ್ನು ರೂ.412.59 ಕೋಟಿ ಮೊತ್ತಕ್ಕೆ ಪರಿಷ್ಕರಿಸಲಾಗಿದ್ದು, ರೂ.102.74 ಕೋಟಿ ಅನುದಾನವನ್ನು ತೋಟಗಾರಿಕೆ ಘಟಕಕ್ಕೆ ನಿಗದಿಪಡಿಸಲಾಗಿದ್ದು, ತೋಟಗಾರಿಕೆ ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗಿದೆ. ಯೋಜನೆಯು ಡಿಸೆಂಬರ್-2019 ಕ್ಕೆ ಮುಕ್ತಾಯಗೊಂಡಿರುತ್ತದೆ.

ಸುಜಲ-III ಯೋಜನೆಯು ಮಳೆಯಾಶ್ರಿತ ಪ್ರದೇಶಗಳಲ್ಲಿ ಯೋಜನೆಗಳ ಸಮಗ್ರ ಒಗ್ಗೂಡಿಸುವುದು, ಸಂಶೋಧನೆ, ಅಭಿವೃದ್ಧಿ ಮತ್ತು ನವೀನತೆ, ಸಾಂಸ್ಥಿಕ ಬಲವರ್ಧನೆ ಮತ್ತು ಸಾಮರ್ಥ್ಯ ಬಲವರ್ಧನೆ, ತೋಟಗಾರಿಕೆ ಅಭಿವೃದ್ಧಿ ಮತ್ತು ಯೋಜನೆ ನಿರ್ವಹಣೆ ಮತ್ತು ಸಮನ್ವಯ ಘಟಕಗಳನ್ನು ಹೊಂದಿರುತ್ತದೆ.

ಯೋಜನಾ ಕ್ಷೇತ್ರಗಳಲ್ಲಿ ಭೂ ಮತ್ತು ಜಲ ಸಂಪನ್ಮೂಲ, ಸಾಮಾಜಿಕ-ಆರ್ಥಿಕ, ಹವಾಮಾನ ಮಾಹಿತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ದತ್ತಾಂಶ/ಮಾಹಿತಿಯನ್ನು ವಿವಿಧ ವೈಜ್ಞಾನಿಕ ವಿಧಾನಗಳ ಮೂಲಕ ಪಾಲುದಾರ ಸಂಸ್ಥೆಗಳ ಮೂಲಕ ಸಂಗ್ರಹಿಸಿ ಸಹಭಾಗಿತ್ವದಲ್ಲಿ ಕಿರು ಜಲಾನಯನಗಳ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚು ನಿಖರವಾಗಿ ತಯಾರಿಸಲು ಮತ್ತು ಈ ಮೂಲಕ ಪರಿಣಾಮಕಾರಿಯಾಗಿ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಅಲ್ಲದೇ, ಯೋಜನೆಯಡಿ ಸಂಗ್ರಹಿಸಿದ ದತ್ತಾಂಶ / ಮಾಹಿತಿ ಬಳಸಿಕೊಂಡು ಡಿಜಿಟಲ್

ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ (ಡಿಸಿಶನ್ ಸಪೋರ್ಟ್ ಸಿಸ್ಟಂ) ಮತ್ತು ಭೂ ಸಂಪನ್ಮೂಲ ಪೋರ್ಟಲ್‌ಗಳನ್ನು ಸ್ಥಾಪಿಸಿ ಕೃಷಿ ಅಭಿವೃದ್ಧಿಗೆ, ರೈತರ ಲಾಭಕ್ಕೆ ಮತ್ತು ಮಾಹಿತಿ ಹಾಗೂ ಅಗತ್ಯ ಮಾಹಿತಿ ಹಾಗೂ ಜ್ಞಾನದ ವಿನಿಮಯ ಮೂಲಕ ವಿವಿಧ ಭೂ-ಸಂಬಂದಿತ ಅಭಿವೃದ್ಧಿ ಇಲಾಖೆಗಳು ತಮ್ಮ ಇಲಾಖಾ ಯೋಜನೆಗಳನ್ನು ಉತ್ತಮವಾಗಿ ಯೋಜಿಸಲು, ಒಗ್ಗೂಡಿಸಿ ಅನುಷ್ಠಾನಗೊಳಿಸಲು ಉಪಯೋಗಿಸಲು ಲಭ್ಯವಾಗುವಂತೆ ವ್ಯವಸ್ಥೆ ಕಲ್ಪಿಸುವುದು ಯೋಜನೆಯ ಚಟುವಟಿಕೆಗಳ ಮುಖ್ಯ ಗುರಿಯಾಗಿರುತ್ತದೆ.

ಯೋಜನೆಯ ವಿವರ ಈ ಕೆಳಕಂಡಂತಿದೆ:

ಅ)	ಯೋಜನೆಯ ಹೆಸರು ಮತ್ತು ಜಾರಿಗೊಳಿಸಿದ ವರ್ಷ	ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಕ.ಜ.ಅ.ಯೋ –II) (ಸುಜಲ-III ಯೋಜನೆ), 2013-14 ನೇ ಸಾಲಿನಿಂದ ಪ್ರಾರಂಭವಾಗಿದೆ.
ಆ)	ಆಯವ್ಯಯ ಶೀರ್ಷಿಕೆ	2402-00-102-0-28 ಪ್ಲಾನ್ (ಇ ಎ ಪಿ)
ಇ)	ಯೋಜನೆ ಅಡಿಯಲ್ಲಿ ಇದ್ದಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲು	ಬಾಹ್ಯ ನೆರವು 70% - ವಿಶ್ವ ಬ್ಯಾಂಕ್ ಪಾಲು, 30% - ರಾಜ್ಯದ ಪಾಲು
ಈ)	ಯೋಜನೆಯ ಉದ್ದೇಶಗಳು	ಈ ಯೋಜನೆಯ ಮುಖ್ಯ ಉದ್ದೇಶವು, ಮಣ್ಣು ಸಮೀಕ್ಷೆ ಮತ್ತು ನೀರಿನ ಸಂಪನ್ಮೂಲ ಮಾಹಿತಿ ಸಂಗ್ರಹಿಸಿ ನವೀನ ಹಾಗೂ ವೈಜ್ಞಾನಿಕ ಆಧಾರಿತ ಯೋಜನೆ ತಯಾರಿಸುವುದು, ಸಾಂಸ್ಥಿಕ ಬಲವರ್ಧನೆ ಮತ್ತು ಪಾಲುದಾರರ ಸಾಮರ್ಥ್ಯ ಅಭಿವೃದ್ಧಿ ಹಾಗೂ ಮಳೆಯಾಶ್ರಿತ ಪ್ರದೇಶಗಳ ವಿವಿಧ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಜಲಾನಯನ ನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವುದನ್ನು ನಿರೂಪಿಸುವುದಾಗಿರುತ್ತದೆ.
ಉ)	ಕಾರ್ಯಕ್ರಮ/ಪ್ರಾಜೆಕ್ಟ್ ಯೋಜನೆಯ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು (ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)	14.07 ಲಕ್ಷ ಹೇ. ವಿಸ್ತೀರ್ಣದಲ್ಲಿ ಎಲ್.ಆರ್.ಐ. ಕೈಗೊಳ್ಳಲಾಗಿದೆ. ಮುಂದುವರೆದು ಸಂಪೂರ್ಣ ಉಪಚಾರದ ಆಧಾರದ 46709 ಹೆಕ್ಟೇರ್ ಪ್ರದೇಶವನ್ನು ಉಪಚರಿಸಲಾಗಿ, 25148 ಹೆಕ್ಟೇರ್ ಬದು, 1530 ಕೃಷಿ ಹೊಂಡ, 355 ತಡೆ ಅಣೆ, 153 ಗೋಕಟ್ಟೆ, 152 ನಾಲಾಬದು ಗಳನ್ನು ನಿರ್ಮಿಸಲಾಗಿರುತ್ತದೆ. ಹಾಗೂ 17093.95 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕ ಹಾಗೂ

		19208.02 ಹೆಕ್ಟೇರ್ ಪ್ರದೇಶ ಅರಣ್ಯ ಚಟುವಟಿಕೆಗಳನ್ನು ಸಹ ಕೈಗೊಳ್ಳಲಾಗಿರುತ್ತದೆ. 4182 ಭೂ ರಹಿತ ಕುಟುಂಬಗಳಿಗೆ ಕುರಿ / ಮೇಕೆ ವಿತರಿಸಲಾಗಿ 2194 ಸ್ವಸಹಾಯ ಸಂಘದ ಸದಸ್ಯರಿಗೆ ಆದಾಯ ಉತ್ಪನ್ನ ಚುವಟಿಕೆಗಳಡಿ ತರಬೇತಿ ನೀಡಲಾಗಿರುತ್ತದೆ. 3263 ಗ್ರಾಮ ಮಟ್ಟದ ತರಬೇತಿಗಳನ್ನು ಹಮ್ಮಿಕೊಂಡು 441829 ಎಲ್.ಆರ್.ಐ. I ಕಾರ್ಡ್‌ಗಳನ್ನು ರೈತರಿಗೆ ವಿತರಿಸಲಾಗಿರುತ್ತದೆ. ಹಾಗೂ ಡಿಜಿಟಲ್ ಪೋರ್ಟಲ್, ಡಿಜಿಟಲ್ ಲೈಬ್ರರಿ ಮತ್ತು ಡಿ.ಎಸ್.ಎಸ್ ಸಹ ಸ್ಥಾಪಿಸಲಾಗಿರುತ್ತದೆ.
ಊ	ಹಣಕಾಸು (ರೂ. ಲಕ್ಷಗಳಲ್ಲಿ)	ರೂ.3926.00 ಲಕ್ಷಗಳು (ಪರಿಷ್ಕೃತ)

ಯೋಜನೆಯ ಪಾಲುದಾರ ಸಂಸ್ಥೆಗಳು: ಸುಜಲ-III ಯೋಜನೆಯ ವಿವಿಧ ಕಾರ್ಯಚಟುವಟಿಕೆಗಳನ್ನು 15 ಯೋಜನಾ ಪಾಲುದಾರ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡು ಅನುಷ್ಠಾನ ಮಾಡಲಾಗುತ್ತಿದೆ.

ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯಗಳೊಂದಿಗೆ ಸಂಯೋಜನೆಯೊಂದಿಗೆ ಕಾರ್ಯನಿರ್ವಹಿಸಲು ಭೂಸಂಪನ್ಮೂಲ ಸಮೀಕ್ಷೆ (ಎಲ್.ಆರ್.ಐ) ಕಾರ್ಯದ ಮುಂದಾಳತ್ವವನ್ನು ಎನ್.ಬಿ.ಎಸ್.ಎಸ್.&ಎಲ್.ಯು.ಪಿ. ಸಂಸ್ಥೆ ಮತ್ತು ಹೈಡ್ರೋಲಾಜಿಕಲ್ ಅಧ್ಯಯನದ ಮುಂದಾಳತ್ವವನ್ನು ಭಾರತೀಯ ವಿಜ್ಞಾನ ಸಂಸ್ಥೆಗೆ (ಐ.ಐ.ಎಸ್‌ಸಿ.) ವಹಿಸಲಾಗಿರುತ್ತದೆ. ಯೋಜನಾ ಪ್ರದೇಶ ವ್ಯಾಪ್ತಿ ಪ್ರದೇಶಗಳ ಉಪಗ್ರಹ ಆಧಾರಿತ ಬಿಂಬಚಿತ್ರಗಳನ್ನು ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ ಮತ್ತು ಹವಾಮಾನ ವಿವರಗಳನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಕೇಂದ್ರವು ಪಾಲುದಾರ ಸಂಸ್ಥೆಗಳಿಗೆ ಒದಗಿಸಿರುತ್ತವೆ.

KVAFSU ಸಂಸ್ಥೆಯ ಮುಖೇನ ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಅಂಶಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮತ್ತು ಸಂಸ್ಥೆಯು ಅಭಿವೃದ್ಧಿ ಪಡಿಸಿದ ನವೀನ ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗಿದೆ. ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯು ಯೋಜನೆಯ ತಾಂತ್ರಿಕ ಉಸ್ತುವಾರಿ ಮತ್ತು ಮೌಲ್ಯ ಮಾಪನ ಕಾರ್ಯವನ್ನು ಮತ್ತು **TERI** ಸಂಸ್ಥೆಯು ಕ್ಷೇತ್ರಮಟ್ಟದಲ್ಲಿ ಬಾಹ್ಯ ಉಸ್ತುವಾರಿ ಮತ್ತು ಮೌಲ್ಯ ಮಾಪನ ಕಾರ್ಯವನ್ನು ನಿರ್ವಹಿಸಿರುತ್ತದೆ

ಭೂಸಂಪನ್ಮೂಲ ಸಮೀಕ್ಷೆ: ಭೂಸಂಪನ್ಮೂಲ ಸಮೀಕ್ಷೆ ಕಾರ್ಯವನ್ನು ಎನ್.ಬಿ.ಎಸ್.ಎಸ್. & ಎಲ್.ಯು.ಪಿ. ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯಗಳು ಕೈಗೊಂಡಿದ್ದು, ಮುಖ್ಯವಾಗಿ

ಮಣ್ಣಿನ ಪದರಗಳ ಅಧ್ಯಯನ (ಸಾಯಿಲ್ ಪ್ರೊಫೈಲ್), ಮಣ್ಣಿನ ಮಾದರಿಗಳ ವಿಶ್ಲೇಷಣೆ ಮತ್ತು ಭೂ ಫಲವತ್ತತೆಯ ಅಧ್ಯಯನ ಮಾಡಿ ಕಿರುಜಲಾನಯನಗಳ ನಕ್ಷೆ ತಯಾರಿಸಲಾಗಿರುತ್ತ ದೆ. ಮೂಲ ಮಾಹಿತಿ ಸಮೀಕ್ಷೆ ಕೈಗೊಂಡು ವರದಿ ತಯಾರಿಸಲಾಗಿರುತ್ತದೆ.

ಡಿಸೆಂಬರ್-2019 ಅಂತ್ಯದವರೆಗೆ ಸಾಧಿಸಿದ ಕಿರು-ಜಲಾನಯನವಾರು ಭೂ-ಸಂಪನ್ಮೂಲ ಸಮೀಕ್ಷೆ (ಎಲ್.ಆರ್.ಐ) ಕಾರ್ಯದ ಪ್ರಗತಿ ವಿವರ ಕೆಳಕಂಡಂತಿದೆ.

ಕ್ರ. ಸಂ.	ವಿವರಗಳು		ಎನ್.ಬಿ. ಎಸ್. ಎಸ್.ಎಲ್. ಯು.ಪಿ	ಕೃ.ವಿ.ವಿ. ಬೆಂ.	ಕೃ.ವಿ.ವಿ. ಧಾ	ಕೃ.ವಿ.ವಿ. ರಾ	ತೋ.ವಿ.ವಿ ಬಾ	ಕೃ & ತೋ. ವಿ.ವಿ, ಶಿ	ಒಟ್ಟು	%
1	ಎಲ್.ಆರ್.ಐ. ಪೂರ್ಣಗೊಂಡ ಕಿರು ಜಲಾನಯನಗಳ ಸಂಖ್ಯೆ	ಗುರಿ	604	423	633	430	229	215	2534	
		ಸಾಧನೆ	604	423	633	430	229	215	2534	100
2	ತಯಾರಿಸಿರುವ ನಕ್ಷೆಗಳ ಸಂಖ್ಯೆ (ಕನ್ನಡ ಭಾಷೆ)	ಸಾಧನೆ	604	423	633	430	229	215	2534	100
3	ತಯಾರಿಸಿರುವ ನಕ್ಷೆಗಳ ಸಂಖ್ಯೆ (ಆಂಗ್ಲ ಭಾಷೆ)	ಸಾಧನೆ	604	423	633	430	229	215	2534	100
4	ತಯಾರಿಸಿರುವ ಕಿರು-ಜಲಾನಯನ ವಾರು ವರದಿಗಳು	ಸಾಧನೆ	604	423	633	430	229	215	2534	100

ಹೈಡ್ರೋಲಾಜಿಕಲ್ ಅಧ್ಯಯನದ ಪ್ರಗತಿ: ಯೋಜನೆಯಡಿ ಆಯ್ದ 14 ಮಾದರಿ ಕಿರುಜಲಾನಯನಗಳಲ್ಲಿ ಹೈಡ್ರಾಲಜಿ ಅಧ್ಯಯನವನ್ನು ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾನಿಲಯಗಳು ಭಾರತೀಯ ವಿಜ್ಞಾನ ಸಂಸ್ಥೆಯ ಮಾರ್ಗದರ್ಶನದಲ್ಲಿ ಕೈಗೊಳ್ಳುತ್ತಿವೆ. ಅಂತರ್ಜಲ ಮಟ್ಟದ ಏರಿಳಿತದ ಅಧ್ಯಯನ, ಮಣ್ಣಿನ ತೇವಾಂಶದ ವಿಶ್ಲೇಷಣೆ, ಬಾವಿಗಳ ನೀರಿನ ಪ್ರಮಾಣ, ನೀರಿನ ಮಾದರಿಗಳ ವಿಶ್ಲೇಷಣೆ ಇತ್ಯಾದಿ ಕುರಿತು ಮಾಹಿತಿಯನ್ನು ನಿಗದಿತ ಅವಧಿಗಳಲ್ಲಿ ಸಂಗ್ರಹಿಸಿ ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಉಳಿದ ಜಲಾನಯನಗಳಲ್ಲಿ ಒಟ್ಟು 425 ಉಪ-ಜಲಾನಯನ ವಾರು ನಕ್ಷೆಗಳನ್ನು ತಯಾರಿಸಲಾಗಿದೆ.

ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮ: ಯೋಜನೆಯಡಿ ಅಭಿವೃದ್ಧಿಪಡಿಸಿದ ವೈಜ್ಞಾನಿಕ ಮಾಹಿತಿ ಮತ್ತು ತಾಂತ್ರಿಕತೆ ಬಳಸಿ ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮವನ್ನು (Saturation of Watershed) ಎಲ್ಲಾ 11 ಯೋಜನಾ ಜಿಲ್ಲೆಗಳಲ್ಲಿ ಆಯ್ದ ಜಲಾನಯನಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.

ಡಿಜಿಟಲ್ ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ (ಡಿಸಿಶನ್ ಸಪೋರ್ಟ್ ಸಿಸ್ಟಂ) ಮತ್ತು ಭೂ ಸಂಪನ್ಮೂಲ ಪೋರ್ಟಲ್ ಘಟಕಗಳನ್ನು ಅಭಿವೃದ್ಧಿ ಪಡಿಸಿದ್ದು, ಭೂಸಂಪನ್ಮೂಲ ದತ್ತಾಂಶ ಮತ್ತು ನಕ್ಷೆಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ.

ಕರ್ನಾಟಕ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ **(KSNDMC)** ಸಂಸ್ಥೆಯ ಸಹಯೋಗದೊಂದಿಗೆ, ದೈನಂದಿನ ಹವಾಮಾನ ವಿವರಗಳನ್ನು ರೈತರಿಗೆ ನೇರವಾಗಿ ತಲುಪಿಸಲು ಯೋಜನಾ ಪ್ರದೇಶ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರ ಮತ್ತು ಜಂಟಿ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಡಿಜಿಟಲ್ ಪ್ರದರ್ಶನ ಘಟಕಗಳನ್ನು ಅಳವಡಿಸಲಾಗಿರುತ್ತದೆ.

ಭೂಸಂಪನ್ಮೂಲ ಮಾಹಿತಿ (LRI) ಪ್ರಸರಣೆ:

ಭೂ ಸಂಪನ್ಮೂಲ ಮಾಹಿತಿ ಹಾಗೂ ಡಿಜಿಟಲ್ ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ (ಡಿಸಿಶನ್ ಸಪೋರ್ಟ್ ಸಿಸ್ಟಂ) ಮತ್ತು ಭೂ ಸಂಪನ್ಮೂಲ ಪೋರ್ಟಲ್ ಉಪಯುಕ್ತತೆ ಮತ್ತು ಬಳಕೆ ಕುರಿತು ರೈತರಿಗೆ, ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಮತ್ತು ಸಂಬಂಧಿತ ಸಂಸ್ಥೆಗಳಿಗೆ ಮಾಹಿತಿ ಪ್ರಸರಣೆಗಾಗಿ ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿರುತ್ತದೆ.

ಗ್ರಾಮ ಮಟ್ಟದ ತರಬೇತಿ: ಎಲ್.ಆರ್.ಐ. ಕಾರ್ಯ ಕೈಗೊಂಡಿರುವ ಪ್ರದೇಶದಲ್ಲಿನ ರೈತರಿಗೆ ಎಲ್.ಆರ್.ಐ. ಉಪಯುಕ್ತತೆ ಕುರಿತು ಅರಿವು ಮೂಡಿಸಲು ಯೋಜನಾ ಜಿಲ್ಲೆಗಳಲ್ಲಿ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳ ಮೂಲಕ ಗ್ರಾಮ ಮಟ್ಟದ ತರಬೇತಿಗಳನ್ನು ಕೈಗೊಳ್ಳಲಾಗುತ್ತಿದೆ. ಈ ಸಂಬಂಧ, ಪ್ರತಿಯೊಂದು ರೈತ ಸಂಪರ್ಕ ಕೇಂದ್ರಕ್ಕೂ ಒಬ್ಬರಂತೆ ಎಲ್.ಆರ್.ಐ. ಎಕ್ಸ್‌ಟೆಂಷನ್ ಮ್ಯಾನೇಜರ್‌ಗಳನ್ನು ಎಲ್.ಆರ್.ಐ. ಪ್ರಸರಣೆಗೆ ನೆರವು ನೀಡಲು ನಿಯೋಜಿಸಲಾಗಿದೆ. **ICAR-ATARI** ಸಂಸ್ಥೆಯಿಂದ ಯೋಜನಾ ಜಿಲ್ಲೆಗಳಲ್ಲಿ ಸಂಬಂಧಿಸಿದ ಕೃಷಿ ವಿಜ್ಞಾನ ಕೇಂದ್ರ ಮೂಲಕ ಆಯ್ದ **333** ಗ್ರಾಮಗಳಲ್ಲಿ ಗ್ರಾಮ ಮಟ್ಟದ ತರಬೇತಿ ಕೈಗೊಂಡು ಎಲ್.ಆರ್.ಐ. ಕಾರ್ಡ್‌ವಿತರಿಸಲಾಗಿರುತ್ತದೆ. **ATARI** ಮತ್ತು ರೈತ ಸಂಪರ್ಕ ಕೇಂದ್ರಗಳ ಮೂಲಕ ಒಟ್ಟು **3263** ಗ್ರಾಮಮಟ್ಟದ ತರಬೇತಿಗಳನ್ನು ಆಯೋಜಿಸಿದ್ದು **441829** ಎಲ್.ಆರ್.ಐ. ಕಾರ್ಡ್‌ಗಳನ್ನು ವಿತರಿಸಲಾಗಿರುತ್ತದೆ.

ಭೂಸಂಪನ್ಮೂಲ ಮಾಹಿತಿಯ ಕಾರ್ಡ್: ಎಲ್.ಆರ್.ಐ. ಪಾಲುದಾರ ಸಂಸ್ಥೆಗಳು ಎಲ್.ಆರ್.ಐ. ಕಾರ್ಯ ಕೈಗೊಳ್ಳುತ್ತಿರುವ ಪ್ರತಿ ಹಿಡುವಳಿಗಳಿಗೆ ಎಲ್.ಆರ್.ಐ. ಕಾರ್ಡ್‌ಗಳನ್ನು ತಯಾರಿಸಿದ್ದು, ಸಂಬಂಧಿಸಿದ ಜಿಲ್ಲೆಗಳಲ್ಲಿ ಕಾರ್ಡ್ ಮುದ್ರಿಸಿ ಗ್ರಾಮ ಮಟ್ಟದ ತರಬೇತಿ ಕೈಗೊಂಡು ರೈತರಿಗೆ ವಿತರಿಸಲಾಗಿರುತ್ತದೆ.

ಆದಾಯ ಉತ್ಪನ್ನ ಚಟುವಟಿಕೆಗಳ ತರಬೇತಿ **NACER** ಸಂಸ್ಥೆಯು ಹೊಲಿಗೆ ತರಬೇತಿ, ಹೈನುಗಾರಿಕೆ ಇತ್ಯಾದಿ ಆದಾಯ ಉತ್ಪನ್ನ ಚಟುವಟಿಕೆಗಳ ಕುರಿತು ಯೋಜನಾ ವ್ಯಾಪ್ತಿಯ ಸ್ವ-ಸಹಾಯ ಗುಂಪುಗಳ ಶೇ.**50** ರಷ್ಟು ಸದಸ್ಯರಿಗೆ ತರಬೇತಿಗಳನ್ನು ನೀಡಿ **NRLM** ಯೋಜನೆಯೊಂದಿಗೆ ಲಿಂಕ್ ಮಾಡಿ ಚಟುವಟಿಕೆಗಳನ್ನು ಕೈಗೊಳ್ಳಲು ನೆರವು ನೀಡುವ ಕಾರ್ಯ ಕೈಗೊಂಡಿರುತ್ತದೆ.

ಇತರೆ ಯೋಜನಾ ಚಟುವಟಿಕೆಗಳು: ಯೋಜನೆಯಡಿ ಸಂಶೋಧನೆ ಮತ್ತು ಅಭಿವೃದ್ಧಿ, ಸಾಂಸ್ಥಿಕ ಬಲವರ್ಧನೆ ಮತ್ತು ಯೋಜನೆ ಪಾಲುದಾರರ ಮತ್ತು ಫಲಾನುಭವಿಗಳ ಸಾಮರ್ಥ್ಯ ಬಲವರ್ಧನೆ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದಕತೆ ಹೆಚ್ಚಿಸುವುದು, ರೈತ ಉತ್ಪಾದಕಾ ಸಂಘಗಳ ಸ್ಥಾಪನೆ, ಪಶು ಮತ್ತು ಮೀನುಗಾರಿಕೆ ಅಭಿವೃದ್ಧಿ, ಉಸ್ತುವಾರಿ ಮತ್ತು ಮೌಲ್ಯಮಾಪನ, ದಾಖಲೀಕರಣ ಇತ್ಯಾದಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿರುತ್ತದೆ.

ಆರ್ಥಿಕ ವೆಚ್ಚ:

ಯೋಜನೆಗೆ ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಗಳಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಅನುದಾನ ಬಿಡುಗಡೆಯಾಗುತ್ತದೆ.

ಕಳೆದ ಮೂರು ಸಾಲುಗಳಲ್ಲಿ ಯೋಜನೆಯಡಿ ಜಲಾನಯನ ಲಾಖೆ ಮಅಭಿವೃದ್ಧಿ ಇತ್ತು ತೋಟಗಾರಿಕೆ ಇಲಾಖೆಗಳಿಗೆ ಬಿಡುಗಡೆ ಮಾಡಿದ

(ರೂ. ಲಕ್ಷಗಳಲ್ಲಿ)

1. ಗ್ರಾಮೀಣ ಕರ್ನಾಟಕ ಭಾಗಗಳಲ್ಲಿ ಕೃಷಿ ಉತ್ಪಾಧನೆ ಹೆಚ್ಚಿಸುವ ದಿಶೆಯಲ್ಲಿ ಮಳೆಯಾಧಾರಿತ, ಅವನತಿ ಹೊಂದಿದ ಭೂಮಿಗಳಲ್ಲಿ ಭೂಸಂಪನ್ಮೂಲಗಳ ಸುಸ್ಥಿರತೆ ಅಭಿವೃದ್ಧಿಪಡಿಸುವುದು.
2. ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನ ಸಹಭಾಗಿತ್ವದೊಂದಿಗೆ ಸುಸ್ಥಿರತೆ ಅಭಿವೃದ್ಧಿ ಸಾಧಿಸುವುದು ಹಾಗೂ ಮಳೆಯಾಧಾರಿತ, ಅವನತಿ ಹೊಂದಿದ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಜೀವನಾಧಾರಿತ ಉದ್ಯೋಗಾವಕಾಶಗಳನ್ನು ವೃದ್ಧಿಸುವುದು.

ನಮ್ಮ ಧ್ಯೇಯ

ಜನರ ಸಹಭಾಗಿತ್ವದ, ವಿಕೇಂದ್ರೀಕೃತ, ಕಡಿಮೆ ವೆಚ್ಚ, ಅಧಿಕ ಉತ್ಪಾದಿತ, ಪಾರದರ್ಶಕ ಮತ್ತು ಸುಸ್ಥಿರ ಜಲಾನಯನ ಅಭಿವೃದ್ಧಿ ಉಪಚಾರಗಳ ಪ್ಯಾಕೇಜ್ ಅನ್ನು ಕೆಳಕಂಡ ಅವಶ್ಯಕತೆಗಳನ್ನು ಪೂರೈಸಲು ಅಭಿವೃದ್ಧಿಪಡಿಸುವುದು ನಮ್ಮ ಮುಖ್ಯ ಧ್ಯೇಯವಾಗಿದೆ.

1. ಗ್ರಾಮೀಣ ಜನರ ಜೀವನಾವಶ್ಯಕತೆಗಳನ್ನು ಪೂರೈಸುವುದು.
2. ಕಡು ಬಡವರಿಗೆ ಉದ್ಯೋಗ ಮತ್ತು ಆದಾಯ ಉತ್ಪನ್ನ ಚಟುವಟಿಕೆಗಳ ಲಭ್ಯತೆ ಹೆಚ್ಚಿಸುವುದು.
3. ನೈಸರ್ಗಿಕ ಸಂಪನ್ಮೂಲಗಳ ಉತ್ಪಾದನಾ ಸಾಮಥ್ರ್ಯವನ್ನು ಹೆಚ್ಚಿಸುವುದು.
4. ಬಡತನ ನಿವಾರಣೆ ಮಾಡುವುದು ಮತ್ತು ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು, ಸಸ್ಯ ಸಂಪತ್ತು ಮತ್ತು ಜಾನುವಾರು ಸಂಪತ್ತುಗಳ ಅವನತಿಯನ್ನು ತಡೆಯುವುದು.

ಪೀಠಿಕೆ

ಭಾರತ ದೇಶವು ಕೃಷಿ ಪ್ರಧಾನ ದೇಶವಾಗಿದ್ದು, ಶೇ **65** ಕ್ಕಿಂತಲೂ ಹೆಚ್ಚು ಜನ ಸಂಖ್ಯೆಯು ಕೃಷಿಯನ್ನೇ ಅವಲಂಬಿಸಿದೆ. ಭಾರತದ ಕೃಷಿಯು ಮಳೆಯಾಧಾರಿತವಾಗಿದ್ದು, ಈ ಮಳೆಯ ಪ್ರಮಾಣದಲ್ಲಿ ಪ್ರತಿ ವರ್ಷವೂ ಏರಿಳಿತವಾಗುತಿದ್ದು ಒಂದೇ ಸಮನಾಗಿ ಇರುವುದಿಲ್ಲ. ಸರಿ ಸುಮಾರು ಮುಕ್ಕಾಲು ಭಾಗ **(3/4)** ಕೃಷಿ ಯೋಗ್ಯ ಭೂಮಿಯು ಮಳೆಯನ್ನೇ ಅವಲಂಬಿಸಿದೆ.

ಯಾವುದೇ ಒಂದು ಬೆಳೆಯ ಉತ್ಪಾದನಾ ಸಾಮರ್ಥ್ಯವು ಮುಖ್ಯವಾಗಿ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ ಮತ್ತು ನೀರು ಜೊತೆಗೆ ಬೆಳೆ ನಿರ್ವಹಣಾ ಪದ್ಧತಿಗಳ ಮೇಲೆ ಅವಲಂಬಿತವಾಗಿರುತ್ತದೆ. ಆದ್ದರಿಂದ ಈ ಎರಡು ಮುಖ್ಯ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ವೈಜ್ಞಾನಿಕ ಬಳಕೆ ಸುಸ್ಥಿರ ಮಳೆಯಾಧಾರಿತ ಕೃಷಿಗೆ ಅತಿ ಮುಖ್ಯವಾಗಿರುತ್ತದೆ. ಮಳೆಯಾಧಾರಿತ ಸಮಗ್ರ

ಕೃಷಿ ಅಭಿವೃದ್ಧಿಗೆ ಜಲಾನಯನ ಪರಿಕಲ್ಪನೆಯು ಮೂಲ ಮಂತ್ರವಾಗಿದ್ದು, ಇದು ಪ್ರಸ್ತುತ ನಮ್ಮ ಉದ್ದೇಶ ಮತ್ತು ಗುರಿಗಳನ್ನು ತಲುಪುವಲ್ಲಿ ಅತ್ಯಂತ ಪ್ರಮುಖ ಸಾಧನವಾಗಿ ಪರಿಣಮಿಸಿದೆ.

ಕರ್ನಾಟಕದಲ್ಲಿ ಜಲಾನಯನ ಅಭಿವೃದ್ಧಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತಿದೆ. ಏಕೆಂದರೆ, ಸುಮಾರು ಶೇ 75 ರಷ್ಟು ಬೆಳೆ ಪ್ರದೇಶವು ಅತಿ ಕಡಿಮೆ ಮತ್ತು ಅನಿಶ್ಚಿತ ಮಳೆಯನ್ನಾಧರಿಸಿದೆ. ರಾಜ್ಯದ ಒಟ್ಟು ಭೌಗೋಳಿಕ ಪ್ರದೇಶವು **190.50** ಲಕ್ಷ ಹೆಕ್ಟೇರ್ರಷ್ಟಿದ್ದು, ಅದರಲ್ಲಿ **129.70** ಲಕ್ಷ ಹೆಕ್ಟೇರ್ ಪ್ರದೇಶವು ಜಲಾನಯನ ಅಭಿವೃದ್ಧಿಗೆ ಲಭ್ಯವಿರುತ್ತದೆ. ಇದರಲ್ಲಿ **2019-20** ನೇ ಸಾಲಿನ ಮಾರ್ಚ್-**2020** ರ ಅಂತ್ಯಕ್ಕೆ ಸುಮಾರು **70.84** ಲಕ್ಷ ಹೆಕ್ಟೇರ್ರಷ್ಟು ಪ್ರದೇಶವನ್ನು ಉಪಚರಿಸಲಾಗಿದೆ ಇನ್ನುಳಿದ ಸುಮಾರು **58.86** ಲಕ್ಷ ಹೆಕ್ಟೇರ್ ಪ್ರದೇಶವನ್ನ್ನು (ಈ ಪೈಕಿ **6.55** ಲಕ್ಷ ಹೆಕ್ಟೇರ್ ಪ್ರದೇಶವು ಪ್ರಸ್ತುತ ಉಪಚರಿಸಲಾಗುತ್ತಿದೆ) ಜಲಾನಯನ ಅಭಿವೃದ್ಧಿಯಡಿ ಉಪಚರಿಸಲ್ಪಡಬೇಕಿದೆ.

ಕರ್ನಾಟಕದಲ್ಲಿ ಜಲಾನಯನ ಅಭಿವೃದ್ಧಿಯ ಪ್ರಾಮುಖ್ಯತೆ

ಕರ್ನಾಟಕ ರಾಜ್ಯದ ಬರಪೀಡಿತ ಪ್ರದೇಶಗಳ ಅದರಲ್ಲೂ ಸುಮಾರು ಶೇ.79 ರಷ್ಟು ಉಳುಮೆ ಯೋಗ್ಯ ಪ್ರದೇಶದ ಭೂ ಸಂಪನ್ಮೂಲಗಳ ನಿರ್ವಹಣೆಯನ್ನು ಸಂಪನ್ಮೂಲ ರಹಿತ ಬಡರೈತರೇ ನಿರ್ವಹಿಸುತ್ತಿದ್ದಾರೆ. ತೀವ್ರ ಮಣ್ಣಿನ ಕೊಚ್ಚೆಣೆಯಿಂದ, ಮಣ್ಣು ಮತ್ತು ನೀರಿನ ಸಂಪನ್ಮೂಲಗಳು ಕ್ಷೀಣಿಸುವುದರೊಂದಿಗೆ, ಮಣ್ಣಿನ ಫಲವತ್ತತೆ, ಬೆಳೆ ಇಳುವರಿ ಹಾಗೂ ಅಂತರ್ಜಲ ಮಟ್ಟ ಗಣನೀಯವಾಗಿ ಕುಸಿಯುತ್ತಿದೆ. ಅರಣ್ಯ ನಾಶ, ಹುಲ್ಲುಗಾವಲಿನ ನಾಶ ಹಾಗೂ ಜೈವಿಕ ಉತ್ಪತ್ತಿಯು ಗಣನೀಯವಾಗಿ ಕ್ಷೀಣಿಸುತ್ತಿದೆ. ರಾಜ್ಯದಲ್ಲಿ ಬೆಳೆಯುತ್ತಿರುವ ಜನ ಹಾಗೂ ಜಾನುವಾರುಗಳ ಸಂಖ್ಯೆಗನುಗುಣವಾಗಿ ಆಹಾರ, ಹುಲ್ಲು ಮತ್ತು ಉರುವಲಿನ ಅವಶ್ಯಕತೆ ಪೂರೈಸಲು ನಮಗೆ ಉಳಿದಿರುವುದೊಂದೇ ದಾರಿ ಎಂದರೆ ಮಳೆಯಾಶ್ರಿತ ಖುಷ್ಕಿ ಪ್ರದೇಶದ ಉತ್ಪಾದನಾ ಸಾಮರ್ಥ್ಯವನ್ನು ಸುಸ್ಥಿರಗೊಳಿಸುವುದು. ಈ ಸುಸ್ಥಿರ ಅಭಿವೃದ್ಧಿಯು ಸೂಕ್ತ ಮಣ್ಣು ಮತ್ತು ನೀರು ಸಂರಕ್ಷಣಾ ತಂತ್ರಜ್ಞಾನ, ಖುಷ್ಕಿ ಹವಾಮಾನಕ್ಕೆ ಸೂಕ್ತವಾದ ಬೆಳೆ - ತಳಿಗಳ ಅಭಿವೃದ್ಧಿ, ಅತ್ಯುತ್ತಮ ಕೃಷಿ ವಿಸ್ತರಣಾ ಸೇವೆಗಳು ಮತ್ತು ಉತ್ತಮ ಮಾರುಕಟ್ಟೆ, ಸಾಲ ಸೌಲಭ್ಯ ಹಾಗೂ ಉತ್ಪಾದನಾ ಸಾಮಗ್ರಿಗಳ ಲಭ್ಯತೆಯನ್ನು ಸೂಕ್ತ ಸಮಯದಲ್ಲಿ ಖುಷ್ಕಿ ಪ್ರದೇಶದ ರೈತರಿಗೆ ದೂರೆಯುವಂತೆ ಮಾಡವುದು.

ದೇಶದ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಕರ್ನಾಟಕ ರಾಜ್ಯವು ಅತೀ ಹೆಚ್ಚಿನ ಬರಪೀಡಿತ ಪ್ರದೇಶವನ್ನು (ಶೇ.79) ಹೊಂದಿದೆ. ಇಡೀ ದೇಶದಲ್ಲೇ ರಾಜಸ್ಥಾನವನ್ನು ಬಿಟ್ಟರೆ, ಕರ್ನಾಟಕವು ಖುಷ್ಕಿ ಭೂಮಿಯ ವಿಸ್ತೀರ್ಣದಲ್ಲಿ 2ನೇ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ ಜಲಾನಯನ ಅಭಿವೃದ್ಧಿ ಪರಿಕಲ್ಪನೆಯಡಿ ಒಳಪಟ್ಟ ಭೂ ಪ್ರದೇಶ

- ಒಟ್ಟು ಭೌಗೋಳಿಕ ಪ್ರದೇಶ : **190.50** ಲಕ್ಷ ಹೆಕ್ಟೇರ್
- ಉಪಚಾರಕ್ಕೆ ಲಭ್ಯವಿರುವ ಒಟ್ಟು ಪ್ರದೇಶ : **129.70** ಲಕ್ಷ ಹೆಕ್ಟೇರ್
- ಈಗಾಗಲೇ ಉಪಚರಿಸಲ್ಪಟ್ಟ ಪ್ರದೇಶ : **70.84** ಲಕ್ಷ ಹೆಕ್ಟೇರ್

- ಉಪಚಾರಕ್ಕೆ ಬಾಕಿ ಇರುವ ಪ್ರದೇಶ : 58.86 ಲಕ್ಷ ಹೆಕ್ಟೇರ್:

(ಪ್ರಸ್ತುತ ಉಪಚರಿಸುತ್ತಿರುವ ಪ್ರದೇಶವನ್ನೊಳಗೊಂಡು)

- ಉಪಚಾರಕ್ಕೆ ಲಭ್ಯವಾಗದ ಪ್ರದೇಶ : 60.80 ಲಕ್ಷ ಹೆಕ್ಟೇರ್



ಜಲಾನಯನ ಅಭಿವೃದ್ಧಿ ಯೋಜನೆಗಳ ಧ್ಯೇಯೋದ್ದೇಶಗಳು ಮತ್ತು ಗುರಿಗಳು :

1. ಮಣ್ಣಿನ ಸವೆತ, ಕೊಚ್ಚಣೆ ಮತ್ತು ಪೋಷಕಾಂಶಗಳ ನಷ್ಟ ತಡೆಯುವುದು.
2. ಮೇಲ್ಮೈ ನೀರಿನ ಮಟ್ಟ ಮತ್ತು ಅಂತರ್ಜಲದ ಲಭ್ಯತೆಯನ್ನು ಹೆಚ್ಚಿಸುವುದು.
3. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು
4. ಹಸರೀಕರಣದಲ್ಲಿ ಹೆಚ್ಚಳ
5. ಹಾಲಿನ ಉತ್ಪನ್ನ ಮತ್ತು ತೋಟಗಾರಿಕೆ ಉತ್ಪಾದನೆಯನ್ನು ಹೆಚ್ಚಿಸುವುದು
6. ಮೇವಿನ ಹುಲ್ಲು ಮತ್ತು ಉರುವಲಿನ ಲಭ್ಯತೆಯನ್ನು ಹೆಚ್ಚಿಸುವುದು.
7. ಕುಟುಂಬದ ಆದಾಯವನ್ನು ಹೆಚ್ಚಿಸುವುದು
8. ಗ್ರಾಮೀಣ ಸಮುದಾಯದ ಜೀವನ ಮಟ್ಟವನ್ನು ಸುಧಾರಿಸುವುದು.
9. ಸಮುದಾಯ ಆಧಾರಿತ ಸಂಘಟನೆಗಳ ಮುಖಾಂತರ ಸ್ಥಳೀಯ ಸಂಘಸಂಸ್ಥೆಗಳ ಸುಸ್ಥಿರ ಅಭಿವೃದ್ಧಿ.

ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಸರ್ಕಾರೇತರ ಸಂಸ್ಥೆಗಳ ಸಾಂಸ್ಥಿಕ ಬೆಂಬಲದಲ್ಲಿ ಸಮುದಾಯದ ಸಂಘಟನೆ ಮತ್ತು ಬಲವರ್ಧನೆಯನ್ನು ಸಾಧಿಸುವುದು.

ಅಧ್ಯಾಯ-1

ಜಲಾನಯನ ಅಭಿವೃದ್ಧಿಯ ಇತಿಹಾಸ

ಜಲಾನಯನ ಅಭಿವೃದ್ಧಿ ಇಲಾಖೆ (2000ದ ನಂತರ) :

ಕೃಷಿ ಉತ್ಪಾದನೆಯ ಬೆಳವಣಿಗೆಗೆ ಮಣ್ಣು ಮತ್ತು ನೀರು ಸಂರಕ್ಷಣೆಯು ಅತ್ಯಂತ ಮೂಲಭೂತವಾದದ್ದು. ಕರ್ನಾಟಕ ಕೃಷಿ ಇಲಾಖೆಯ ಮುಂದಾಳತ್ವದಲ್ಲಿ ದೊಡ್ಡ ಪ್ರಮಾಣದಲ್ಲಿ ಕ್ಷೇತ್ರ ಬದುಗಳನ್ನು ಹಾಕುವ ಕಾರ್ಯಕ್ರಮ ಹಿಂದಿನಿಂದಲೂ ಚಾಲನೆಯಲ್ಲಿತ್ತು. 2000ನೇ ಸಾಲಿನಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಬದಲಾವಣೆಗಳಾದವು. ಪ್ರತ್ಯೇಕ ಜಲಾನಯನ ಅಭಿವೃದ್ಧಿ ಇಲಾಖೆಯನ್ನು 2000 ವರ್ಷದಲ್ಲಿ ಪಾರಂಭಿಸಲಾಯಿತು. ಜಲಾನಯನ ಅಭಿವೃದ್ಧಿಯನ್ನು ಹೆಚ್ಚು ವೃತ್ತಿಪರವನ್ನಾಗಿ ಮಾಡಲು ಮತ್ತು ಇತರ ಇಲಾಖೆಗಳೊಂದಿಗೆ ಸಹಕಾರ ಮತ್ತು ಸವಾನ್ವಯ ಸಾಧಿಸಲು ಈ ಇಲಾಖೆಯನ್ನು ಪ್ರಾರಂಭಿಸಿ ಜನಸಹಭಾಗಿತ್ವ ಎಂಬ ಚಿಂತನೆಯನ್ನು ಪುನರ್ ಪರಿಶೀಲಿಸಿ, ಪುನರುಚ್ಚರಿಸಿ, ಪುನರ್ ರಚನೆ ಮಾಡಿ ಶಕ್ತಿಯುತಗೊಳಿಸಿ ಇಲಾಖೆಯ ಕಾರ್ಯಕ್ರಮಗಳಾದ ಜನ ಸಹಭಾಗಿತ್ವದೊಂದಿಗೆ ಮಳೆಯಾಶ್ರಿತ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಕಾರ್ಯಕ್ರಮ (2002) ಮತ್ತು ಪ್ರಧೇಶಾಭಿವೃದ್ಧಿ ಕಾರ್ಯಕ್ರಮಗಳಾದ ಡಿಪಿಎಪಿ, ಡಿಡಿಪಿ, ಐಡಬ್ಲ್ಯೂಡಿಪಿ (ಹರಿಯಾಲಿ 2003) ಗಳ ಅನುಷ್ಠಾನ ಪ್ರಾರಂಭವಾಯಿತು. ಕೃಷಿ ಇಲಾಖೆಯಿಂದ ಅನುಷ್ಠಾನವಾಗುವ ಎಲ್ಲಾ ಕಾರ್ಯಕ್ರಮಗಳ ಜೊತೆಗೆ ಪ್ರದೇಶಾಭಿವೃದ್ಧಿ ಯೋಜನೆಗಳು ಜಲಾನಯನ ಅಭಿವೃದ್ಧಿ ಇಲಾಖೆಗೆ 2005 ರಲ್ಲಿ ವರ್ಗಾವಣೆಯಾದವು.

ಕರ್ನಾಟಕದಲ್ಲಿ ಪ್ರತ್ಯೇಕ ಜಲಾನಯನ ಅಭಿವೃದ್ಧಿ ಇಲಾಖೆಯ ಪ್ರಾರಂಭ:

ರಾಜ್ಯದಲ್ಲಿ ನಿರಂತರವಾಗಿ ಹೆಚ್ಚುತ್ತಿರುವ ಜನ ಸಂಖ್ಯೆಗನುಗುಣವಾಗಿ ಆಹಾರದ ಬೇಡಿಕೆಯು ಹೆಚ್ಚುತ್ತಿರುವುದರಿಂದ ಉತ್ಪಾದಕತೆಯನ್ನು ಹೆಚ್ಚಿಸಲು ಮಳೆ ಆಶ್ರಿತ ಪ್ರದೇಶವನ್ನು ಜಲಾನಯನ ಪದ್ಧತಿಯಡಿ ತರುವುದು ಅವಶ್ಯ ಮತ್ತು ಅನಿವಾರ್ಯವೂ ಹೌದು.

ವಿವಿಧ ಇಲಾಖೆಗಳು ಎಂದರೆ ಕೃಷಿ ಇಲಾಖೆಯಲ್ಲಿ ವಿವಿಧ ಮಣ್ಣು ಮತ್ತು ನೀರು ಸಂರಕ್ಷಣಾ ಕಾರ್ಯಕ್ರಮಗಳು ಮತ್ತು ಜಲಾನಯನ ಯೋಜನೆಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಂದ ಅನುಷ್ಠಾನವಾಗುವ ಜಲಾನಯನ ಆಧಾರದ ಅಭಿವೃದ್ಧಿ ಕಾರ್ಯಕ್ರಮಗಳು, ತೋಟಗಾರಿಕೆ, ಅರಣ್ಯ ಮತ್ತು ಪಶು ಸಂಗೋಪನೆ ಇಲಾಖೆಗಳಿಂದಲೂ ವಿವಿಧ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯಾ ಇಲಾಖೆಗಳೇ ಅನುಷ್ಠಾನ ಮಾಡುತ್ತಿದ್ದವು. ಇದಲ್ಲದೆ ಜಲಾನಯನ ಅಭಿವೃದ್ಧಿಯಲ್ಲಿ ಇತರ ಮುಖ್ಯ ಅಂಶಗಳೆಂದರೆ ಭೂರಹಿತ ಆದಾಯ ಉತ್ಪನ್ನ ಚಟುವಟಿಕೆಗಳು, ಸರ್ಕಾರೇತರ ಮತ್ತು ಗ್ರಾಮೀಣ ಸಂಸ್ಥೆಗಳ ಸಹಭಾಗಿತ್ವ. ಆದ್ದರಿಂದ ಕರ್ನಾಟಕ ಸರ್ಕಾರವು ವಿವಿಧ ಅಂಶಗಳನ್ನು ಪರಿಗಣಿಸಿ ಹಾಗೂ ಯೋಜನೆಗೆ ವಿಶ್ವಬ್ಯಾಂಕ್‌ನಿಂದ ನೆರವು ಪಡೆಯುವಾಗ ನೀಡಿದ ವಾಗ್ದಾನವನ್ನು ಒಳಗೊಂಡಂತೆ ಯೋಜನೀಕರಣ ಅನುಷ್ಠಾನ ಮತ್ತು ಮೇಲ್ವಿಚಾರಣೆಗಳ ಸಮನ್ವಯವನ್ನು ಸಾಧಿಸಲು ಹೊಸದಾಗಿ ಪ್ರತ್ಯೇಕವಾಗಿ ಬಹು ವಿಭಾಗೀಯ ತಂಡದ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಸ್ಥಾಪಿಸುವುದು ಸೂಕ್ತವೆಂದು ನಿರ್ಧರಿಸಲಾಯಿತು.

ಸರ್ವತೋಮುಖ ಮತ್ತು ಸಮಗ್ರ ಜಲಾನಯನ ಅಭಿವೃದ್ಧಿಯ ಪ್ರಮುಖ ಉದ್ದೇಶದಿಂದ ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: ಎಎಚ್‌ಡಿ/206/ಎಎಂಎಲ್/94/(ಸಂ.III) ದಿನಾಂಕ: 31-12-1999 ರಲ್ಲಿ 01-04-2000 ರಿಂದ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿತು. ಈ ಇಲಾಖೆಗೆ ಕೃಷಿ, ಭೂಸಂರಕ್ಷಣೆ, ಅರಣ್ಯೀಕರಣ, ತೋಟಗಾರಿಕೆ, ಪಶು ಸಂಗೋಪನೆ, ಹುಲ್ಲುಗಾವಲು ಅಭಿವೃದ್ಧಿ, ಆದಾಯ ಉತ್ಪನ್ನ ಚಟುವಟಿಕೆಗಳ ಸೂತ್ರೀಕರಣ, ಯೋಜನೀಕರಣ ಮತ್ತು ಅನುಷ್ಠಾನ ಕ್ರಮಗಳ ಸಮನ್ವಯ ಮತ್ತು ಸಮಗ್ರ ರೀತಿಯಲ್ಲಿ ಜಲಾನಯನ ಅಭಿವೃದ್ಧಿ ಆಧಾರದ ಮೇಲೆ ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ವಹಿಸಲಾಗಿದೆ.

ಅಧ್ಯಾಯ-2

ಜಲಾನಯನ ಅಭಿವೃದ್ಧಿ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಜಲಾನಯನ ಕಾರ್ಯಕ್ರಮಗಳು / ಯೋಜನೆಗಳು.

1.ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ - ಜಲಾನಯನ ಅಭಿವೃದ್ಧಿ ಮತ್ತು ಇತರೆ ಉಪಚಾರಗಳು (ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ)

ಅ)	ಯೋಜನೆಯ ಹೆಸರು ಮತ್ತು ಜಾರಿಗೊಳಿಸಿದ ವರ್ಷ	ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ ಜಲಾನಯನ ಅಭಿವೃದ್ಧಿ ಜಾರಿಗೊಳಿಸಿದ ವರ್ಷ 2009-10
ಆ)	ಆಯವ್ಯಯ ಶೀರ್ಷಿಕೆ	2402-00-102-0-30 (ಯೋಜನೆ)
ಇ)	ಯೋಜನೆ ಅಡಿಯಲ್ಲಿ ಇದ್ದಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲು	60:40 ಅನುಪಾತದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನವನ್ನು ಭರಿಸುತ್ತವೆ. ಸಮತಟ್ಟಾದ ಪ್ರದೇಶದಲ್ಲಿ ರೂ. 12000/ಹೆಕ್ಟೇರ್, ಮರುಭೂಮಿ ಮತ್ತು ಗುಡ್ಡ ಗಾಡು ಪ್ರದೇಶದಲ್ಲಿ ರೂ. 15000/ಹೆಕ್ಟೇರ್
ಈ)	ಯೋಜನೆಯ ಉದ್ದೇಶಗಳು	▪ ಮಣ್ಣು, ತೇವಾಂಶ ಮತ್ತು ಪೋಶಕಾಂಶಗಳನ್ನು ಸಂರಕ್ಷಿಸುವುದು. ಅಂತರ್ಜಲವನ್ನು ಅಭಿವೃದ್ಧಿಗೊಳಿಸುವುದು. ▪ ಕೃಷಿ, ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ ಮೂಲಕ "ಹಸಿರು ಹೊದಿಕೆ'' ಯನ್ನು ವೃದ್ದಿಗೊಳಿಸುವುದು, ▪ ಮೇವು ಮತ್ತು ಉರವಲು ಪೂರೈಕೆಯನ್ನು ಉತ್ತಮಗೊಳಿಸುವುದು.

		▪ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು. ▪ ಸಮುದಾಯ ಸಂಘಟನೆ ಮತ್ತು ಸಾಮರ್ಥ್ಯ ಬಲವರ್ಧನೆ ಹಾಗೂ ಪಶು ಸಂಪತ್ತಿನ ಅಭಿವೃದ್ಧಿಯನ್ನು ಉತ್ತೇಜಿಸುವುದು. ▪ ಭೂ ರಹಿತರಿಗೆ ಜೀವನಾಧಾರಿತ ಬೆಂಬಲ ಚಟುವಟಿಕೆಗಳನ್ನು ಒದಗಿಸುವುದು. ▪ ಉತ್ಪಾದನಾ ವ್ಯವಸ್ಥೆ ಮತ್ತು ಆದಾಯ ಉತ್ಪನ್ನ ಚಟುವಟಿಕೆಗಳು ಮತ್ತು ಕಿರು ಉದ್ದಿಮೆಗಳನ್ನು ಪ್ರೋತ್ಸಾಹಿಸುವುದು. ▪ ಹರಿಯುವ ನೀರಿನ ಪರಿಣಾಮಕಾರಿ ನಿರ್ವಹಣೆ ಮತ್ತು ಸುಧಾರಿತ ಮಣ್ಣು ಹಾಗೂ ತೇವಾಂಶ ಸಂರಕ್ಷಣೆ ಕಾರ್ಯಕ್ರಮಗಳ ಜಲಾನಯನ ಉಪಚಾರಗಳನ್ನು ಮೇಲ್‌ಸ್ಥರ, ಮಧ್ಯಸ್ಥರ ಮತ್ತು ಕೆಳಸ್ಥರಗ¼ಲ್ಲಿ ಕೈಗೊಳ್ಳುವುದು. ಮಳೆನೀರು ಕೊಯ್ಲಿನ ಮುಖೇನ ಮೂಲ ತೇವಾಂಶ ಸಂರಕ್ಷಣೆ ಮತ್ತು ಇತರ ಜಲಾನಯನ ಆಧಾರಿತ ಚಟುವಟಿಕೆಗಳ ಅನುಷ್ಠಾನ ಮಾಡುವುದು. ▪ ಮಳೆಯಾಶ್ರಿತ ಪ್ರದೇಶಗಳಲ್ಲಿ ಸಾಂಪ್ರಾಧಾಯಿಕ ನೀರಿನ ಮೂಲಗಳ ನವೀಕರಣ ಸೇರಿದಂತೆ, ನೀರಿನ ಮೂಲಗಳ ಸೃಷ್ಟಿಗೆ ಸದರಿ ಕಾರ್ಯಕ್ರಮಗಳನ್ನು ನರೇಗಾ ಕಾರ್ಯಕ್ರಮದ ಜೊತೆ ಒಗ್ಗೂಡಿಸಿ ಅನುಷ್ಠಾನ ಮಾಡುವುದು.
ಊ)	ಕಾರ್ಯಕ್ರಮ/ಪ್ರಾಜೆಕ್ಟ್ ಯೋಜನೆಯ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು (ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)	**2019-20** ನೇ ಸಾಲಿನಲ್ಲಿ ಗ್ರಾಮೀಣ ಭಾಗದ ಯೋಜನಾ ವ್ಯಾಪ್ತಿಯ ರೈತರ ಜಮೀನಿನಲ್ಲಿ ಮಾರ್ಚ್-**2020** ರ ಅಂತ್ಯಕ್ಕೆ ಒಟ್ಟು **92451** ಹೆಕ್ಟೇರ್ ಪ್ರದೇಶವನ್ನು ವಿವಿಧ ಜಲಾನಯನ ಚಟುವಟಿಕೆಗಳ ಮುಖೇನ ಉಪಚರಿಸಲಾಗಿದೆ. ಒಟ್ಟು **4294** ನೀರು ಸಂಗ್ರಹಣಾ ವಿನ್ಯಾಸಗಳನ್ನು ರಚಿಸುವುದರ ಮೂಲಕ ಸುಮಾರು **9661** ಹೆಕ್ಟೇರ್ ಮಳೆಯಾಶ್ರಿತ ಪ್ರಧೇಶವನ್ನು ಹೆಚ್ಚುವರಿ ರಕ್ಷಣಾತ್ಮಕ ನೀರಾವರಿ ಪ್ರದೇಶಕ್ಕೆ ಒಳಪಡಿಸಲಾಗಿದೆ ಹಾಗೂ **19,735**

		ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಅರಣ್ಯ ಮತ್ತು ಖುಷ್ಕಿ ತೋಟಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ..
ಊ	ಹಣಕಾಸು (ರೂ. ಲಕ್ಷಗಳಲ್ಲಿ)	ರೂ.16600.00 ಲಕ್ಷಗಳು

ವೆಚ್ಚ: ರೂ. ಲಕ್ಷಗಳಲ್ಲಿ

2017-18		ಪರಿಷ್ಕೃತ ಅಂದಾಜು 2018-19		ಆಯವ್ಯಯ ಅಂದಾಜು 2019-20	
ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ(ಮಾರ್ಚ್-2020ರ ಅಂತ್ಯಕ್ಕೆ)
71886.00	40667.67	58369.00	46006.00	28395.02	25508.94

ಭೌತಿಕ ಸಾಧನೆ: ಘಟಕ: ಹೆಕ್ಟೇರ್

2017-18		2018-19		2019-20	
ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ ಮಾರ್ಚ್-2020ರ ಅಂತ್ಯಕ್ಕೆ)
2,00,259	1,36,258 ಹೇಕ್ಟೇರ್/ 10717 ನೀರು ಸಂಗ್ರಹಣಾ ವಿನ್ಯಾಸಗಳು	1,50,516	2,34,400 ಹೇಕ್ಟೇರ್/ 9148 ನೀರು ಸಂಗ್ರಹಣಾ ವಿನ್ಯಾಸಗಳು	82918ಹೆ. 2837 ನೀರು ಸಂಗ್ರಹಣಾ ವಿನ್ಯಾಸಗಳು	92451 ಹೆ. 4294 ನೀರು ಸಂಗ್ರಹಣಾ ವಿನ್ಯಾಸಗಳು

ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ (ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ) ಯೋಜನೆಯನ್ನು 2009-10 ನೇ ಸಾಲಿನಿಂದ ರಾಜ್ಯದ 29 ಜಿಲ್ಲೆಗಳ 165 ತಾಲ್ಲೂಕುಗಳಲ್ಲಿ ಒಟ್ಟು 569 ಯೋಜನೆಗಳನ್ನು ಪ್ರಾರಂಭಿಸಲಾಗಿದೆ. 2018-19ನೇ ಸಾಲಿನಲ್ಲಿ 31.8.2019 ರಿಂದ ಬ್ಯಾಚ್-V ಮತ್ತು ಬ್ಯಾಚ್- VI ರ 132 ಯೋಜನೆಗಳನ್ನು ರಾಜ್ಯದಲ್ಲಿ ಸ್ಥಗಿತಗೊಳಿಸಲಾಗಿದೆ.

2019-20 ನೇ ಸಾಲಿನಲ್ಲಿ 116 ಬ್ಯಾಚ್-III ಮತ್ತು 67 ಬ್ಯಾಚ್-IV ರ ಯೋಜನೆಗಳು ಮಾತ್ರ ಚಾಲ್ತಿಯಲ್ಲಿದ್ದು ಉಳಿಕೆ ಕಾಮಗಾರಿ/ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗಿದೆ. ಈ ಯೋಜನೆಗಳು

ಮಾರ್ಚ್-2020 ಕ್ಕೆ ಅಂತ್ಯಗೊಳ್ಳಬೇಕಿತ್ತು, ಆದರೆ ಕೇಂದ್ರ ಸರ್ಕಾರದ ಸೂಚನೆಯಂತೆ ಈ ಯೋಜನೆಗಳನ್ನು ಆಗಸ್ಟ್-2020 ರ ಅಂತ್ಯದವರೆಗೆ ಮುಂದುವರೆಸಲಾಗಿದೆ. ಕ್ಷೇತ್ರ ಮಟ್ಟದಲ್ಲಿ ಸಿಬ್ಬಂದಿಗಳು/ಅಧಿಕಾರಿಗಳ ಪೂರ್ಣಮಟ್ಟದಲ್ಲಿ ನೇಮಕಾತಿಯ ಅತ್ಯವಶ್ಯಕವಾಗಿರುತ್ತದೆ. ಇದರಿಂದಾಗಿ ಕ್ಷೇತ್ರ ಮಟ್ಟದಲ್ಲಿ ಯೋಜನೆಯ ಉಪಯೋಗಗಳನ್ನು ಪಲಾನುಭವಿಗಳಿಗೆ ತಲುಪಿಸಿ, ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಹಕಾರಿಯಾಗಿರುತ್ತದೆ.

ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ–ಜಲಾನಯನ ಅಭಿವೃದ್ಧಿ (ಹಿಂದಿನ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮ) ಯೋಜನೆಯಡಿ ಬ್ಯಾಚ್-I ಮತ್ತು ಬ್ಯಾಚ-II ರ ಯೋಜನೆಗನ್ನು ಕ್ರಮವಾಗಿ ಮಾರ್ಚ-2017 ಮತ್ತು ಮಾರ್ಚ್-2018 ರ ಅಂತ್ಯಕ್ಕೆ ಮುಕ್ತಾಯಗೊಂಡಿದ್ದು. ಎಲ್ಲಾ 246 ಯೋಜನೆಗಳ ಅಂತಿಮ ಮುಕ್ತಾಯ ಮತ್ತು ಮೌಲ್ಯಮಾಪನ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.

ಬ್ಯಾಚ್-III ಮತ್ತು ಬ್ಯಾಚ-IV ರ ಜಲಾನಯನ ಯೋಜನೆಗಳ ಉಸ್ತುವಾರಿ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲೀಕರಣಕ್ಕಾಗಿ ಮೆ. ರಿಮೋಟ್ ಸೆನ್ಸಿಂಗ್ ಇನ್‌ಸ್ಟ್ರುಮೆಂಟ್ಸ್, ಹೈದರಾಬಾದ್ (M/s RSI) ಸಂಸ್ಥೆಯನ್ನು ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ಕಂದಾಯ ವಿಭಾಗಗಳಿಗೆ ಆಯ್ಕೆಮಾಡಿ, ಉಸ್ತುವಾರಿ, ಮೌಲ್ಯಮಾಪನ, ಕಲಿಕೆ ಮತ್ತು ದಾಖಲೀಕರಣ ಕಾರ್ಯಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

II. ಜಲಾನಯನ ಅಭಿವೃದ್ಧಿಯ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮ

ಅ)	ಯೋಜನೆಯ ಹೆಸರು ಮತ್ತು ಜಾರಿಗೊಳಿಸಿದ ವರ್ಷ	ಜಲಾನಯನ ಅಭಿವೃದ್ಧಿಯ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮ ಜಾರಿಗೊಳಿಸಿದ ದಿನಾಂಕ 5ನೇ ನವಂಬರ್ 2019 ರಿಂದ (2019-20)
ಆ)	ಆಯವ್ಯಯ ಶೀರ್ಷಿಕೆ	4402-00-102-0-05
ಇ)	ಯೋಜನೆ ಅಡಿಯಲ್ಲಿ ಇದ್ದಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲು	ಸಂಪೂರ್ಣ ರಾಜ್ಯ ಸರ್ಕಾರದ ಕಾರ್ಯಕ್ರಮ
ಈ)	ಯೋಜನೆಯ ಉದ್ದೇಶಗಳು	• ಭೂ ಸಂಪನ್ಮೂಲ ಮಾಹಿತಿಯ ಆಧಾರದ ಮೇಲೆ ಮತ್ತು/ಅಥವಾ ವೈಜ್ಞಾನಿಕ ಜಲಾನಯನ ತತ್ವದ ಮೇಲೆ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ತಮವಾಗಿ ನಿರ್ವಹಿಸಿ ಮಳೆಯಾಶ್ರಿತ ಪ್ರದೇಶದ ಕೃಷಿ ಭೂಮಿಯ ಫಲವತ್ತತೆ ಹಾಗೂ ಅದರ ಉತ್ಪನ್ನ

		ಶಕ್ತಿಯನ್ನು ಹೆಚ್ಚಿಸುವುದು. • ಮಣ್ಣು ಮತ್ತು ನೀರಿನ ಸಂರಕ್ಷಣೆ ಹಾಗೂ ಅಂತರ್ಜಲ ಮರುಪೂರಣವನ್ನು ಸುಧಾರಿಸುವುದು. • ತೇವಾಂಶ ಲಭ್ಯತೆ ಹಾಗೂ ರಕ್ಷಾಣಾತ್ಮಕ ನೀರಾವರಿಗೆ ಮಳೆ ನೀರು ಕೊಯ್ಲು ಕ್ರಮಗಳನ್ನು ಅಳವಡಿಸುವುದು. • ವ್ಯವಸಾಯ ಯೋಗ್ಯವಲ್ಲದ ಭೂಮಿಯನ್ನು ಕೃಷಿ ಯೋಗ್ಯ ಭೂಮಿಯನ್ನಾಗಿ ಪರಿವರ್ತಿಸುವುದು. • ಜಲಾನಯನ ಪ್ರದೇಶದಲ್ಲಿ ವಾಸಿಸುತ್ತಿರುವ ಜನರ ಜೀವನ ಮಟ್ಟ ಸುಧಾರಣೆಗೊಳಿಸುವುದರೊಂದಿಗೆ, ಆಸ್ತಿ ರಹಿತ ದುರ್ಬಲ ವರ್ಗದ ಜನರಿಗೆ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯ ನೀಡುವುದು ಮತ್ತು ಗುಣಮಟ್ಟದ ಕೌಶಲ್ಯ ಆಧಾರಿತ ತರಬೇತಿಯ ಮೂಲಕ, ಸ್ಥಳೀಯವಾಗಿ ಉದ್ಯೋಗವಕಾಶಗಳನ್ನು ಒದಗಿಸುವುದು. • ಯೋಜನಾ ಪ್ರದೇಶದ ವ್ಯಾಪ್ತಿಯ ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಮೂಲಕ ಮಣ್ಣಿನ ಆರೋಗ್ಯ ಸುಧಾರಿಸುವುದು • ಜಲಾನಯನ ಪ್ರದೇಶದಲ್ಲಿ ಹಸಿರು ಹೊದಿಕೆಯ ಹೆಚ್ಚಳ • ಇಂಧನ, ಮೇವು ಉತ್ಪಾದನೆ ಮತ್ತು ಹಾಲು ಉತ್ಪಾದನೆಯಲ್ಲಿ ಹೆಚ್ಚಳ • ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆ ಮಾಡಲು ಸ್ಥಳೀಯ ಸಮುದಾಯ ಸಂಘಟನೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.

ಊ)	ಕಾರ್ಯಕ್ರಮ/ಪ್ರಾಜೆಕ್ಟ್ ಯೋಜನೆಯ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು (ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)	ಈ ಯೋಜನೆಯನ್ನು 5ನೇ ನವಂಬರ್ 2019 ರಿಂದ ರಾಜ್ಯದಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಯೋಜನೆಯ ಪ್ರಾರಂಭಿಕ ಹಂತದ ಚಟುವಟಿಕೆಗಳಾದ ಪ್ರವೇಶ ದ್ವಾರ ಚಟುವಟಿಕೆ, ಅರಿವು ಮೂಡಿಸುವ ಕಾರ್ಯಕ್ರಮ ಗಳನ್ನು ಪ್ರಸಕ್ತ ವರ್ಷದಲ್ಲಿ ಅನುಷ್ಠಾನ ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ. ಈ ಯೋಜನೆಯಡಿ ಇದುವರೆವಿಗೂ 300 ನೀರು ಸಂಗ್ರಹಣಾ ವಿನ್ಯಾಸಗಳು 99,930 ಮನೆಯಂಗಳ ಕೈತೋಟ ಕಾರ್ಯಕ್ರಮವನ್ನು ಹಾಗೂ 288 ಡೌನರ್ಸ್ ಹಸು ಎತ್ತುವ ಸಾಧನಗಳನ್ನು ವಿತರಿಸಲಾಗಿದೆ. 18,400 ಜನ ಫಲಾನುಭವಿಗಳಿಗೆ ಸಹಾಯ ಮಾಡಲಾಗಿದೆ.
ಊ	ಹಣಕಾಸು (ರೂ. ಲಕ್ಷಗಳಲ್ಲಿ)	ರೂ.2500.00 ಲಕ್ಷಗಳು

ವೆಚ್ಚ: (ರೂ.ಲಕ್ಷಗಳಲ್ಲಿ)

2017-18		ಪರಿಷ್ಕೃತ ಅಂದಾಜು 2018-19		ಆಯವ್ಯಯ ಅಂದಾಜು 2019-20	
ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)	ವೆಚ್ಚ	ಅನುದಾನ ಬಿಡುಗಡೆ (ಪ್ರಾ.ಶಿ.ಸೇರಿದಂತೆ)
-	-	-	-	2500.00	2368.79

ಭೌತಿಕ ಸಾಧನೆ: ಘಟಕ: ಹೆಕ್ಟೇರ್

2017-18		2018-19		2019-20	
ಗುರಿ	ಸಾಧನೆ	ಗುರಿ	ಗುರಿ	ಸಾಧನೆ	ಗುರಿ
-	-	-	-	400 (ನೀರು ಸಂಗ್ರಹಣಾ ವಿನ್ಯಾಸಗಳು)	300 ನೀರು ಸಂಗ್ರಹಣಾ ವಿನ್ಯಾಸಗಳು, 288 ಹಸು ಎತ್ತುವ ಸಾಧನಗಳು

ಜಲಾನಯನ ಅಭಿವೃದ್ಧಿಯ ಮೂಲಕ ಬರಗಾಲ ತಡೆಯುವಿಕೆ ಕಾರ್ಯಕ್ರಮವನ್ನು 2019-20 ನೇ ಸಾಲಿನಿಂದ ರಾಜ್ಯದ 29 ಜಿಲ್ಲೆಗಳ 100 ಬರಪೀಡಿತ ಮತ್ತು ಅಂತರ್ಜಲ ಶೋಷಿತ ತಾಲ್ಲೂಕುಗಳಲ್ಲಿ ಒಟ್ಟು 100 ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ಪ್ರತಿ ತಾಲ್ಲೂಕಿನಲ್ಲಿ 3000 ರಿಂದ 5000 ಹೆಕ್ಟೇರ್ ಪ್ರದೇಶವನ್ನು ಭೂ ಸಂಪನ್ಮೂಲ ಸಮೀಕ್ಷೆಯ ಆಧಾರದ ಮೇಲೆ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣ ಉಪಚಾರದ ವಿಧಾನದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಮತ್ತು ಪ್ರಧಾನಮಂತ್ರಿ ಕೃಷಿ ಸಿಂಚಯಿ ಯೋಜನೆ ಕಾರ್ಯಕ್ರಮದೊಡನೆ ಒಗ್ಗೂಡಿಸಿ ಬರ ನಿರೋಧಕ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗುವುದು. ಈ ಕಾರ್ಯಕ್ರಮವನ್ನು ಜಲಾನಯನ ಸಮಿತಿಗಳ ಮೂಲಕ ಅನುಷ್ಠಾನ ಮಾಡಲಾಗುವುದು.

III. ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆಯ -II (ಸುಜಲ-III)

ಜಲಾನಯನ ಅಭಿವೃದ್ಧಿ ಇಲಾಖೆಯು ವಿಶ್ವಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-(ಸುಜಲ-III) 2013-14ನೇ ಸಾಲಿನಿಂದ ರಾಜ್ಯದ 12 ಜಿಲ್ಲೆಗಳಾದ ಚಾಮರಾಜನಗರ, ದಾವಣಗೆರೆ, ತುಮಕೂರು, ಚಿಕ್ಕಮಗಳೂರು, ರಾಯಚೂರು, ಕೊಪ್ಪಳ, ಕಲಬುರಗಿ, ಯಾದಗಿರಿ, ಗದಗ, ಬೀದರ್, ಬಳ್ಳಾರಿ ಮತ್ತು ವಿಜಯಪುರ ಜಿಲ್ಲೆಗಳ ಆಯ್ದ 2534 ಕಿರುಜಲಾನಯನಗಳಲ್ಲಿ ಡಿಸೆಂಬರ್ 2019 ರವರೆಗೆ ಅನುಷ್ಠಾನಗೊಳಿಸಲಾಗಿರುತ್ತದೆ. ಯೋಜನಾ ಮೊತ್ತವನ್ನು ರೂ.412.59 ಕೋಟಿ ಮೊತ್ತಕ್ಕೆ ಪರಿಷ್ಕರಿಸಲಾಗಿದ್ದು, ರೂ.102.74 ಕೋಟಿ ಅನುದಾನವನ್ನು ತೋಟಗಾರಿಕೆ ಘಟಕಕ್ಕೆ ನಿಗದಿಪಡಿಸಲಾಗಿದ್ದು, ತೋಟಗಾರಿಕೆ ಇಲಾಖೆ ಮೂಲಕ ಅನುಷ್ಠಾನಗೊಳಿಸಲಾಗಿದೆ. ಯೋಜನೆಯು ಡಿಸೆಂಬರ್-2019 ಕ್ಕೆ ಮುಕ್ತಾಯಗೊಂಡಿರುತ್ತದೆ.

ಸುಜಲ-III ಯೋಜನೆಯು ಮಳೆಯಾಶ್ರಿತ ಪ್ರದೇಶಗಳಲ್ಲಿ ಯೋಜನೆಗಳ ಸಮಗ್ರ ಒಗ್ಗೂಡಿಸುವುದು, ಸಂಶೋಧನೆ, ಅಭಿವೃದ್ಧಿ ಮತ್ತು ನವೀನತೆ, ಸಾಂಸ್ಥಿಕ ಬಲವರ್ಧನೆ ಮತ್ತು ಸಾಮರ್ಥ್ಯ ಬಲವರ್ಧನೆ, ತೋಟಗಾರಿಕೆ ಅಭಿವೃದ್ಧಿ ಮತ್ತು ಯೋಜನೆ ನಿರ್ವಹಣೆ ಮತ್ತು ಸಮನ್ವಯ ಘಟಕಗಳನ್ನು ಹೊಂದಿರುತ್ತದೆ.

ಯೋಜನಾ ಕ್ಷೇತ್ರಗಳಲ್ಲಿ ಭೂ ಮತ್ತು ಜಲ ಸಂಪನ್ಮೂಲ, ಸಾಮಾಜಿಕ-ಆರ್ಥಿಕ, ಹವಾಮಾನ ಮಾಹಿತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ದತ್ತಾಂಶ/ಮಾಹಿತಿಯನ್ನು ವಿವಿಧ ವೈಜ್ಞಾನಿಕ ವಿಧಾನಗಳ ಮೂಲಕ ಪಾಲುದಾರ ಸಂಸ್ಥೆಗಳ ಮೂಲಕ ಸಂಗ್ರಹಿಸಿ ಸಹಭಾಗಿತ್ವದಲ್ಲಿ ಕಿರು ಜಲಾನಯನಗಳ ಅಭಿವೃದ್ಧಿ ಯೋಜನೆಗಳನ್ನು ಹೆಚ್ಚು ನಿಖರವಾಗಿ ತಯಾರಿಸಲು ಮತ್ತು ಈ ಮೂಲಕ ಪರಿಣಾಮಕಾರಿಯಾಗಿ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು, ಅಲ್ಲದೇ, ಯೋಜನೆಯಡಿ ಸಂಗ್ರಹಿಸಿದ ದತ್ತಾಂಶ / ಮಾಹಿತಿ ಬಳಸಿಕೊಂಡು ಡಿಜಿಟಲ್

ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ (ಡಿಸಿಶನ್ ಸಪೋರ್ಟ್ ಸಿಸ್ಟಂ) ಮತ್ತು ಭೂ ಸಂಪನ್ಮೂಲ ಪೋರ್ಟಲ್‌ಗಳನ್ನು ಸ್ಥಾಪಿಸಿ ಕೃಷಿ ಅಭಿವೃದ್ಧಿಗೆ, ರೈತರ ಲಾಭಕ್ಕೆ ಮತ್ತು ಮಾಹಿತಿ ಹಾಗೂ ಅಗತ್ಯ ಮಾಹಿತಿ ಹಾಗೂ ಜ್ಞಾನದ ವಿನಿಮಯ ಮೂಲಕ ವಿವಿಧ ಭೂ-ಸಂಬಂದಿತ ಅಭಿವೃದ್ಧಿ ಇಲಾಖೆಗಳು ತಮ್ಮ ಇಲಾಖಾ ಯೋಜನೆಗಳನ್ನು ಉತ್ತಮವಾಗಿ ಯೋಜಿಸಲು, ಒಗ್ಗೂಡಿಸಿ ಅನುಷ್ಠಾನಗೊಳಿಸಲು ಉಪಯೋಗಿಸಲು ಲಭ್ಯವಾಗುವಂತೆ ವ್ಯವಸ್ಥೆ ಕಲ್ಪಿಸುವುದು ಯೋಜನೆಯ ಚಟುವಟಿಕೆಗಳ ಮುಖ್ಯ ಗುರಿಯಾಗಿರುತ್ತದೆ.

ಯೋಜನೆಯ ವಿವರ ಈ ಕೆಳಕಂಡಂತಿದೆ:

ಅ)	ಯೋಜನೆಯ ಹೆಸರು ಮತ್ತು ಜಾರಿಗೊಳಿಸಿದ ವರ್ಷ	ಕರ್ನಾಟಕ ಜಲಾನಯನ ಅಭಿವೃದ್ಧಿ ಯೋಜನೆ-II (ಕ.ಜ.ಅ.ಯೋ –II) (ಸುಜಲ-III ಯೋಜನೆ), 2013-14 ನೇ ಸಾಲಿನಿಂದ ಪ್ರಾರಂಭವಾಗಿದೆ.
ಆ)	ಆಯವ್ಯಯ ಶೀರ್ಷಿಕೆ	2402-00-102-0-28 ಪ್ಲಾನ್ (ಇ ಎ ಪಿ)
ಇ)	ಯೋಜನೆ ಅಡಿಯಲ್ಲಿ ಇದ್ದಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲು	ಬಾಹ್ಯ ನೆರವು 70% - ವಿಶ್ವ ಬ್ಯಾಂಕ್ ಪಾಲು, 30% - ರಾಜ್ಯದ ಪಾಲು
ಈ)	ಯೋಜನೆಯ ಉದ್ದೇಶಗಳು	ಈ ಯೋಜನೆಯ ಮುಖ್ಯ ಉದ್ದೇಶವು, ಮಣ್ಣು ಸಮೀಕ್ಷೆ ಮತ್ತು ನೀರಿನ ಸಂಪನ್ಮೂಲ ಮಾಹಿತಿ ಸಂಗ್ರಹಿಸಿ ನವೀನ ಹಾಗೂ ವೈಜ್ಞಾನಿಕ ಆಧಾರಿತ ಯೋಜನೆ ತಯಾರಿಸುವುದು, ಸಾಂಸ್ಥಿಕ ಬಲವರ್ಧನೆ ಮತ್ತು ಪಾಲುದಾರರ ಸಾಮರ್ಥ್ಯ ಅಭಿವೃದ್ಧಿ ಹಾಗೂ ಮಳೆಯಾಶ್ರಿತ ಪ್ರದೇಶಗಳ ವಿವಿಧ ಕಾರ್ಯಕ್ರಮಗಳನ್ನು ಒಗ್ಗೂಡಿಸಿ ಜಲಾನಯನ ನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸುವುದನ್ನು ನಿರೂಪಿಸುವುದಾಗಿರುತ್ತದೆ.
ಉ)	ಕಾರ್ಯಕ್ರಮ/ಪ್ರಾಜೆಕ್ಟ್ ಯೋಜನೆಯ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು (ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)	14.07 ಲಕ್ಷ ಹೇ. ವಿಸ್ತೀರ್ಣದಲ್ಲಿ ಎಲ್.ಆರ್.ಐ. ಕೈಗೊಳ್ಳಲಾಗಿದೆ. ಮುಂದುವರೆದು ಸಂಪೂರ್ಣ ಉಪಚಾರದ ಆಧಾರದ 46709 ಹೆಕ್ಟೇರ್ ಪ್ರದೇಶವನ್ನು ಉಪಚರಿಸಲಾಗಿ, 25148 ಹೆಕ್ಟೇರ್ ಬದು, 1530 ಕೃಷಿ ಹೊಂಡ, 355 ತಡೆ ಅಣೆ, 153 ಗೋಕಟ್ಟೆ, 152 ನಾಲಾಬದು ಗಳನ್ನು ನಿರ್ಮಿಸಲಾಗಿರುತ್ತದೆ. ಹಾಗೂ 17093.95 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕ ಹಾಗೂ

		19208.02 ಹೆಕ್ಟೇರ್ ಪ್ರದೇಶ ಅರಣ್ಯ ಚಟುವಟಿಕೆಗಳನ್ನು ಸಹ ಕೈಗೊಳ್ಳಲಾಗಿರುತ್ತದೆ. 4182 ಭೂ ರಹಿತ ಕುಟುಂಬಗಳಿಗೆ ಕುರಿ / ಮೇಕೆ ವಿತರಿಸಲಾಗಿ 2194 ಸ್ವಸಹಾಯ ಸಂಘದ ಸದಸ್ಯರಿಗೆ ಆದಾಯ ಉತ್ಪನ್ನ ಚುವಟಿಕೆಗಳಡಿ ತರಬೇತಿ ನೀಡಲಾಗಿರುತ್ತದೆ. 3263 ಗ್ರಾಮ ಮಟ್ಟದ ತರಬೇತಿಗಳನ್ನು ಹಮ್ಮಿಕೊಂಡು 441829 ಎಲ್.ಆರ್.ಐ. I ಕಾರ್ಡ್‌ಗಳನ್ನು ರೈತರಿಗೆ ವಿತರಿಸಲಾಗಿರುತ್ತದೆ. ಹಾಗೂ ಡಿಜಿಟಲ್ ಪೋರ್ಟಲ್, ಡಿಜಿಟಲ್ ಲೈಬ್ರರಿ ಮತ್ತು ಡಿ.ಎಸ್.ಎಸ್ ಸಹ ಸ್ಥಾಪಿಸಲಾಗಿರುತ್ತದೆ.
ಊ	ಹಣಕಾಸು (ರೂ. ಲಕ್ಷಗಳಲ್ಲಿ)	ರೂ.3926.00 ಲಕ್ಷಗಳು (ಪರಿಷ್ಕೃತ)

ಯೋಜನೆಯ ಪಾಲುದಾರ ಸಂಸ್ಥೆಗಳು: ಸುಜಲ-III ಯೋಜನೆಯ ವಿವಿಧ ಕಾರ್ಯಚಟುವಟಿಕೆಗಳನ್ನು 15 ಯೋಜನಾ ಪಾಲುದಾರ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡು ಅನುಷ್ಠಾನ ಮಾಡಲಾಗುತ್ತಿದೆ.

ರಾಜ್ಯದ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯಗಳೊಂದಿಗೆ ಸಂಯೋಜನೆಯೊಂದಿಗೆ ಕಾರ್ಯನಿರ್ವಹಿಸಲು ಭೂಸಂಪನ್ಮೂಲ ಸಮೀಕ್ಷೆ (ಎಲ್.ಆರ್.ಐ) ಕಾರ್ಯದ ಮುಂದಾಳತ್ವವನ್ನು ಎನ್.ಬಿ.ಎಸ್.ಎಸ್.&ಎಲ್.ಯು.ಪಿ. ಸಂಸ್ಥೆ ಮತ್ತು ಹೈಡ್ರೋಲಾಜಿಕಲ್ ಅಧ್ಯಯನದ ಮುಂದಾಳತ್ವವನ್ನು ಭಾರತೀಯ ವಿಜ್ಞಾನ ಸಂಸ್ಥೆಗೆ (ಐ.ಐ.ಎಸ್‌ಸಿ.) ವಹಿಸಲಾಗಿರುತ್ತದೆ. ಯೋಜನಾ ಪ್ರದೇಶ ವ್ಯಾಪ್ತಿ ಪ್ರದೇಶಗಳ ಉಪಗ್ರಹ ಆಧಾರಿತ ಬಿಂಬಚಿತ್ರಗಳನ್ನು ಕರ್ನಾಟಕ ರಾಜ್ಯ ದೂರಸಂವೇದಿ ಅನ್ವಯಿಕ ಕೇಂದ್ರ ಮತ್ತು ಹವಾಮಾನ ವಿವರಗಳನ್ನು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣೆ ಕೇಂದ್ರವು ಪಾಲುದಾರ ಸಂಸ್ಥೆಗಳಿಗೆ ಒದಗಿಸಿರುತ್ತವೆ.

KVAFSU ಸಂಸ್ಥೆಯ ಮುಖೇನ ಪಶು ಸಂಗೋಪನೆ ಮತ್ತು ಪಶು ವೈದ್ಯಕೀಯ ಅಂಶಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮತ್ತು ಸಂಸ್ಥೆಯು ಅಭಿವೃದ್ಧಿ ಪಡಿಸಿದ ನವೀನ ತಾಂತ್ರಿಕತೆಗಳ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲಾಗಿದೆ. ಭಾರತೀಯ ಮಣ್ಣು ಮತ್ತು ನೀರು ಸಂರಕ್ಷಣಾ ಸಂಸ್ಥೆಯು ಯೋಜನೆಯ ತಾಂತ್ರಿಕ ಉಸ್ತುವಾರಿ ಮತ್ತು ಮೌಲ್ಯ ಮಾಪನ ಕಾರ್ಯವನ್ನು ಮತ್ತು **TERI** ಸಂಸ್ಥೆಯು ಕ್ಷೇತ್ರಮಟ್ಟದಲ್ಲಿ ಬಾಹ್ಯ ಉಸ್ತುವಾರಿ ಮತ್ತು ಮೌಲ್ಯ ಮಾಪನ ಕಾರ್ಯವನ್ನು ನಿರ್ವಹಿಸಿರುತ್ತದೆ

ಭೂಸಂಪನ್ಮೂಲ ಸಮೀಕ್ಷೆ: ಭೂಸಂಪನ್ಮೂಲ ಸಮೀಕ್ಷೆ ಕಾರ್ಯವನ್ನು ಎನ್.ಬಿ.ಎಸ್.ಎಸ್. & ಎಲ್.ಯು.ಪಿ. ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾಲಯಗಳು ಕೈಗೊಂಡಿದ್ದು, ಮುಖ್ಯವಾಗಿ

ಮಣ್ಣಿನ ಪದರಗಳ ಅಧ್ಯಯನ (ಸಾಯಿಲ್ ಪ್ರೊಫೈಲ್), ಮಣ್ಣಿನ ಮಾದರಿಗಳ ವಿಶ್ಲೇಷಣೆ ಮತ್ತು ಭೂ ಫಲವತ್ತತೆಯ ಅಧ್ಯಯನ ಮಾಡಿ ಕಿರುಜಲಾನಯನಗಳ ನಕ್ಷೆ ತಯಾರಿಸಲಾಗಿರುತ್ತ ದೆ. ಮೂಲ ಮಾಹಿತಿ ಸಮೀಕ್ಷೆ ಕೈಗೊಂಡು ವರದಿ ತಯಾರಿಸಲಾಗಿರುತ್ತದೆ.

ಡಿಸೆಂಬರ್-2019 ಅಂತ್ಯದವರೆಗೆ ಸಾಧಿಸಿದ ಕಿರು-ಜಲಾನಯನವಾರು ಭೂ-ಸಂಪನ್ಮೂಲ ಸಮೀಕ್ಷೆ (ಎಲ್.ಆರ್.ಐ) ಕಾರ್ಯದ ಪ್ರಗತಿ ವಿವರ ಕೆಳಕಂಡಂತಿದೆ.

ಕ್ರ. ಸಂ.	ವಿವರಗಳು		ಎನ್.ಬಿ. ಎಸ್. ಎಸ್.ಎಲ್. ಯು.ಪಿ	ಕೃ.ವಿ.ವಿ. ಬೆಂ.	ಕೃ.ವಿ.ವಿ. ಧಾ	ಕೃ.ವಿ.ವಿ. ರಾ	ತೋ.ವಿ.ವಿ ಬಾ	ಕೃ & ತೋ. ವಿ.ವಿ, ಶಿ	ಒಟ್ಟು	%
1	ಎಲ್.ಆರ್.ಐ. ಪೂರ್ಣಗೊಂಡ ಕಿರು ಜಲಾನಯನಗಳ ಸಂಖ್ಯೆ	ಗುರಿ	604	423	633	430	229	215	2534	
		ಸಾಧನೆ	604	423	633	430	229	215	2534	100
2	ತಯಾರಿಸಿರುವ ನಕ್ಷೆಗಳ ಸಂಖ್ಯೆ (ಕನ್ನಡ ಭಾಷೆ)	ಸಾಧನೆ	604	423	633	430	229	215	2534	100
3	ತಯಾರಿಸಿರುವ ನಕ್ಷೆಗಳ ಸಂಖ್ಯೆ (ಆಂಗ್ಲ ಭಾಷೆ)	ಸಾಧನೆ	604	423	633	430	229	215	2534	100
4	ತಯಾರಿಸಿರುವ ಕಿರು-ಜಲಾನಯನ ವಾರು ವರದಿಗಳು	ಸಾಧನೆ	604	423	633	430	229	215	2534	100

ಹೈಡ್ರೋಲಾಜಿಕಲ್ ಅಧ್ಯಯನದ ಪ್ರಗತಿ: ಯೋಜನೆಯಡಿ ಆಯ್ದ 14 ಮಾದರಿ ಕಿರುಜಲಾನಯನಗಳಲ್ಲಿ ಹೈಡ್ರಾಲಜಿ ಅಧ್ಯಯನವನ್ನು ಕೃಷಿ ಮತ್ತು ತೋಟಗಾರಿಕೆ ವಿಶ್ವ ವಿದ್ಯಾನಿಲಯಗಳು ಭಾರತೀಯ ವಿಜ್ಞಾನ ಸಂಸ್ಥೆಯ ಮಾರ್ಗದರ್ಶನದಲ್ಲಿ ಕೈಗೊಳ್ಳುತ್ತಿವೆ. ಅಂತರ್ಜಲ ಮಟ್ಟದ ಏರಿಳಿತದ ಅಧ್ಯಯನ, ಮಣ್ಣಿನ ತೇವಾಂಶದ ವಿಶ್ಲೇಷಣೆ, ಬಾವಿಗಳ ನೀರಿನ ಪ್ರಮಾಣ, ನೀರಿನ ಮಾದರಿಗಳ ವಿಶ್ಲೇಷಣೆ ಇತ್ಯಾದಿ ಕುರಿತು ಮಾಹಿತಿಯನ್ನು ನಿಗದಿತ ಅವಧಿಗಳಲ್ಲಿ ಸಂಗ್ರಹಿಸಿ ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಉಳಿದ ಜಲಾನಯನಗಳಲ್ಲಿ ಒಟ್ಟು 425 ಉಪ-ಜಲಾನಯನ ವಾರು ನಕ್ಷೆಗಳನ್ನು ತಯಾರಿಸಲಾಗಿದೆ.

ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮ: ಯೋಜನೆಯಡಿ ಅಭಿವೃದ್ಧಿಪಡಿಸಿದ ವೈಜ್ಞಾನಿಕ ಮಾಹಿತಿ ಮತ್ತು ತಾಂತ್ರಿಕತೆ ಬಳಸಿ ಸಂಪೂರ್ಣ ಜಲಾನಯನ ಉಪಚಾರ ಕಾರ್ಯಕ್ರಮವನ್ನು **(Saturation of Watershed)** ಎಲ್ಲಾ 11 ಯೋಜನಾ ಜಿಲ್ಲೆಗಳಲ್ಲಿ ಆಯ್ದ ಜಲಾನಯನಗಳಲ್ಲಿ ಅನುಷ್ಠಾನಗೊಳಿಸಲಾಗಿರುತ್ತದೆ.

ಡಿಜಿಟಲ್ ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ (ಡಿಸಿಶನ್ ಸಪೋರ್ಟ್ ಸಿಸ್ಟಂ) ಮತ್ತು ಭೂ ಸಂಪನ್ಮೂಲ ಪೋರ್ಟಲ್ ಘಟಕಗಳನ್ನು ಅಭಿವೃದ್ಧಿ ಪಡಿಸಿದ್ದು, ಭೂಸಂಪನ್ಮೂಲ ದತ್ತಾಂಶ ಮತ್ತು ನಕ್ಷೆಗಳನ್ನು ಅಪ್‌ಲೋಡ್ ಮಾಡಲಾಗುತ್ತಿದೆ.

ಕರ್ನಾಟಕ ರಾಜ್ಯ ಪ್ರಾಕೃತಿಕ ವಿಕೋಪ ನಿರ್ವಹಣಾ ಕೇಂದ್ರ **(KSNDMC)** ಸಂಸ್ಥೆಯ ಸಹಯೋಗದೊಂದಿಗೆ, ದೈನಂದಿನ ಹವಾಮಾನ ವಿವರಗಳನ್ನು ರೈತರಿಗೆ ನೇರವಾಗಿ ತಲುಪಿಸಲು ಯೋಜನಾ ಪ್ರದೇಶ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರ ಮತ್ತು ಜಂಟಿ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಡಿಜಿಟಲ್ ಪ್ರದರ್ಶನ ಘಟಕಗಳನ್ನು ಅಳವಡಿಸಲಾಗಿರುತ್ತದೆ.

ಭೂಸಂಪನ್ಮೂಲ ಮಾಹಿತಿ (LRI) ಪ್ರಸರಣೆ:

ಭೂ ಸಂಪನ್ಮೂಲ ಮಾಹಿತಿ ಹಾಗೂ ಡಿಜಿಟಲ್ ಗ್ರಂಥಾಲಯ, ನಿರ್ಣಯ ಬೆಂಬಲ ವ್ಯವಸ್ಥೆ (ಡಿಸಿಶನ್ ಸಪೋರ್ಟ್ ಸಿಸ್ಟಂ) ಮತ್ತು ಭೂ ಸಂಪನ್ಮೂಲ ಪೋರ್ಟಲ್ ಉಪಯುಕ್ತತೆ ಮತ್ತು ಬಳಕೆ ಕುರಿತು ರೈತರಿಗೆ, ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಮತ್ತು ಸಂಬಂಧಿತ ಸಂಸ್ಥೆಗಳಿಗೆ ಮಾಹಿತಿ ಪ್ರಸರಣೆಗಾಗಿ ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿರುತ್ತದೆ.

ಗ್ರಾಮ ಮಟ್ಟದ ತರಬೇತಿ: ಎಲ್.ಆರ್.ಐ. ಕಾರ್ಯ ಕೈಗೊಂಡಿರುವ ಪ್ರದೇಶದಲ್ಲಿನ ರೈತರಿಗೆ ಎಲ್.ಆರ್.ಐ. ಉಪಯುಕ್ತತೆ ಕುರಿತು ಅರಿವು ಮೂಡಿಸಲು ಯೋಜನಾ ಜಿಲ್ಲೆಗಳಲ್ಲಿ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳ ಮೂಲಕ ಗ್ರಾಮ ಮಟ್ಟದ ತರಬೇತಿಗಳನ್ನು ಕೈಗೊಳ್ಳಲಾಗುತ್ತಿದೆ. ಈ ಸಂಬಂಧ, ಪ್ರತಿಯೊಂದು ರೈತ ಸಂಪರ್ಕ ಕೇಂದ್ರಕ್ಕೂ ಒಬ್ಬರಂತೆ ಎಲ್.ಆರ್.ಐ. ಎಕ್ಸ್‌ಟೆಂಷನ್ ಮ್ಯಾನೇಜರ್‌ಗಳನ್ನು ಎಲ್.ಆರ್.ಐ. ಪ್ರಸರಣೆಗೆ ನೆರವು ನೀಡಲು ನಿಯೋಜಿಸಲಾಗಿದೆ. **ICAR-ATARI** ಸಂಸ್ಥೆಯಿಂದ ಯೋಜನಾ ಜಿಲ್ಲೆಗಳಲ್ಲಿ ಸಂಬಂಧಿಸಿದ ಕೃಷಿ ವಿಜ್ಞಾನ ಕೇಂದ್ರ ಮೂಲಕ ಆಯ್ದ **333** ಗ್ರಾಮಗಳಲ್ಲಿ ಗ್ರಾಮ ಮಟ್ಟದ ತರಬೇತಿ ಕೈಗೊಂಡು ಎಲ್.ಆರ್.ಐ. ಕಾರ್ಡ್‌ವಿತರಿಸಲಾಗಿರುತ್ತದೆ. **ATARI** ಮತ್ತು ರೈತ ಸಂಪರ್ಕ ಕೇಂದ್ರಗಳ ಮೂಲಕ ಒಟ್ಟು **3263** ಗ್ರಾಮಮಟ್ಟದ ತರಬೇತಿಗಳನ್ನು ಆಯೋಜಿಸಿದ್ದು **441829** ಎಲ್.ಆರ್.ಐ. ಕಾರ್ಡ್‌ಗಳನ್ನು ವಿತರಿಸಲಾಗಿರುತ್ತದೆ.

ಭೂಸಂಪನ್ಮೂಲ ಮಾಹಿತಿಯ ಕಾರ್ಡ್: ಎಲ್.ಆರ್.ಐ. ಪಾಲುದಾರ ಸಂಸ್ಥೆಗಳು ಎಲ್.ಆರ್.ಐ. ಕಾರ್ಯ ಕೈಗೊಳ್ಳುತ್ತಿರುವ ಪ್ರತಿ ಹಿಡುವಳಿಗಳಿಗೆ ಎಲ್.ಆರ್.ಐ. ಕಾರ್ಡ್‌ಗಳನ್ನು ತಯಾರಿಸಿದ್ದು, ಸಂಬಂಧಿಸಿದ ಜಿಲ್ಲೆಗಳಲ್ಲಿ ಕಾರ್ಡ್ ಮುದ್ರಿಸಿ ಗ್ರಾಮ ಮಟ್ಟದ ತರಬೇತಿ ಕೈಗೊಂಡು ರೈತರಿಗೆ ವಿತರಿಸಲಾಗಿರುತ್ತದೆ.

ಆದಾಯ ಉತ್ಪನ್ನ ಚಟುವಟಿಕೆಗಳ ತರಬೇತಿ **NACER** ಸಂಸ್ಥೆಯು ಹೊಲಿಗೆ ತರಬೇತಿ, ಹೈನುಗಾರಿಕೆ ಇತ್ಯಾದಿ ಆದಾಯ ಉತ್ಪನ್ನ ಚಟುವಟಿಕೆಗಳ ಕುರಿತು ಯೋಜನಾ ವ್ಯಾಪ್ತಿಯ ಸ್ವ-ಸಹಾಯ ಗುಂಪುಗಳ ಶೇ.**50** ರಷ್ಟು ಸದಸ್ಯರಿಗೆ ತರಬೇತಿಗಳನ್ನು ನೀಡಿ **NRLM** ಯೋಜನೆಯೊಂದಿಗೆ ಲಿಂಕ್ ಮಾಡಿ ಚಟುವಟಿಕೆಗಳನ್ನು ಕೈಗೊಳ್ಳಲು ನೆರವು ನೀಡುವ ಕಾರ್ಯ ಕೈಗೊಂಡಿರುತ್ತದೆ.

ಇತರೆ ಯೋಜನಾ ಚಟುವಟಿಕೆಗಳು: ಯೋಜನೆಯಡಿ ಸಂಶೋಧನೆ ಮತ್ತು ಅಭಿವೃದ್ಧಿ, ಸಾಂಸ್ಥಿಕ ಬಲವರ್ಧನೆ ಮತ್ತು ಯೋಜನೆ ಪಾಲುದಾರರ ಮತ್ತು ಫಲಾನುಭವಿಗಳ ಸಾಮರ್ಥ್ಯ ಬಲವರ್ಧನೆ, ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಉತ್ಪಾದಕತೆ ಹೆಚ್ಚಿಸುವುದು, ರೈತ ಉತ್ಪಾದಕಾ ಸಂಘಗಳ ಸ್ಥಾಪನೆ, ಪಶು ಮತ್ತು ಮೀನುಗಾರಿಕೆ ಅಭಿವೃದ್ಧಿ, ಉಸ್ತುವಾರಿ ಮತ್ತು ಮೌಲ್ಯಮಾಪನ, ದಾಖಲೀಕರಣ ಇತ್ಯಾದಿ ಚಟುವಟಿಕೆಗಳನ್ನು ಕೈಗೊಳ್ಳಲಾಗಿರುತ್ತದೆ.

ಆರ್ಥಿಕ ವೆಚ್ಚ:

ಯೋಜನೆಗೆ ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಗಳಿಗೆ ಪ್ರತ್ಯೇಕ ಲೆಕ್ಕ ಶೀರ್ಷಿಕೆಯಡಿ ಅನುದಾನ ಬಿಡುಗಡೆಯಾಗುತ್ತದೆ.

ಕಳೆದ ಮೂರು ಸಾಲುಗಳಲ್ಲಿ ಯೋಜನೆಯಡಿ ಜಲಾನಯನ ಲಾಖೆ ಮಅಭಿವೃದ್ಧಿ ಇತ್ತು ತೋಟಗಾರಿಕೆ ಇಲಾಖೆಗಳಿಗೆ ಬಿಡುಗಡೆ ಮಾಡಿದ

(ರೂ. ಲಕ್ಷಗಳಲ್ಲಿ)

	2017-18			2018-19			2019-20		
	ಅನುದಾನ ಬಿಡುಗಡೆ	ವೆಚ್ಚ (62ಬಿ ಅನ್ವಯ)	ಐ.ಯು.ಎಫ್. ಅನುದಾನ ಬಿಡುಗಡೆ (100%)	ಅನುದಾನ ಬಿಡುಗಡೆ	ವೆಚ್ಚ (62ಬಿ ಅನ್ವಯ)	ಐ.ಯು.ಎಫ್.ಅನುದಾನ ಬಿಡುಗಡೆ (100%)	ಅನುದಾನ ಬಿಡುಗಡೆ	ವೆಚ್ಚ (62ಬಿ ಅನ್ವಯ)	ಐ.ಯು.ಎಫ್ .ಅನುದಾನ ಬಿಡುಗಡೆ (100%)
ಒಟ್ಟು	7200.00	2061	7259.95	12980.00	12841.50	11685.98	5233.00	5165.69	9400.12*

* ರೂ.420.11 ಲಕ್ಷ ವೆಚ್ಚದ IUFR ವರದಿ ಸಲ್ಲಿಕೆ ಪ್ರಗತಿಯಲ್ಲಿದೆ.

III. ಕರ್ನಾಟಕ - ಜಲಾನಯನ ಅಭಿವೃದ್ಧಿ ತರಬೇತಿ ಕೇಂದ್ರಗಳು.

ಜಲಾನಯನ ಅಭಿವೃದ್ಧಿ ಇಲಾಖೆಯ ಆಡಳಿತದಡಿಯಲ್ಲಿ ಮೈಸೂರು ಹಾಗೂ ವಿಜಯಪುರದಲ್ಲಿ ಜಲಾನಯನ ಅಭಿವೃದ್ಧಿ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇಲಾಖೆಯ ಕ್ಷೇತ್ರ ಮಟ್ಟದ ಸಿಬ್ಬಂದಿಗಳಿಗೆ ತಾಂತ್ರಿಕ ವಿಷಯಗಳ ಬಗ್ಗೆ ಜ್ಞಾನವನ್ನು ಹೆಚ್ಚಿಸುವುದು ಹಾಗೂ ಸರ್ಕಾರೇತರ ಸಂಸ್ಥೆಗಳ ಸಿಬ್ಬಂದಿಗೆ ಜಲಾನಯನ ಅಭಿವೃದ್ಧಿ ಕುರಿತು ತರಬೇತಿ ನೀಡುವುದು. ಈ ತರಬೇತಿ ಕೇಂದ್ರಗಳ ಪ್ರಮುಖ ಉದ್ದೇಶಗಳಾಗಿವೆ.

ಯೋಜನೆಯ ವಿವರಗಳು ಈ ಕೆಳಗಿನಂತಿವೆ;

ಅ)	ಯೋಜನೆಯ ಹೆಸರು ಮತ್ತು ಜಾರಿಗೊಳಿಸಿದ ವರ್ಷ	ಕರ್ನಾಟಕ - ಜಲಾನಯನ ಅಭಿವೃದ್ಧಿ ತರಬೇತಿ ಕೇಂದ್ರ
ಆ)	ಆಯವ್ಯಯ ಶೀರ್ಷಿಕೆ	**2402-00-109-0-02**
ಇ)	ಯೋಜನೆ ಅಡಿಯಲ್ಲಿ ಇದ್ದಲ್ಲಿ, ಕೇಂದ್ರ ಮತ್ತು ರಾಜ್ಯದ ಪಾಲು	ರಾಜ್ಯ ಯೋಜನೆ ಶೇ.**100**
ಈ)	ಯೋಜನೆಯ ಉದ್ದೇಶಗಳು	• ಕಾಲಕಾಲಕ್ಕೆ ಇಲಾಖೆ ತಾಂತ್ರಿಕ ಸಿಬ್ಬಂದಿ / ಅಧಿಕಾರಿಗಳಿಗೆ ತರಬೇತಿ, • ಸರ್ಕಾರೇತರ ಸಂಸ್ಥೆಗಳ ಸಿಬ್ಬಂದಿಗಳಿಗೆ ತರಬೇತಿ • ಸಮುದಾಯಾಧಾರಿತ ಸಂಸ್ಥೆಗಳ ಸದಸ್ಯರಿಗೆ ತರಬೇತಿ. • ಕಲಿಕಾ ಪ್ರವಾಸ ಕೈಗೊಳ್ಳುವುದು. • ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು ಪಡೆದ ತರಬೇತಿ. ಸರ್ಕಾರೇತರ ಸಂಸ್ಥೆ, ಸಮುದಾಯ ಆಧಾರಿತ ಸಂಸ್ಥೆಗಳ ಸದಸ್ಯರು ಮತ್ತು ಸಿಬ್ಬಂದಿಗಳ ಸಾಮರ್ಥ್ಯ ಬಲವರ್ಧನೆ.
ಉ)	ಕಾರ್ಯಕ್ರಮ/ಪ್ರಾಜೆಕ್ಟ್ ಯೋಜನೆಯ ಅಂದಾಜು ಫಲಿತಾಂಶ ಮತ್ತು ಅಂದಾಜು ಫಲಾನುಭವಿಗಳು (ವರ್ಷಾಂತ್ಯದಲ್ಲಿ ಅಳತೆ ಮಾಡಬಹುದಾದ ಫಲಿತಾಂಶ)	• ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು ಪಡೆದ ತರಬೇತಿ. ಸರ್ಕಾರೇತರ ಸಂಸ್ಥೆ, ಸಮುದಾಯ ಆಧಾರಿತ ಸಂಸ್ಥೆಗಳ ಸದಸ್ಯರು ಮತ್ತು ಸಿಬ್ಬಂದಿಗಳ ಸಾಮರ್ಥ್ಯ ಬಲವರ್ಧನೆ.
ಊ	ಹಣಕಾಸು (ರೂ. ಲಕ್ಷಗಳಲ್ಲಿ)	ರೂ. **141.28** ಲಕ್ಷಗಳು

(ರೂ. ಲಕ್ಷಗಳಲ್ಲಿ))

2017-18		2018-19		2019-20	
ಅನುದಾನ ಬಿಡುಗಡೆ	ವೆಚ್ಚ	ಅನುದಾನ ಬಿಡುಗಡೆ	ವೆಚ್ಚ	ಅನುದಾನ ಬಿಡುಗಡೆ(ಪರಿಷ್ಕೃತ)	ವೆಚ್ಚ
99.00	**83.44**	**109.0**	**119.41**	**141.28**	**133.22**

ತರಬೇತಿಗಳನ್ನು ಸಮಯಕ್ಕನುಗುಣವಾಗಿ ಕೈಗೊಳ್ಳಲಾಗಿದೆ. ಅನುಷ್ಠಾನದಲ್ಲಿ ತೊಡಕುಗಳು ಇರುವುದಿಲ್ಲ . ತರಬೇತಿ ಮುಗಿದ ಮೇಲೆ ಶಿಭಿರಾರ್ಥಿಗಳ ಪರೀಕ್ಷೆ ಕೈಗೊಳ್ಳಲಾಗುತ್ತಿದೆ.

ಇತರೆ ಇಲಾಖಾ ಕಾರ್ಯಕ್ರಮಗಳು

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯೊಂದಿಗೆ ಒಗ್ಗೂಡಿಸುವಿಕೆ: ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ **2019-20**ನೇ ಸಾಲಿನ ಮಾರ್ಚ್-**2020**ರ ಅಂತ್ಯಕ್ಕೆ ರೂ.**18333.15** ಲಕ್ಷ ಖರ್ಚು ಮಾಡಿ **60.63** ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ.

ಅನುಬಂಧ -1

2019-20 ನೇ ಸಾಲಿನ ಕಾರ್ಯಕ್ರಮ ಮತ್ತು ಪ್ರಗತಿ ವಿವರ (ರೂ. ಲಕ್ಷಗಳಲ್ಲಿ, ಪ್ರದೇಶ- ಹೆಕ್ಟೇರ್ಗಳಲ್ಲಿ, ವಿನ್ಯಾಸ ಮತ್ತು ಕಿರುಜಲಾನಯಗಳು-ಸಂಖ್ಯೆಗಳಲ್ಲಿ)

ಕ್ರ. ಸಂ	ಯೋಜನೆಯ ಹೆಸರು	ಘಟಕ	ವಾರ್ಷಿಕ ಆಯವ್ಯಯ	ಪರಿಷ್ಕೃತ ಆಯವ್ಯಯ			ಲಭ್ಯವಿದ್ದ ಅನುದಾನ (ಪ್ರಾ. ಶಿ. ಸೇರಿದಂತೆ)	ಮಾರ್ಚ್-2020ರ ಮಾಹೆಯ ವರೆಗಿನ ವೆಚ್ಚ (ಸಂಚಿತ)	ಭೌತಿಕ ಗುರಿ	ಭೌತಿಕ ಸಾಧನೆ	ಪರಿಷ್ಕೃತ ಗುರಿಗೆ ಶೇ. ಸಾಧನೆ (ಕಾಲಂ 7 ಕ್ಕೆ)	ಲಭ್ಯವಿದ್ದ ಅನುದಾನಕ್ಕೆ ಶೇ. ಸಾಧನೆ (ಕಾಲಂ 8 ಕ್ಕೆ)	ಷರಾ
				ರಾಜ್ಯ ವಂತಿಕೆ	ಕೇಂದ್ರ ವಂತಿಕೆ	ಒಟ್ಟು							
1	2	3	4	5	6	7	8	9	10	11	12	13	14
1	ಜಲಾನಯನ ಅಭಿವೃದ್ಧಿ ಇಲಾಖೆ ಸಿಬ್ಬಂದಿ 2402-00-102-0-15		1616.00	1689.16		1689.16	1689.16	1644.65	_	_	97.36	97.36	
2	ಕರ್ನಾಟಕ ಜಲಾನಯನ ಅಭಿವೃದ್ಧಿ ತರಬೇತಿ ಕೇಂದ್ರ 2402-00-109-0-02		137.00	141.28		141.28	141.28	133.22	_	_	94.30	94.30	
3	ಜಿಲ್ಲಾ ಪರಿಷತ್‌ಗಳು/ ಜಿಲ್ಲಾ ಮಟ್ಟದ ಪಂಯತ್‌ಗಳಿಗೆ ನೆರವು (2402-00-196-02-01)		3395.00	3781.05		3781.05	3781.05	3781.05	_	_	100.00	100.00	
4	ಪಂಚಾಯತ್‌ಗಳು/ಮಧ್ಯಂತರ ಮಟ್ಟದ ಪಂಚಾಯತ್‌ಗಳಿಗೆ ನೆರವು (2402-00-197-01-01)		85.00	85.00		78.32	78.32	78.32	_	_	100.00	100.00	
5	ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ 2402-00-102-0-30 WD *	ಹೆಕ್ಟೇರ್ ಜಲ ವಿನ್ಯಾಸಗಳು	16600.00	6640.00	9960.00	16600.00	28395.02	25508.94	82918 2837	92451 4294	153.67	89.84	
6	ಸುಜಲ ಜಲಾನಯನ ಯೋಜನೆ -III 2402-00-102-0-28 *	ಹೆಕ್ಟೇರ್ ಕಿರು ಜಲಾನಯನಗಳು(ಸಂಖ್ಯೆಗಳಲ್ಲಿ)	5000.00	3926.00		3925.80	7997.55	7290.41	1650	6050/ 1333	185.71	91.16	

ಕ್ರ. ಸಂ	ಯೋಜನೆಯ ಹೆಸರು	ಘಟಕ	ವಾರ್ಷಿಕ ಆಯವ್ಯಯ	ಪರಿಷ್ಕೃತ ಆಯವ್ಯಯ			ಲಭ್ಯವಿದ್ದ ಅನುದಾನ (ಪ್ರಾ. ಶಿ. ನೇರಿದಂತೆ)	ಮಾರ್ಚ್-2020ರ ಮಾಹೆಯ ವರೆಗಿನ ವೆಚ್ಚ (ಸಂಚಿತ)	ಭೌತಿಕ ಗುರಿ	ಭೌತಿಕ ಸಾಧನೆ	ಪರಿಷ್ಕೃತ ಗುರಿಗೆ ಶೇ. ಸಾಧನೆ (ಕಾಲಂ 7 ಕ್ಕೆ)	ಲಭ್ಯವಿದ್ದ ಅನುದಾನಕ್ಕೆ ಶೇ. ಸಾಧನೆ (ಕಾಲಂ 8 ಕ್ಕೆ)	ಷರಾ
				ರಾಜ್ಯ ವಂತಿಕೆ	ಕೇಂದ್ರ ವಂತಿಕೆ	ಒಟ್ಟು							
1	2	3	4	5	6	7	8	9	10	11	12	13	14
7	ಜಲಾನಯನ ಅಭಿವೃದ್ಧಿ ಮೂಲಕ ಬರಗಾಲ ತಡೆಯುವಿಕೆ 4402-00-108-0-05 ಜಲಾನಯನ ಅಭಿವೃದ್ಧಿ ಇಲಾಖೆ ಸಿಬ್ಬಂದಿ- 2402-00-102-0-15 *ವೆಚ್ಚದಲ್ಲಿ ಪ್ರಾರಂಭಿಕ ಶಿಲ್ಕು ಸೇರಿರುತ್ತದೆ	ವಿನ್ಯಾಸ	10000.00	2500.00		2500.00	2500.00	2368.79	400	300	94.75	94.75	
8	ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ - ಮಳೆಯಾಶ್ರಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ(2401-00-108-1-15)	ಹೆಕ್ಟೇರ್	1666.66	666.66	1000.00	1666.70	1000.00	1062.41	5250	3019	63.74	106.24	
9	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಉಪ್ಪು ಮತ್ತು ಕ್ಷಾರೀಯ ಮಣ್ಣಿನ ಉಪಚಾರ 2401-00-800-01-57 (ಯೋಜನೆ)	ಹೆಕ್ಟೇರ್	500.00	200.00	300.00	500.00	250.00	243.07	412	417	48.61	97.23	
10	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401-00-800-1-57) ಅ) ತಡೆಅಣೆ ನಿರ್ಮಾಣ	ಜಲ ವಿನ್ಯಾಸಗಳು (ಸಂಖ್ಯೆಗಳಲ್ಲಿ)	2000.00	800.00	1200.00	2000.00	2180.00	2122.70	400	421	106.14	97.37	
	ಆ) ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಸಮಗ್ರ ಕೃಷಿ ಅಭಿವೃದ್ಧಿ (PPPIAD)	ಸಂಖ್ಯೆ	800.00	320.00	480.00	800.00	781.82	754.55	9	8 ¥ÁæeÉ PïÖUÀ ¼ÀÄ	94.32	96.51	
	ಅ) ರೈತ ಉತ್ಪಾದಕ ಸಂಸ್ಥೆಗಳು	ಸಂಖ್ಯೆ	200.00	80.00	120.00	200.00	202	174.39	130	130	87.20	86.33	
	ಒಟ್ಟು	ಹೆಕ್ಟೇರ್							90230	70200			
		ಜಲ ವಿನ್ಯಾಸಗಳು)	41999.66	20829.15	13060.00	33882.30	48996.20	45162.50	3237	2561	133.29	92.18	

ಅಧ್ಯಾಯ-3

ಸಾಂಘಿಕ ರಚನೆ:

ಜಲಾನಯನ ಅಭಿವೃದ್ಧಿ ಇಲಾಖೆಯು **1.4.2000** ದಿಂದ ಪ್ರಾರಂಭವಾಯಿತು.

1. ರಾಜ್ಯ ಮಟ್ಟ: ರಾಜ್ಯ ಮಟ್ಟದಲ್ಲಿ ಭಾರತೀಯ ಆಡಳಿತ ಸೇವೆ ಅಥವಾ ಭಾರತೀಯ ಅರಣ್ಯ ಸೇವೆಯ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಆಯುಕ್ತರನ್ನಾಗಿ ನೇಮಿಸಿ, ಒಬ್ಬರು ನಿರ್ದೇಶಕರು, ಒಬ್ಬ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮೂವರು ಜಂಟಿ ಕೃಷಿ ನಿರ್ದೇಶಕರು, ತೋಟಗಾರಿಕೆ ವಿಭಾಗಕ್ಕೆ ಒಬ್ಬ ಜಂಟಿ ನಿರ್ದೇಶಕರು, ಪಶುಸಂಗೋಪನೆಯ ವಿಭಾಗಕ್ಕೆ ಒಬ್ಬ್ಬ ಜಂಟಿ ನಿರ್ದೇಶಕರು ಹಾಗೂ ಯೋಜನಾ ವಿಭಾಗಕ್ಕೆ ಒಬ್ಬ ಉಪ ನಿರ್ದೇಶಕರು, ಅರಣ್ಯ, ತೋಟಗಾರಿಕೆ. ಕೃಷಿ ಮತ್ತು ಪಶುಸಂಗೋಪನೆ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಹಾಗೆಯೇ ಲೆಕ್ಕಪತ್ರಗಳ ನೆರವಿಗಾಗಿ ಜಂಟಿ ಕಂಟ್ರೋಲರ್ ಶ್ರೇಣಿಯ ಮುಖ್ಯ ಲೆಕ್ಕಾಧಿಕಾರಿಗಳು ಆಯುಕ್ತರಿಗೆ ನೆರವು ನೀಡುತ್ತಿರುತ್ತಾರೆ.

2. ಜಿಲ್ಲಾ ಮಟ್ಟ: ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತಿ ಹಂತದಲ್ಲಿ ಜಲಾನಯನ ಚಟುವಟಿಕೆಗಳನ್ನು ವಿವಿಧ ಘಟಕಗಳಾದ ಕೃಷಿ, ಅರಣ್ಯ, ತೋಟಗಾರಿಕೆ ಮತ್ತು ಪಶುಸಂಗೋಪನೆ ಅಧಿಕಾರಿಗಳ ನೆರವಿನಿಂದ ಜಂಟಿ ಕೃಷಿ ನಿರ್ದೇಶಕರುಗಳು ಅನುಷ್ಠಾನಗೊಳಿಸುವರು.

ಕ್ರೂಡೀಕೃತ ಸಿಬ್ಬಂದಿಗಳ ವಿವರಗಳು ಈ ಕೆಳಕಂಡಂತಿವೆ;

3. ತಾಲ್ಲೂಕು ಮಟ್ಟ: ತಾಲ್ಲೂಕು ಮಟ್ಟದಲ್ಲಿ ವಿವಿಧ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು / ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಹಾಯಕ ಕೃಷಿ ನಿರ್ದೇಶಕರು (ಯೋಜನಾ ಅನುಷ್ಠಾನ ಅಧಿಕಾರಿ) ಜವಾಬ್ದಾರಿ ಹೊಂದಿರುತ್ತಾರೆ.

ಈ ಕೆಳಗೆ ವಿವರವಾದ ಆಡಳಿತ ಚಾರ್ಟ್‌ನ್ನು ನೀಡಲಾಗಿದೆ.

2019-20 ನೇ ಸಾಲಿಗೆ ಜಲಾನಯನ ಅಭಿವೃದ್ಧಿ ಇಲಾಖೆ, ಕೇಂದ್ರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿ/ಸಿಬ್ಬಂದಿಯವರ ಕ್ರೂಡೀಕೃತ ಪಟ್ಟಿ

ಕ್ರ.ಸಂ	ವೃಂದ	ಮಂಜೂರಾದ ಹುದ್ದೆ	ಭರ್ತಿಯಾದ ಹುದ್ದೆ	ಖಾಲಿ ಹುದ್ದೆ	ಭರ್ತಿಯಾದ ಹುದ್ದೆ		ಭರ್ತಿಯಾದ ಹುದ್ದೆ	
					ಪುರುಷರು	ಮಹಿಳೆಯರು	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
1.	'ಎ'	19	13	06	06	07	01	01
2.	'ಬಿ'	17	10	07	03	07	02	0
3.	'ಸಿ'	50	30	20	21	09	06	0
4.	'ಡಿ'	15	05	10	04	01	01	0
ಒಟ್ಟು		101	58	43	34	24	10	01

ಜಲಾನಯನ ಅಭಿವೃದ್ಧಿ ಇಲಾಖೆ ರಾಜ್ಯ ಮಟ್ಟದ ಆಡಳಿತಾತ್ಮಕ ನಕ್ಷೆ


ಜಲಾನಯನ ಅಭಿವೃದ್ಧಿ ಇಲಾಖೆ ರಾಜ್ಯ ಮಟ್ಟದ ಆಡಳಿತಾತ್ಮಕ ನಕ್ಷೆ
ಕೃಷಿ ಸಚಿವರು, ಕರ್ನಾಟಕ ಸರ್ಕಾರ
ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಹಾಗೂ ಕೃಷಿ ಉತ್ಪನ್ನ ಆಯುಕ್ತರು
ಕಾರ್ಯದರ್ಶಿಗಳು (ಕೃಷಿ)
ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ
ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಸಹಾಯಕ ಕೃಷಿ ನಿರ್ದೇಶಕರು (ಪ್ರಾಂ.ಕ)
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು
ಸುಜಲಾ-III
ಕೃಷಿ
ತೋಟಗಾರಿಕೆ
ಜಾಮೂಮಾರು
ಪಂಚು
ಉಪ ಕೃಷಿ ನಿರ್ದೇಶಕರು (ಜಂ.ಕೃ.ನಿ)
ಪಂಚು ನಿರ್ದೇಶಕರು (ಪಶುಸಂಗೋಪನೆ)
ಸಹಾಯಕ ಕೃಷಿ ನಿರ್ದೇಶಕರು (ಪ್ರಾ.ಕೃ)
ಸಹಾಯಕ ಕೃಷಿ ಅಧಿಕಾರಿ (ಪ್ರಾಕೃ)
ಸಹಾಯಕ ಕೃಷಿ ನಿರ್ದೇಶಕರು (ತಾ.ಕೃ)
ಜಕ್ಕಿನಿ (ಪೂರಕಸಂ)
ಜಕ್ಕಿನಿ (ಕೃಷಿ ಶಾಸ್ತ್ರ)
ಜಕ್ಕಿನಿ (ಅಲಂಬಿತ)
ಕೃಷಿ ಅಧಿಕಾರಿ (ತಾ.ಅ)
ಕೃಷಿ ಅಧಿಕಾರಿ (ತಾಅ)
ಹಿರಿಯ ಸಹಾಯಕ ನಿರ್ದೇಶಕರು (ತೋಟಗಾರಿಕೆ) (ತಾಅ)
ಸಹಾಯಕ ನಿರ್ದೇಶಕರು
ಸಹಾಯಕ ತೋಟಗಾರಿಕೆ ಅಧಿಕಾರಿ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಉಪ ಕೃಷಿ ನಿರ್ದೇಶಕರು (MELAO & ಸುಜಲಾ-III)
ಸಹಾಯಕ ಕೃಷಿ ನಿರ್ದೇಶಕರು (ತಾ.ಅ)
ಕೃಷಿ ಅಧಿಕಾರಿ (ತಾಅ)
ಉಪವನ ಸಂರಕ್ಷಣಾಧಿಕಾರಿ (ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ)
ಉಪವಲಯ ಅರಣ್ಯ

ಜಲಾನಯನ ಅಭಿವೃದ್ಧಿ ಯೋಜನೆಗಳ ಕಾಮಗಾರಿ/ಚಟುವಟಿಕೆಗಳ ಛಾಯಾಚಿತ್ರಗಳು

Latitude: 14.998073
Longitude: 75.451341
Elevation: 586.26m
Accuracy: 11.0m
Time: 03-04-2019 13:49
Note: Savanur. Tq Vadnikoppa Virupaxappa Mutalikmath Agro Forestry plants..

Latitude: 14.996445
Longitude: 75.12576
Elevation: 673.38m
Accuracy: 27.0m
Time: 04-04-2019 11:02
Note: ShiggaonTq Hosur Nemichand Karadi Horticulture plants..

Latitude: 15°49'37"
Longitude: 75°18'49"
Elevation: 578.5m
Accuracy: 3.2m
Time: 03-05-2019 10:09:53
Note: c.b.konavat
Village - mudenkoppa

Latitude: 15.26404
Longitude: 77.118623
Elevation: 455.69m
Accuracy: 3.3m
Azimuth: 213° (SW)
Pitch: -19.6° (3.8°)
Time: 10-06-2019 09:06
Note: Sushilamma

REDMI NOTE 5 PRO
MI DUAL CAMERA

2019/07/02 17:18

ಕರ್ನಾಟಕ ರಾಜ್ಯ ಬೀಜ ನಿಗಮ

ಕರ್ನಾಟಕ ರಾಜ್ಯ ಬೀಜ ನಿಗಮದ 2019-20ನೇ ಸಾಲಿನ ವಾರ್ಷಿಕ ವರದಿ ಹಾಗೂ 2020-21 ನೇ ಸಾಲಿನ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿ.

ನಿಗಮದ ಉದ್ದೇಶ:

ರಾಜ್ಯ ಬೀಜ ಉದ್ದಿಮೆಯಲ್ಲಿ ಸತತವಾಗಿ ಒಳ್ಳೆಯ ಗುಣಮಟ್ಟ ಹೊಂದಿರುವ ಬೀಜಗಳನ್ನು ಸರಿಯಾದ ವೇಳೆಗೆ ದಾಸ್ತಾನು ಮಾಡಿ, ಸರಿಯಾದ ಸ್ಥಳದಲ್ಲಿ, ಯೋಗ್ಯ ದರದಲ್ಲಿ ಒದಗಿಸುವುದು. ಇಲಾಖೆಯ ಸಂಘಟನೆ ಮತ್ತು ಅದಕ್ಕೆ ಸಂಬಂದಿಸಿದ ಅಧೀನ ಕಛೇರಿಗಳ ವಿವರಗಳನ್ನು ರೇಖಾ ಚಿತ್ರದೊಂದಿಗೆ ವಿವರಗಳು ಈ ಕೆಳಕಂಡಂತಿದೆ.

ORGANISATION CHART



DISTRICT LEVEL



ಬೀಜ ನಿಗಮದ ಕೇಂದ್ರ ಕಛೇರಿ ಮತ್ತು ಜಿಲ್ಲಾ ಮಟ್ಟದ ಕಛೇರಿಗಳ ನಿಗಮದ ಜಾಬ್ ಚಾರ್ಟ ಮೇಲಿನಂತಿರುತ್ತದೆ.

ನಿಗಮದ ದೃಷ್ಟಿಕೋನ:

ಕೃಷಿ ಉತ್ಪಾದಕತೆಯನ್ನು ಮತ್ತು ಕೃಷಿಯನ್ನು ಒಂದು ಲಾಭದಾಯಕ ಉದ್ಯಮವನ್ನಾಗಿ ಮಾಡುವಲ್ಲಿ ಮುಂಚೂಣಿ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುವುದು ನಿಗಮದ ದೃಷ್ಟಿಕೋನವಾಗಿದೆ.

ಕರ್ನಾಟಕ ರಾಜ್ಯ ಬೀಜ ನಿಗಮದ ಅಂಕಿ: ಅಂಶಗಳು:

2001-2002 ರಿಂದ 2019-20 ನೇ ಸಾಲಿನವರೆಗೆ ನಿಗಮದ ಬೀಜ ಖರೀದಿ ವಿವರ, ಬೀಜ ಮಾರಾಟ ಮಾಡಿದ ಪ್ರಮಾಣ, ಆರ್ಥಿಕ ವಹಿವಾಟಿನ ವಿವರ ಮತ್ತು ಲಾಭದ ಅಂಕಿ: ಅಂಶಗಳು ಮತ್ತು 2020-21 ನೇ ಸಾಲಿನ ಯೋಜನೆಯ ವಿವರಗಳನ್ನು ಅನುಬಂಧ-1 ರಲ್ಲಿ ತೋರಿಸಿದೆ.

ನಿಗಮದ ಅತ್ಯುನ್ನತ ಸಾಧನೆಗಳು:

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ನಿಗಮವು ಬೀಜ ಸಂಸ್ಕರಣಾ ಸಾಮರ್ಥ್ಯವನ್ನು ಸುಮಾರು ಎರಡು ಪಟ್ಟು ವೃದ್ಧಿಗೊಳಿಸಿ, 5.00 ಲಕ್ಷ ಕ್ವಿಂಟಾಲ್‌ಗಳಿಗೆ ಹೆಚ್ಚಿಸಿದೆ. ಅಲ್ಲದೆ, ವೈಜ್ಞಾನಿಕ ಬೀಜ ಶೇಖರಣಾ ಗೋದಾಮುಗಳನ್ನು ನಿರ್ಮಿಸಿ ಬೀಜ ಶೇಖರಣಾ ಸಾಮರ್ಥ್ಯವನ್ನು 1.03 ಲಕ್ಷದಿಂದ ಸುಮಾರು 5.50 ಲಕ್ಷ ಕ್ವಿಂಟಾಲ್‌ಗಳಿಗೆ ಹೆಚ್ಚಿಸಿದೆ.

ಕರ್ನಾಟಕ ರಾಜ್ಯ ಬೀಜ ನಿಗಮದ ಇತಿಹಾಸ:

ನಿಗಮವು 1973ನೇ ವರ್ಷದಲ್ಲಿ "ಕರ್ನಾಟಕ ಆಗ್ರೋಸೀಡ್ಸ್ ಕಾರ್ಪೊರೇಷನ್ ಲಿಮಿಟೆಡ್" ಎಂಬ ಹೆಸರಿನಲ್ಲಿ ಕರ್ನಾಟಕ ಕೃಷಿ ಕೈಗಾರಿಕಾ ಸಂಸ್ಥೆಯ ಅಧೀನ ಸಂಸ್ಥೆಯಾಗಿ ಅಸ್ಥಿತ್ವಕ್ಕೆ ಬಂದಿತು. 1979 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ರಾಷ್ಟ್ರೀಯ ಬೀಜ ಯೋಜನೆ-2ರಲ್ಲಿ ಭಾಗವಹಿಸಿದೆ. ರಾಷ್ಟ್ರೀಯ ಬೀಜ ಯೋಜನೆ ಜಾರಿಯಾದಾಗ ಅಧೀನ ಸಂಸ್ಥೆಯಾಗಿದ್ದ ನಿಗಮವನ್ನು "ಕರ್ನಾಟಕ ರಾಜ್ಯ ಬೀಜ ನಿಗಮ" ಎಂಬ ಹೆಸರಿನಲ್ಲಿ ಸ್ವತಂತ್ರ ಸಂಸ್ಥೆಯನ್ನಾಗಿ ಮಾಡಲಾಯಿತು. ಇಂದು ನಿಗಮವು ಯಶಸ್ವಿಯಾಗಿ ನಡೆಯುತ್ತಿರುವ ಕರ್ನಾಟಕ ಸರ್ಕಾರದ ಕೆಲವೇ ಸಂಸ್ಥೆಗಳಲ್ಲಿ ಒಂದಾಗಿದೆ.

ಕಳೆದ ಮೂರು ವರ್ಷಗಳಲ್ಲಿ ಆಯವ್ಯಯದಲ್ಲಿ ಕಲ್ಲಿಸಲಾದ ಅನುದಾಗಳನ್ನು ಬಳಸಿಕೊಂಡಿರುವ ಬಗ್ಗೆ.

2019-20 ನೇ ಸಾಲಿನಲ್ಲಿ ಬೀಜ ನಿಗಮಕ್ಕೆ ನಿಗಮದ ಅಭಿವೃದ್ಧಿ ಕಾರ್ಯಗಳಿಗೆ ರೂ. 5.00 ಕೋಟಿ ಹಣ ಬಿಡುಗಡೆ ಮಾಡಿದ್ದು ಈ ಹಣವನ್ನು ನಿಗಮವು ಬೀಜ ಸಂಸ್ಕರಣ ಮತ್ತು ಬೀಜ ಪ್ರಮಾಣದ ವೆಚ್ಚ, ಸಂಸ್ಕರಣ ಯಂತ್ರಗಳು, ಉಗ್ರಾಣಗಳ ರಿಪೇರಿ ಮತ್ತು ಉನ್ನತೀಕರಣ, ತಳಿ ಅಭಿವೃದ್ಧಿಗಾಗಿ ಹಣವನ್ನು ಖರ್ಚು ಮಾಡಿರುತ್ತದೆ. ಆದರೆ ವಾಹನಗಳನ್ನು ಖರೀದಿಸಲು ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿಸದೆ.

2017-18 ರ ಸಾಲಿನ ಕಾರ್ಯಕ್ರಮ ಹಾಗೂ ಪ್ರಗತಿ:

ಮೂಲ ಬೀಜೋತ್ಪಾದನಾ ಕಾರ್ಯಕ್ರಮ:

ಪ್ರಸಕ್ತ ಸಾಲಿನಲ್ಲಿ ನಿಗಮವು 4033ಎಕರೆ ಪ್ರದೇಶದಲ್ಲಿ ಮೂಲ ಬೀಜೋತ್ಪಾದನೆ ಕೈಗೊಳ್ಳುವ ಗುರಿ ಹೊಂದಿದ್ದು, ಮಾರ್ಚ್-2018 2704 ರ ಅಂತ್ಯದವರೆಗೆ ಎಕರೆಗಳಲ್ಲಿ ಕಾರ್ಯಕ್ರಮ ಕೈಗೊಂಡಿರುತ್ತದೆ. ಒಟ್ಟಾರೆ 20195 ಕ್ವಿಂಟಾಲ್ ಮೂಲ ಬೀಜಗಳನ್ನು ಖರೀದಿಸುವ ಗುರಿಯನ್ನು ಹೊಂದಿದ್ದು, ಪ್ರಸಕ್ತ ಸಾಲಿನಲ್ಲಿ ಮಾರ್ಚ್-2018 ರ ಅಂತ್ಯದವರೆಗೆ 7437 ಕ್ವಿಂಟಾಲ್ ಮೂಲ ಬೀಜಗಳನ್ನು ಖರೀದಿಸಿದೆ.

ಪ್ರಮಾಣಿತ ಬೀಜೋತ್ಪಾದನಾ ಕಾರ್ಯಕ್ರಮ:

ಪ್ರಮಾಣಿತ ಬೀಜೋತ್ಪಾದನೆಗೆ ಸಂಬಂಧಿಸಿದಂತೆ, ನಿಗಮವು 2017-18 ನೇ ಸಾಲಿನಲ್ಲಿ 67119 ಎಕರೆ ಗುರಿಯನ್ನು ಹೊಂದಿದ್ದು, ಮಾರ್ಚ್-2018ರ ಅಂತ್ಯದವರೆಗೆ 63126 ಎಕರೆಗಳಲ್ಲಿ ಪ್ರಮಾಣಿತ ಬೀಜೋತ್ಪಾದನೆಯನ್ನು ಕೈಗೊಂಡಿದೆ.

ಪ್ರಸಕ್ತ ಸಾಲಿನಲ್ಲಿ 398200 ಕ್ವಿಂಟಾಲ್‌ಗಳಷ್ಟು ಪ್ರಮಾಣಿತ ಬೀಜಗಳನ್ನು ಖರೀದಿಸುವ ಗುರಿಯನ್ನು ನಿಗಮವು ಹೊಂದಿದ್ದು, ಮಾರ್ಚ್-2018 ರ ಅಂತ್ಯದವರೆಗೆ 294928 ಕ್ವಿಂಟಾಲ್‌ಗಳಷ್ಟು ಪ್ರಮಾಣಿತ ಬೀಜಗಳನ್ನು ಖರೀದಿಸಲಾಗುತ್ತಿದೆ.

ಬೀಜ ವಿತರಣೆ ಕಾರ್ಯಕ್ರಮ:

2017-18ನೇ ಸಾಲಿನಲ್ಲಿ ಒಟ್ಟಾರೆ 379795 ಕ್ವಿಂಟಾಲ್‌ಗಳಷ್ಟು ಬೀಜಗಳನ್ನು ವಿತರಿಸುವ ಕಾರ್ಯಕ್ರಮವನ್ನು ನಿಗಮವು ಹಾಕಿಕೊಂಡಿದ್ದು, ರೂ. 20719.10 ಲಕ್ಷಗಳಷ್ಟು ಆರ್ಥಿಕ ವಹಿವಾಟನ್ನು ಸಾಧಿಸುವ ಗುರಿ ಹೊಂದಿತ್ತು. ಮಾರ್ಚ್-2018 ರ ಅಂತ್ಯದವರೆಗೆ ನಿಗಮವು 336804 ಕ್ವಿಂಟಾಲ್‌ಗಳಷ್ಟು ಬೀಜಗಳನ್ನು ವಿತರಿಸಿ, ಮಾರ್ಚ್-2018ರ ಅಂತ್ಯದವರೆಗಿನ ಗುರಿ 379795 ಕ್ವಿಂಟಾಲ್‌ಗಳಿಗೆ ಪ್ರತಿಯಾಗಿ ಶೇಕಡ 88.68 ರಷ್ಟು ಪ್ರಗತಿ ಸಾಧಿಸಿದೆ.

2018-19 ರ ಸಾಲಿನ ಕಾರ್ಯಕ್ರಮ ಹಾಗೂ ಪ್ರಗತಿ:

ಮೂಲ ಬೀಜೋತ್ಪಾದನಾ ಕಾರ್ಯಕ್ರಮ:

ಪ್ರಸಕ್ತ ಸಾಲಿನಲ್ಲಿ ನಿಗಮವು 2890 ಎಕರೆ ಪ್ರದೇಶದಲ್ಲಿ ಮೂಲ ಬೀಜೋತ್ಪಾದನೆ ಕೈಗೊಳ್ಳುವ ಗುರಿ ಹೊಂದಿದ್ದು, ಮಾರ್ಚ್-2020 ರ ಅಂತ್ಯದವರೆಗೆ 2272ಎಕರೆಗಳಲ್ಲಿ ಕಾರ್ಯಕ್ರಮ ಕೈಗೊಂಡಿರುತ್ತದೆ. ಒಟ್ಟಾರೆ 19009 ಕ್ವಿಂಟಾಲ್ ಮೂಲ ಬೀಜಗಳನ್ನು ಖರೀದಿಸುವ ಗುರಿಯನ್ನು ಹೊಂದಿದ್ದು, ಪ್ರಸಕ್ತ ಸಾಲಿನಲ್ಲಿ ಮಾರ್ಚ್-2020 ರ ಅಂತ್ಯದವರೆಗೆ 7185 ಕ್ವಿಂಟಾಲ್ ಮೂಲ ಬೀಜಗಳನ್ನು ಖರೀದಿಸಿದೆ.

ಪ್ರಮಾಣಿತ ಬೀಜೋತ್ಪಾದನಾ ಕಾರ್ಯಕ್ರಮ:

ಪ್ರಮಾಣಿತ ಬೀಜೋತ್ಪಾದನೆಗೆ ಸಂಬಂಧಿಸಿದಂತೆ, ನಿಗಮವು 2018-19 ನೇ ಸಾಲಿನಲ್ಲಿ 89571ಎಕರೆ ಗುರಿಯನ್ನು ಹೊಂದಿದ್ದು, ಮಾರ್ಚ್-2020ರ ಅಂತ್ಯದವರೆಗೆ 57539 ಎಕರೆಗಳಲ್ಲಿ ಪ್ರಮಾಣಿತ ಬೀಜೋತ್ಪಾದನೆಯನ್ನು ಕೈಗೊಂಡಿದೆ.

ಪ್ರಸಕ್ತ ಸಾಲಿನಲ್ಲಿ 332060ಕ್ವಿಂಟಾಲ್‌ಗಳಷ್ಟು ಪ್ರಮಾಣಿತ ಬೀಜಗಳನ್ನು ಖರೀದಿಸುವ ಗುರಿಯನ್ನು ನಿಗಮವು ಹೊಂದಿದ್ದು, ಮಾರ್ಚ್-2019ರ ಅಂತ್ಯದವರೆಗೆ 301500 ಕ್ವಿಂಟಾಲ್‌ಗಳಷ್ಟು ಪ್ರಮಾಣಿತ ಬೀಜಗಳನ್ನು ಖರೀದಿಸಲಾಗುತ್ತಿದೆ.

ಬೀಜ ವಿತರಣೆ ಕಾರ್ಯಕ್ರಮ:

2018-19ನೇ ಸಾಲಿನಲ್ಲಿ ಒಟ್ಟಾರೆ 462025 ಕ್ವಿಂಟಾಲ್‌ಗಳಷ್ಟು ಬೀಜಗಳನ್ನು ವಿತರಿಸುವ ಕಾರ್ಯಕ್ರಮವನ್ನು ನಿಗಮವು ಹಾಕಿಕೊಂಡಿದ್ದು, ರೂ. 26610.00 ಲಕ್ಷಗಳಷ್ಟು ಆರ್ಥಿಕ ವಹಿವಾಟನ್ನು ಸಾಧಿಸುವ ಗುರಿ ಹೊಂದಿತ್ತು. ಮಾರ್ಚ್-2019 ರ ಅಂತ್ಯದವರೆಗೆ ನಿಗಮವು 314627 ಕ್ವಿಂಟಾಲ್‌ಗಳಷ್ಟು ಬೀಜಗಳನ್ನು ವಿತರಿಸಿ, ಮಾರ್ಚ್-2019 ರ ಅಂತ್ಯದವರೆಗಿನ ಗುರಿ 462025 ಕ್ವಿಂಟಾಲ್‌ಗಳಿಗೆ ಪ್ರತಿಯಾಗಿ ಶೇಕಡ 68.09 ರಷ್ಟು ಪ್ರಗತಿ ಸಾಧಿಸಿದೆ. ಅದೇ ರೀತಿ ಮಾರ್ಚ್-2019 ರ ಅಂತ್ಯದವರೆಗಿನ ಆರ್ಥಿಕ ಗುರಿ 26610.00 ಲಕ್ಷಗಳಿಗೆ ಪ್ರತಿಯಾಗಿ ನಿಗಮವು 15271.82 ಲಕ್ಷ ಆರ್ಥಿಕ ವಹಿವಾಟು ಸಾಧಿಸಿ ಶೇ. 57.39 ರಷ್ಟು ಪ್ರಗತಿ ಸಾಧಿಸಿದೆ.

2019-20 ರ ಸಾಲಿನ ಕಾರ್ಯಕ್ರಮ ಹಾಗೂ ಪ್ರಗತಿ:

ಮೂಲ ಬೀಜೋತ್ಪಾದನಾ ಕಾರ್ಯಕ್ರಮ:

ಪ್ರಸಕ್ತ ಸಾಲಿನಲ್ಲಿ ನಿಗಮವು **3497** ಎಕರೆ ಪ್ರದೇಶದಲ್ಲಿ ಮೂಲ ಬೀಜೋತ್ಪಾದನೆ ಕೈಗೊಳ್ಳುವ ಗುರಿ ಹೊಂದಿದ್ದು, ಮಾರ್ಚ್-**2020** ರ ಅಂತ್ಯದವರೆಗೆ **2867**ಎಕರೆಗಳಲ್ಲಿ ಕಾರ್ಯಕ್ರಮ ಕೈಗೊಂಡಿರುತ್ತದೆ. ಒಟ್ಟಾರೆ **19,677** ಕ್ವಿಂಟಾಲ್ ಮೂಲ ಬೀಜಗಳನ್ನು ಖರೀದಿಸುವ ಗುರಿಯನ್ನು ಹೊಂದಿದ್ದು, ಪ್ರಸಕ್ತ ಸಾಲಿನಲ್ಲಿ ಮಾರ್ಚ್-**2020** ರ ಅಂತ್ಯದವರೆಗೆ **812** ಕ್ವಿಂಟಾಲ್ ಮೂಲ ಬೀಜಗಳನ್ನು ಖರೀದಿಸಿದೆ.

ಪ್ರಮಾಣಿತ ಬೀಜೋತ್ಪಾದನಾ ಕಾರ್ಯಕ್ರಮ:

ಪ್ರಮಾಣಿತ ಬೀಜೋತ್ಪಾದನೆಗೆ ಸಂಬಂಧಿಸಿದಂತೆ, ನಿಗಮವು **2019-20** ನೇ ಸಾಲಿನಲ್ಲಿ **70449** ಎಕರೆ ಗುರಿಯನ್ನು ಹೊಂದಿದ್ದು, ಮಾರ್ಚ್-**2020**ರ ಅಂತ್ಯದವರೆಗೆ **60339** ಎಕರೆಗಳಲ್ಲಿ ಪ್ರಮಾಣಿತ ಬೀಜೋತ್ಪಾದನೆಯನ್ನು ಕೈಗೊಂಡಿದೆ.

ಪ್ರಸಕ್ತ ಸಾಲಿನಲ್ಲಿ **332060** ಕ್ವಿಂಟಾಲ್‌ಗಳಷ್ಟು ಪ್ರಮಾಣಿತ ಬೀಜಗಳನ್ನು ಖರೀದಿಸುವ ಗುರಿಯನ್ನು ನಿಗಮವು ಹೊಂದಿದ್ದು, ಮಾರ್ಚ್-**2020**ರ ಅಂತ್ಯದವರೆಗೆ **314855** ಕ್ವಿಂಟಾಲ್‌ಗಳಷ್ಟು ಪ್ರಮಾಣಿತ ಬೀಜಗಳನ್ನು ಖರೀದಿಸಲಾಗುತ್ತಿದೆ.

ಬೀಜ ವಿತರಣೆ ಕಾರ್ಯಕ್ರಮ:

ಪ್ರಸಕ್ತ ಸಾಲಿನಲ್ಲಿ ಒಟ್ಟಾರೆ **420495** ಕ್ವಿಂಟಾಲ್‌ಗಳಷ್ಟು ಬೀಜಗಳನ್ನು ವಿತರಿಸುವ ಕಾರ್ಯಕ್ರಮವನ್ನು ನಿಗಮವು ಹಾಕಿಕೊಂಡಿದ್ದು, ರೂ. **21692.00** ಲಕ್ಷಗಳಷ್ಟು ಆರ್ಥಿಕ ವಹಿವಾಟನ್ನು ಸಾಧಿಸುವ ಗುರಿ ಹೊಂದಿತ್ತು. ಮಾರ್ಚ್-**2020**ರ ಅಂತ್ಯದವರೆಗೆ ನಿಗಮವು **301728** ಕ್ವಿಂಟಾಲ್‌ಗಳಷ್ಟು ಬೀಜಗಳನ್ನು ವಿತರಿಸಿ, ಮಾರ್ಚ್-**2020**ರ ಅಂತ್ಯದವರೆಗಿನ ಗುರಿ **420495** ಕ್ವಿಂಟಾಲ್‌ಗಳಿಗೆ ಪ್ರತಿಯಾಗಿ ಶೇಕಡ **71.75** ರಷ್ಟು ಪ್ರಗತಿ ಸಾಧಿಸಿದೆ. ಅದೇ ರೀತಿ ಮಾರ್ಚ್-**2020** ರ ಅಂತ್ಯದವರೆಗಿನ ಆರ್ಥಿಕ ಗುರಿ **21692.00** ಲಕ್ಷಗಳಿಗೆ ಪ್ರತಿಯಾಗಿ ನಿಗಮವು **16042.00** ಲಕ್ಷ ಆರ್ಥಿಕ ವಹಿವಾಟು ಸಾಧಿಸಿ ಶೇ. **73.95** ರಷ್ಟು ಪ್ರಗತಿ ಸಾಧಿಸಿದೆ.

2020-21 ನೇ ಸಾಲಿನ ಯೋಜನೆ :

ಮೂಲ ಬೀಜೋತ್ಪಾದನಾ ಕಾರ್ಯಕ್ರಮ :

ನಿಗಮವು **2020-21** ನೇ ಸಾಲಿನಲ್ಲಿ **3600** ಎಕರೆ ಗುರಿಯನ್ನು ಹಾಕೆಕೊಂಡಿದ್ದು, ಈ ವಿಸ್ತೀರ್ಣದಿಂದ **20,000** ಕ್ವಿಂಟಾಲ್ ಮೂಲಬೀಜವನ್ನು ಉತ್ಪಾದಿಸುವ ಗುರಿಯನ್ನು ಹೊಂದಿರುತ್ತದೆ.

ಪ್ರಮಾಣಿತ ಬೀಜೋತ್ಪಾದನಾ ಕಾರ್ಯಕ್ರಮ :

ನಿಗಮವು **2020-21** ನೇ ಸಾಲಿನಲ್ಲಿ **74786** ಎಕರೆ ಗುರಿಯನ್ನು ಹಾಕಿಕೊಂಡಿದ್ದು, ಈ ವಿಸ್ತೀರ್ಣದಿಂದ **4,42,600** ಕ್ವಿಂಟಾಲ್ ಪ್ರಮಾಣಿತ ಬೀಜವನ್ನು ಉತ್ಪಾದಿಸುವ ಗುರಿಯನ್ನು ಹೊಂದಿರುತ್ತದೆ.

ಬೀಜ ವಿತರಣೆ :

ನಿಗಮವು **2020-21** ನೇ ಸಾಲಿನಲ್ಲಿ **4,39,935** ಕ್ವಿಂಟಾಲ್ ಬೀಜವನ್ನು ವಿತರಿಸುವ ಗುರಿಯನ್ನು ಹಾಕಿಕೊಂಡಿದ್ದು, ಇದರಿಂದ ರೂ. **23,460.00** ಲಕ್ಷಗಳ ಆರ್ಥಿಕ ವಹಿವಾಟನ್ನು ಸಾಧಿಸುವ ಗುರಿಯನ್ನು ಹೊಂದಿರುತ್ತದೆ.

ಅನುಬಂಧ – **1**

2015-16ನೇ ಸಾಲಿನಿಂದ **2019-20** ನೇ ಸಾಲಿನವರೆಗಿನ ಬೀಜ ವಿತರಣೆ, ಆರ್ಥಿಕ ವಹಿವಾಟು ಹಾಗೂ ಲಾಭಾಂಶದ ವಿವರ ಮತ್ತು **2020-21**ನೇ ಸಾಲಿನ ಯೋಜನೆ

ಪ್ರಮಾಣ ಕ್ವಿಂಟಾಲುಗಳಲ್ಲಿ / ಮೊತ್ತ ಲಕ್ಷ ರೂ. ಗಳಲ್ಲಿ

ವರ್ಷ	ಬೀಜ ವಿತರಣಾ ಪ್ರಮಾಣ	ಆರ್ಥಿಕ ವಹಿವಾಟು	ಲಾಭಾಂಶ (ತೆರಿಗೆಗೆ ಮುಂಚಿತ)
2015 – 2016	3,52,610	15,114.17	408.62
2016 – 2017	2,96,036	15,759.39	179.63
2017 – 2018	3,54,120	17,152.09	125.53
2018 –19	3,14,627	15,906.89	84.20
2019-20	3,01,728	17118.07	191.06
2020-21 (Budgeted)	4,39,935	23460.00	450.00

ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ

(ಕರ್ನಾಟಕ ಸರ್ಕಾರದ ಒಂದು ಸ್ವಾಯತ್ತ ಸಂಸ್ಥೆ)

ಬ್ಯಾಪ್ಟಿಸ್ಟ್ ಆಸ್ಪತ್ರೆ ಎದುರು,ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು-560 024

ವಾರ್ಷಿಕ ವರದಿ 2019–20

ಹಿನ್ನೆಲೆ :

ಕರ್ನಾಟಕ ರಾಜ್ಯ ಬೀಜ ಪ್ರಮಾಣನ ಸಂಸ್ಥೆಯನ್ನು (ಕೆ.ಎಸ್.ಎಸ್.ಸಿ.ಎ.) 1974ನೇ ಸಾಲಿನಲ್ಲಿ ಕೇಂದ್ರ ಬೀಜ ಕಾಯ್ದೆ 1966ರ ಪರಿಛೇದ 8ರ ಪ್ರಕಾರ ಸ್ಥಾಪಿಸಲ್ಪಟ್ಟು ಕರ್ನಾಟಕ ಸೊಸೈಟಿ ನೋಂದಣಿ ಕಾಯ್ದೆ 1960ರ ರಡಿಯಲ್ಲಿ ನೋಂದಾಯಿಸಲ್ಪಟ್ಟಿದೆ. ಸಂಸ್ಥೆಯು ಜನವರಿ 1975ನೇ ಸಾಲಿನಲ್ಲಿ ಕಾರ್ಯರೂಪಕ್ಕೆ ಬಂದಿರುತ್ತದೆ. ಕೃಷಿ ಕ್ಷೇತ್ರದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಸೇವೆಯನ್ನು ವಿಸ್ತರಿಸಿಕೊಳ್ಳಲು ಅವಕಾಶವಿರುವುದರಿಂದ ಸಾವಯವ ಪ್ರಮಾಣನ ವಿಭಾಗವನ್ನು 2013ನೇ ಸಾಲಿನಲ್ಲಿ ಸೇರಿಸಿ ಸಂಸ್ಥೆಯನ್ನು "ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ" ಎಂಬುದಾಗಿ ಮರು ನಾಮಕರಣ ಮಾಡಲಾಗಿದೆ. ಸಂಸ್ಥೆಯಲ್ಲಿ ಸದ್ಯಕ್ಕೆ ಬೀಜ ಪ್ರಮಾಣನ ಸೇವೆಗಳು ಮತ್ತು ಸಾವಯವ ಪ್ರಮಾಣನ ಸೇವೆಗಳು ಲಭ್ಯವಿರುವುದರಿಂದ ಮತ್ತು ಎರಡೂ ಸೇವೆಗಳನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗುತ್ತಿದ್ದು ಆಯಾ ಕಾರ್ಯಕ್ರಮಕ್ಕೆ ಪ್ರತ್ಯೇಕ ಗುರಿಗಳನ್ನು ನಿಗಧಿಪಡಿಸಿ ಅದರಂತೆ ಕಾರ್ಯಚಟುವಟಿಕೆ ಕೈಗೊಳ್ಳಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಬಿತ್ತನೆ ಬೀಜಗಳ ಪ್ರಮಾಣೀಕರಣ ಕಾರ್ಯವನ್ನು ಕೈಗೊಳ್ಳುವುದು ಮುಖ್ಯ ಉದ್ದೇಶವಾಗಿರುತ್ತದೆ. ಸಂಸ್ಥೆಯು ಪ್ರಾರಂಭವಾದಾಗಿನಿಂದ ಬೀಜ ಉತ್ಪಾದಕರಿಗೆ, ಬೀಜ ಬೆಳೆಗಾರರಿಗೆ ಮತ್ತು ಅದರಲ್ಲೂ ರೈತ ಸಮುದಾಯಕ್ಕೆ ಅತ್ಯುತ್ತಮ ಸೇವೆಯನ್ನು ಒದಗಿಸುತ್ತಾ ಬಂದಿದೆ. ಬೀಜ ಪ್ರಮಾಣನ ಚಟುವಟಿಕೆಗಳು ವರ್ಷದಿಂದ ವರ್ಷಕ್ಕೆ ಹೆಚ್ಚಿಗೆಯಾಗುತ್ತಿದ್ದು, 1975ರಲ್ಲಿ 6315ಹೆಕ್ಟೇರ್ ವಿಸ್ತೀರ್ಣ ಮತ್ತು 56179ಕ್ವಿಂಟಾಲ್ ಬಿತ್ತನೆ ಬೀಜವು ಪ್ರಮಾಣೀಕರಿಸಲ್ಪಟ್ಟಿದ್ದು, 2019–20ನೇ ಸಾಲಿನಲ್ಲಿ 55205.80 ಹೆಕ್ಟೇರ್ ಮತ್ತು 22949.25ಕ್ವಿಂಟಾಲ್ಆಗಿರುತ್ತದೆ. (ಪ್ರಮಾಣನ ಕಾರ್ಯ ಇನ್ನು ಮುಂದುವರೆಯುತ್ತಿದೆ) ಈ ಗಣನೀಯ ಹೆಚ್ಚಳಕ್ಕೆ ಕೆಲವು ಅಂಶಗಳು ಸಹಕಾರಿಯಾಗಿದ್ದು, ಮುಖ್ಯವಾಗಿ ರೈತ ಸಮುದಾಯದಲ್ಲಿ ಬಿತ್ತನೆ ಬೀಜದ ಉತ್ಪಾದನೆ ಬಗ್ಗೆ ಹೆಚ್ಚಿನ ತಿಳುವಳಿಕೆ ಹಾಗೂ ರೈತರಲ್ಲಿ ಪ್ರಮಾಣಿತ ಬಿತ್ತನೆ ಬೀಜದ ಬಳಕೆಯಿಂದಾಗುವ ಇಳುವರಿಯಲ್ಲಿ ಹೆಚ್ಚಿನ ಆದಾಯಗಳಿಸುವ ಬಗ್ಗೆಅರಿವು ಇರುವುದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಉತ್ತಮ ಗುಣಮಟ್ಟದ ಪ್ರಮಾಣಿತ ಬೀಜದ ಉತ್ಪಾದನೆ ಮತ್ತು ವಿತರಣೆ ಕಾರ್ಯಕ್ರಮಕ್ಕಾಗಿ ಪ್ರೋತ್ಸಾಹ ಹಾಗೂ ರಿಯಾಯಿತಿಗಳನ್ನು ನೀಡುತ್ತಿರುವುದುಹಾಗೂ ರಾಜ್ಯದ ವಿವಿಧ ರೀತಿಯ ವಾತಾವರಣ ಮತ್ತು ವಿವಿಧ ಬಗೆಯ ಮಣ್ಣುಗಳು ಇರುವುದರಿಂದ ವಿವಿಧ ಬೆಳೆಗಳು ಮತ್ತು ತಳಿಗಳನ್ನು ಬೀಜೋತ್ಪಾದನೆ ಮಾಡಲು ವಿಪುಲ ಅವಕಾಶವಿರುತ್ತದೆ.

ಗುರಿಗಳು :

1. ರೈತರು ತಮ್ಮ ಜಮೀನುಗಳಲ್ಲಿ ಎಕರೆವಾರು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಉತ್ತಮ ಗುಣಮಟ್ಟದ ಪ್ರಮಾಣಿತ ಬಿತ್ತನೆ ಬೀಜಗಳನ್ನು ಒದಗಿಸುವುದು.
2. ಸಾವಯವ ಕೃಷಿಯನ್ನು ಉತ್ತೇಜಿಸಲು ಹಾಗೂ ಪ್ರಮಾಣೀಕರಿಸಿದ ಸಾವಯವ ಉತ್ಪನ್ನಗಳು ಲಭ್ಯವಾಗಲು ಪ್ರಮಾಣೀಕರಣ ಕಾರ್ಯ ಕೈಗೊಳ್ಳುವುದು.
3. ಪ್ರಮಾಣೀಕರಣಕ್ಕೆ ನೋಂದಾಯಿಸಿದ ತಾಕುಗಳಲ್ಲಿ ಮತ್ತು ಬೀಜ ಪರೀಕ್ಷಾ ಕೇಂದ್ರಗಳಲ್ಲಿ ಅನುತ್ತೀರ್ಣವಾಗುವ ತಾಕುಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು.
4. ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯು ಸಮರ್ಪಕವಾಗಿ ಮತ್ತು ಸಕಾಲದಲ್ಲಿ ಬೀಜ ಪ್ರಮಾಣನ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವುದು.

ಉದ್ದೇಶಗಳು :

- ಕೇಂದ್ರ ಸರ್ಕಾರದಿಂದ ಅಧಿಸೂಚನೆಯಾಗಿರುವ (ನೋಟಿಫೈಡ್) ತಳಿಗಳ ಮತ್ತು ಹೈಬ್ರಿಡ್ ಬೆಳೆಗಳ ಬೀಜಗಳನ್ನು ಪ್ರಮಾಣೀಕರಿಸುವುದು.
- ಕೇಂದ್ರ ಬೀಜ ಪ್ರಮಾಣನ ಮಂಡಳಿಯಿಂದ ಅನುಮೋದಿಸಲ್ಪಟ್ಟ ಬ್ರೀಡರ್ ಬೀಜ ಹಾಗೂ ಮೂಲ ಬೀಜ ಲಭ್ಯವಿರುವ ಸಂಸ್ಥೆಗಳ ಪಟ್ಟಿಯನ್ನು ನಿರ್ವಹಿಸುವುದು.
- ಪ್ರಮಾಣೀಕರಣಕ್ಕೆ ಅರ್ಜಿ ಸಲ್ಲಿಸುವುದು, ಬೆಳೆ ಬೆಳೆಯುವುದು, ಕಟಾವು, ಸಂಸ್ಕರಣೆ, ಸಂಗ್ರಹಣೆ, ಲೇಬಲ್ ಹಾಕುವುದು, ಇವುಗಳ ಬಗ್ಗೆ ಮಾರ್ಗಸೂಚಿ ರೂಪಿಸುವುದು ಹಾಗೂ ಬಿತ್ತನೆ ಬೀಜವು ಗುಣಮಟ್ಟದಿಂದ ಕೂಡಿದ್ದು, ತಳಿ ಶುದ್ಧವಾಗಿರುವುದಾಗಿ ಪ್ರಮಾಣೀಕರಣಕ್ಕೆ ಅನುಮೋದನೆ ನೀಡುವುದು.
- ಕ್ಷೇತ್ರ ಮಟ್ಟದಲ್ಲಿ ಬೆಳೆಯ ವಿವಿಧ ಹಂತಗಳಲ್ಲಿ ನಿಗಧಿ ಮಾಡಿರುವಂತೆ ಭೇಟಿ ಕೊಟ್ಟು ಕ್ಷೇತ್ರದಲ್ಲಿ ಪ್ರಮಾಣೀಕರಣದ ಅಂಶಗಳನ್ನು ಪರಿಶೀಲನೆ ಮಾಡುವುದು.
- ಸಂಸ್ಕರಣಾ ಘಟಕದಲ್ಲಿ ಸಂಸ್ಕರಣಾ ಕಾರ್ಯವನ್ನು ಉಸ್ತುವಾರಿ ಮಾಡಿ ಮಿಶ್ರಣ ಮತ್ತು ಇತರೇ ತಳಿಗಳು ಮೂಲ ಬೀಜದ ರಾಶಿಗೆ ಸೇರ್ಪಡೆಯಾಗದಂತೆ ಉಸ್ತುವಾರಿ ಮಾಡುವುದು.
- ಸಂಸ್ಕರಣೆ ಮಾಡಿದ ಬೀಜಗಳ ರಾಶಿಯಿಂದ ಮಾರ್ಗಸೂಚಿ ಪ್ರಕಾರ ಮಾದರಿಗಳನ್ನು ತೆಗೆದು ಬೀಜ ಪರೀಕ್ಷೆ ಮತ್ತು ತಳಿ ಶುದ್ಧತಾ ಪರೀಕ್ಷೆಗೆ ಒಳಪಡಿಸುವುದು.
- ಬೀಜ ಅಧಿನಿಯಮದಡಿಯಲ್ಲಿ ಇರುವ ನಿಯಮಾವಳಿಗನುಸಾರವಾಗಿ ಬೀಜ ಪ್ರಮಾಣನ ಪತ್ರವನ್ನು ನೀಡುವುದು (ಟ್ಯಾಗ್‌ಗಳು, ಸೀಲುಗಳು, ಇತ್ಯಾದಿ ಸೇರಿದಂತೆ).

- ಬೀಜ ಪ್ರಮಾಣನ ವಿವಿಧ ಹಂತಗಳಲ್ಲಿ ಬೀಜ ಪ್ರಮಾಣನ ಕಾರ್ಯವು ಶೀಘ್ರವಾಗಿ ನಿರ್ವಹಿಸಲ್ಪಡುವಂತೆ ಕ್ರಮ ವಹಿಸುವುದು.
- ಪ್ರಮಾಣಿತ ಬಿತ್ತನೆ ಬೀಜವನ್ನು ಉಪಯೋಗಿಸುವಂತೆ ರೈತರನ್ನು ಪ್ರೇರೇಪಿಸಲು ವಿವಿಧ ವಿಸ್ತರಣಾ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಹಾಗೂ ಪ್ರಮಾಣನ ಬಿತ್ತನೆ ಬೀಜ ಬೆಳೆಯುವ ರೈತರು ಮತ್ತು ಪ್ರಮಾಣಿತ ಬಿತ್ತನೆ ಬೀಜ ದೊರೆಯುವ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಿಸುವುದು.

ಸಾವಯವ ಪ್ರಮಾಣನ ವಿಭಾಗದ ಗುರಿಗಳು ಮತ್ತು ಉದ್ದೇಶಗಳು:

ಕರ್ನಾಟಕ ರಾಜ್ಯ ಸಾವಯವ ಪ್ರಮಾಣನ ಸಂಸ್ಥೆ (KSOCA)ಯುಭಾರತ ಸರ್ಕಾರದಿಂದ 3ನೇ ವ್ಯಕ್ತಿಯಾಗಿ NAB (National Accredition Body) ಅನುಮೋದಿತ ಸಾವಯವ ಪ್ರಮಾಣೀಕರಣ ಸಂಸ್ಥೆಗಳಲ್ಲಿ ಒಂದಾಗಿರುತ್ತದೆ. ಸಂಸ್ಥೆಯು ಕೇಂದ್ರ ಸರ್ಕಾರವು ನಿಗಧಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಸಾವಯವ ಉತ್ಪನ್ನಗಳನ್ನು NSOP ಮಾರ್ಗಸೂಚಿಯಂತೆ ಪ್ರಮಾಣೀಕರಿಸಲಾಗುತ್ತದೆ. ಇದರಿಂದ ಪ್ರಮಾಣೀಕರಿಸಿದ ಸಾವಯವ ಪದಾರ್ಥಗಳನ್ನು ಸ್ಥಳೀಯ, ದೇಶೀಯ ಮತ್ತು ವಿದೇಶೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಅನುಕೂಲವಾಗುತ್ತದೆ.

ಸಾವಯವ ಕೃಷಿಯಿಂದಾಗಿ

- ಮಣ್ಣಿನ ಆರೋಗ್ಯ ಗುಣಮಟ್ಟ ವೃದ್ಧಿಸಲು ಮಣ್ಣಿನಲ್ಲಿರುವ ಉಪಯುಕ್ತ ಜೀವಾಣುಗಳ ಚಟುವಟಿಕೆ ಹೆಚ್ಚಳವುಂಟಾಗುತ್ತದೆ.ಬೆಳೆಗಳಿಗೆ ಹೆಚ್ಚಿನ ಪೋಷಕಾಂಶಗಳು ಲಭ್ಯವಾಗುತ್ತದೆ.
- ನೈಸರ್ಗಿಕ ಸಂಪನ್ಮೂಲಗಳ ಸಮತೋಲನವನ್ನು ಕಾಪಾಡಲು ಸಹಕಾರಿಯಾಗುತ್ತದೆ.
- ಆರೋಗ್ಯಕರ ಆಹಾರ ಮತ್ತು ಮಾಲಿನ್ಯರಹಿತ ವಾತಾವರಣವನ್ನು ಪ್ರಾಣಿ ಮತ್ತು ಮಾನವಕುಲಕ್ಕೆ ಒದಗಿಸಿಕೊಡಲು ಸಾವಯವ ಕೃಷಿ ಅವಶ್ಯಕವಾಗಿರುತ್ತದೆ
- ಸಂಸ್ಥೆಯಲ್ಲಿ ಸಾವಯವ ಕೃಷಿಕರಿಗೆ ಸಕಾಲದಲ್ಲಿ ಸಾವಯವ ಪ್ರಮಾಣನದ ಬಗ್ಗೆ ಮಾರ್ಗದರ್ಶನ ಲಭ್ಯವಿರುತ್ತದೆ.

ಸಂಸ್ಥೆಯಲ್ಲಿ ಲಭ್ಯವಿರುವ ಪ್ರಮಾಣೀಕರಣ ಸೇವೆಗಳೆಂದರೆ

- ವ್ಯಕ್ತಿಗತ ಸಾವಯವ ಕೃಷಿ ಕ್ಷೇತ್ರ (Individual farm)
- ಸಾವಯವ ರೈತರ ಗುಂಪು (ICS)
- ಅರಣ್ಯ ಉತ್ಪನ್ನ ಸಂಸ್ಥೆಯು ರೈತರಿಂದ ಕಡಿಮೆ ಸೇವಾ ಶುಲ್ಕ ಪಡೆದು ಸೇವೆ ಒದಗಿಸುತ್ತಿದೆ.

ಸಂಸ್ಥೆಯ ಆಡಳಿತ ಮಂಡಳಿ :

ಸಂಸ್ಥೆಯ ಆಡಳಿತವನ್ನು ನಿರ್ವಹಿಸಲು ಹಾಗೂ ಕಾರ್ಯವಿಧಾನಗಳನ್ನು ರೂಪಿಸಲು ರಾಜ್ಯ ಸರ್ಕಾರವು ರಚಿಸಲಾಗಿರುವ ಸಂಸ್ಥೆಯ ಆಡಳಿತ ಮಂಡಳಿಗೆ ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಸರ್ಕಾರದ ಕಾರ್ಯದರ್ಶಿ, ಕರ್ನಾಟಕ ಸರ್ಕಾರರವರು ಅಧ್ಯಕ್ಷರಾಗಿದ್ದು, ಕೃಷಿ ಆಯುಕ್ತರು, ನಿರ್ದೇಶಕರು, ತೋಟಗಾರಿಕೆ ಇಲಾಖೆ, ವಿಶೇಷ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ಕರ್ನಾಟಕ ಸರ್ಕಾರ, ಸಂಶೋಧನಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಧಾರವಾಡ, ವಿಶೇಷ ಅಧಿಕಾರಿ (ಬೀಜ), ಕೃಷಿ ವಿಶ್ವ ವಿದ್ಯಾಲಯ, ಬೆಂಗಳೂರು, ಧಾರವಾಡ, ಉಪ ಕಾರ್ಯದರ್ಶಿ (ಗುಣ ನಿಯಂತ್ರಣ), ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯ, ನವದೆಹಲಿಇವರುಗಳು Ex-officio ಸದಸ್ಯರಾಗಿರುತ್ತಾರೆ. ಹಾಗೂ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಬೀಜ ನಿಗಮ, ಬೆಂಗಳೂರು ಇವರುಗಳು ವಿಶೇಷ ಆಹ್ವಾನಿತರಾಗಿದ್ದು ಸಂಸ್ಥೆಯ ನಿರ್ದೇಶಕರು ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ.

ರಾಜ್ಯದ ರಾಜಧಾನಿಯಲ್ಲಿ ಮುಖ್ಯ ಕಛೇರಿಯನ್ನು ಹೊಂದಿರುವ ಸಂಸ್ಥೆಯು ಬೆಂಗಳೂರು, ಧಾರವಾಡ ಹಾಗೂ ರಾಯಚೂರುಗಳಲ್ಲಿ ವಲಯ ಕಛೇರಿಗಳನ್ನು ಹಾಗೂ ಬೆಂಗಳೂರು, ಮೈಸೂರು, ದಾವಣಗೆರೆ, ಹಾವೇರಿ, ಧಾರವಾಡ, ಗದಗ, ಬಾಗಲಕೋಟೆ, ರಾಯಚೂರು, ಬಳ್ಳಾರಿ, ಗುಲ್ಬರ್ಗಾ, ಬಿಜಾಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ವಿಭಾಗೀಯ ಕಛೇರಿಗಳನ್ನು ಹೊಂದಿದೆ. ಸಂಸ್ಥೆಯು ಬೀಜ ಪ್ರಮಾಣನಕ್ಕೆ ಅತ್ಯಗತ್ಯವಾದ ವಿವಿಧ ಬೀಜ ಗುಣ ಲಕ್ಷಣಗಳನ್ನು ವಿಶ್ಲೇಷಿಸಲು ಬೆಂಗಳೂರು,ಧಾರವಾಡ ಮತ್ತು ರಾಯಚೂರಿನಲ್ಲಿ ಸುಸಜ್ಜಿತ ಬೀಜ ಪರೀಕ್ಷಾ ಪ್ರಯೋಗಾಲಯಗಳನ್ನು ಹೊಂದಿರುತ್ತದೆ. ಅದೇರೀತಿ ತಳಿಶುದ್ದತಾ ಪರೀಕ್ಷೆಯನ್ನು ಕೈಗೊಳ್ಳಲು ರಾಮಕೃಷ್ಣ ಕೃಷಿ ಶಾಲಾ, ಆನೇಕಲ್ ತಾಲ್ಲೂಕ್ ಮತ್ತು ಧಾರವಾಡದಲ್ಲಿ ತಳಿಶುದ್ದತಾ ಪರೀಕ್ಷಾ ಕೇಂದ್ರಗಳನ್ನು ಹೊಂದಿದೆ.

ಸಿಬ್ಬಂದಿಯ ವಿವರ :

ಸಂಸ್ಥೆಯಲ್ಲಿ ಒಟ್ಟು 203 ಮಂಜೂರು ಮಾಡಿದ ಹುದ್ದೆಗಳಿರುತ್ತವೆ. ಇದರಲ್ಲಿ ಒಟ್ಟು73ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು ಇದರಲ್ಲಿ 48ಹುದ್ದೆಗಳು ತಾಂತ್ರಿಕ ಸಿಬ್ಬಂದಿಯಾಗಿದ್ದು ಉಳಿದ 25 ಹುದ್ದೆಗಳು ಆಡಳಿತ ಹಾಗೂ ಲೆಕ್ಕ ವಿಭಾಗಕ್ಕೆ ಸಂಬಂಧಪಟ್ಟಿದ್ದಾಗಿದೆ ಹಾಗೂ 128 ಖಾಲಿ ಹುದ್ದೆಗಳಿವೆ. ಹೊರಗುತ್ತಿಗೆ ಸೇವೆಯಲ್ಲಿ ಒಟ್ಟು 78 ಸಿಬ್ಬಂದಿಗಳ ಸೇವೆ ಪಡೆಯಲಾಗಿದ್ದು ಅದರಲ್ಲಿ ಕ್ರಮವಾಗಿ 32 ತಾಂತ್ರಿಕ ಮತ್ತು 46ಲಿಪಿಕಸಿಬ್ಬಂದಿಗಳು ಆಡಳಿತ ಹಾಗೂ ಲೆಕ್ಕ ವಿಭಾಗದಲ್ಲಿ ಕೆಲಸ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.(ವಿವರ ಅನುಬಂಧ-ಖರಲ್ಲಿ ನೀಡಿದೆ)

ಭೌತಿಕ ಪ್ರಗತಿ :

2019–20ನೇ ಸಾಲಿನಲ್ಲಿ ಒಟ್ಟು 55205.80ಹೆ. ಬೀಜೋತ್ಪಾದನಾ ಪ್ರದೇಶವು ಪ್ರಮಾಣೀಕರಣಕ್ಕೆ ನೋಂದಾವಣೆಯಾಗಿದೆಹಾಗೂ 22949.25ಕ್ವಿಂ.ಬೀಜವನ್ನು ಪ್ರಮಾಣೀಕರಿಸಲಾಗಿದ್ದು ಪ್ರಮಾಣನ ಕಾರ್ಯ ಪ್ರಗತಿಯಲ್ಲಿದೆ.

99 ಸರ್ಕಾರಿ ಹಾಗೂ ಖಾಸಗಿ ಬೀಜೋತ್ಪಾದನಾ ಸಂಸ್ಥೆಗಳು ಸಂಸ್ಥೆಯಲ್ಲಿ ನೋಂದಾಯಿತವಾಗಿದೆ. ಉತ್ಪಾದಿಸಿದ ಬೀಜವನ್ನು ಉತ್ತಮ ರೀತಿಯಲ್ಲಿ ಸಂಸ್ಕರಿಸಲು 106 ಬೀಜ ಸಂಸ್ಕರಣಾ ಘಟಕಗಳು ಸಂಸ್ಥೆಯಲ್ಲಿ ನೋಂದಾಯಿತವಾಗಿವೆ. ಸುಮಾರು 25 ವಿವಿಧ ಬೆಳೆಗಳ 150ಕ್ಕೂ ಹೆಚ್ಚು ತಳಿಗಳ ಬಿತ್ತನೆ ಬೀಜಗಳನ್ನುಪ್ರಮಾಣನ ಕಾರ್ಯಕ್ಕೆ ಒಳಪಡಿಸಲಾಗಿದ್ದು, ಪ್ರಮಾಣೀಕರಣಕ್ಕೆ ನೋಂದಾವಣೆಯಾದ ಒಟ್ಟು ವಿಸ್ತೀರ್ಣ, ಪ್ರಮಾಣೀಕರಿಸಲಾದ ಒಟ್ಟು ದಾಸ್ತಾನು, ಮರುಮೌಲೀಕರಿಸಿದ ದಾಸ್ತಾನು, ಬೀಜ ಪ್ರಯೋಗಾಲಯ ಪರೀಕ್ಷೆ ಮತ್ತು ತಳಿ ಶುದ್ದತಾ ಪರೀಕ್ಷೆಗೆ ಒಳಪಡಿಸಿದ ಬೀಜ ಮಾದರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ. (2020ರ ಮಾರ್ಚ್‌ಅಂತ್ಯಕ್ಕೆ).

(ಕ್ಷೇತ್ರ ಹೆ.ಗಳಲ್ಲಿ, ಪ್ರಮಾಣ ಕ್ವಿಂ.ಗಳಲ್ಲಿ)

ವರ್ಷ	ನೋಂದಾಯಿಸಿದ ಕ್ಷೇತ್ರ	ಪ್ರಮಾಣೀಕರಿಸಿದ ದಾಸ್ತಾನು	ಬೀಜ ಪರೀಕ್ಷೆ ಮಾಡಿದ (ಸಂಖ್ಯೆ)	ತಳಿ ಶುದ್ದತಾ ಪರೀಕ್ಷೆ (ಸಂಖ್ಯೆ)
2018–19	44846.00	518339.68	20226	27868
2019–20	55205.80*	22949.25*	16384	1882

*ಪ್ರಗತಿಯಲ್ಲಿದೆ

ಸಾವಯವ ವಿಭಾಗ:

ಕರ್ನಾಟಕ ಸರ್ಕಾರದ ಸಾವಯವ ಭಾಗ್ಯ ಯೋಜನೆಯಡಿಯಲ್ಲಿ 2015–16ನೇ ಸಾಲಿನಲ್ಲಿ ಒಟ್ಟು 566 ಐಅಐ ಗುಂಪುಗಳಲ್ಲಿ ಉತ್ತರಾಂಚಲ ಸಾವಯವ ಪ್ರಮಾಣನ ಸಂಸ್ಥೆ ರವರೊಡನೆ MOU ಆಧಾರಿತ 204 ಐಅಐ ಗುಂಪುಗಳನ್ನು ಹಂಚಿಕೆ ಮಾಡಿ ಹಾಗೂ ಉಳಿಕೆ 362 AOCA ಗುಂಪುಗಳನ್ನು ಕ್ರಮವಾಗಿ 181 ICS ಗುಂಪುಗಳನ್ನುಂಔಅಂ ಹಾಗೂ ಅಧಿತಿ ಪ್ರಮಾಣನ ಸಂಸ್ಥೆಗಳಿಗೆ ಹಂಚಿಕೆ ಮಾಡಿ ಪ್ರಮಾಣನ ಕಾರ್ಯ ಕೈಗೊಳ್ಳಲಾಗಿದೆ. 2016–17ನೇ ಸಾಲಿನಲ್ಲಿ ಸಂಸ್ಥೆಗೆ Accreditation ದೊರಕಿದ್ದರಿಂದಾಗಿ ಉತ್ತರಾಂಚಲ ಸಂಸ್ಥೆಗೆ ನೀಡಿದ್ದ 204 ICS ಗುಂಪುಗಳನ್ನು KSOCA ಗೆ ವರ್ಗಾಯಿಸಿಕೊಂಡು ಪ್ರಮಾಣನ ಕಾರ್ಯ ಕೈಗೊಳ್ಳಲಾಗುತ್ತಿದೆ. ಉಳಿದ 362 ICS ಗುಂಪುಗಳನ್ನು AOCA ಮತ್ತು ಅಧಿತಿ ಸಂಸ್ಥೆಗಳೊಡನೆ MOU ಆಧಾರಿತ ಪ್ರಮಾಣನ ಕಾರ್ಯ ಕೈಗೊಳ್ಳಲಾಗುತ್ತಿದೆ.(KSOCAಯ 195 SBY ICS & ಇತರೆ ICS 17, 126 ವ್ಯಕ್ತಿಗತಗಳಿಗೆ ಮಾತ್ರ).

ಹಣಕಾಸು ನಿರ್ವಹಣೆ :

ಸಂಸ್ಥೆಯು ವಿವಿಧ ಪ್ರಮಾಣೀಕರಣ ಕಾರ್ಯಗಳಿಗಾಗಿ ವಿಧಿಸುವ ಸೇವಾ ಶುಲ್ಕಗಳು ಮಾತ್ರ ಸಂಸ್ಥೆಯ ಆದಾಯ ಮೂಲವಾಗಿದ್ದು, ರಾಜ್ಯ ಸರ್ಕಾರದಿಂದ ಸದರಿ ಸಾಲಿನಲ್ಲಿ ಸಂಸ್ಥೆಯ ಆಯವ್ಯಯಕ್ಕಾಗಿ (ಬಡ್ಜಟರಿ) ಅನುದಾನ ಇರುವುದಿಲ್ಲ. 2018–19 ಹಾಗೂ 2019–20ರ ಸಾಲಿನ ಸಂಸ್ಥೆಯ ಆದಾಯ ವೆಚ್ಚವನ್ನು ಈ ಕೆಳಗೆ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ವರ್ಷ	ಆದಾಯ	ಖರ್ಚು	ಉಳಿತಾಯ	ಖೋತಾ
2018–19	870.39	817.88	52.51	–
2019–20	903.5	141.97	–	5.16

ಸಂಸ್ಥೆಯ ತಾಂತ್ರಿಕ ಸಿಬ್ಬಂದಿ ಹಾಗೂ ಬೀಜೋದ್ಯಮದ ಕಾರ್ಯ ಚಟುವಟಿಕೆಯಲ್ಲಿ ತೊಡಗಿರುವವರಿಗೆ ಉಪಯೋಗವಾಗುವಂತೆ ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯ 2020ನೇ ಸಾಲಿನ ಬೀಜ ಪ್ರಮಾಣೀಕರಣ ದಿನಚರಿಯನ್ನು2020 ಜನವರಿ ಮೂರನೇ ವಾರದಲ್ಲಿ ಬಿಡುಗಡೆಗೊಳಿಸಲಾಯಿತು.

ಕೃತಜ್ಞತೆ :

ವರದಿಯ ಆರ್ಥಿಕ ಸಾಲಿನಲ್ಲಿ, ಸಂಸ್ಥೆಯ ಎಲ್ಲಾ ವಹಿವಾಟುಗಳನ್ನು ಸಮರ್ಪಕವಾಗಿ ನಡೆಸಲು ಸಹಕಾರ ನೀಡಿದ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಆರ್ಥಿಕ ಇಲಾಖೆ, ಸರ್ಕಾರಿ ಹಾಗೂ ಖಾಸಗಿ ಬೀಜೋತ್ಪಾದಕರು, ಬ್ಯಾಂಕ್‌ಗಳ, ಹಾಗೂ ಸಂಬಂಧಪಟ್ಟ ಇಲಾಖೆಗಳು ಮತ್ತು ಸಂಸ್ಥೆಗಳಿಗೆ, ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆಯು ಕೃತಜ್ಞತೆಯನ್ನು ಸಲ್ಲಿಸುತ್ತಾ, ಇವರು ನೀಡಿದ ಪ್ರೋತ್ಸಾಹ ಹಾಗೂ ಸೇವೆಯನ್ನು ದಾಖಲಿಸಿದೆ.

ಮುಂದುವರೆದು, ಮೆ॥ ಶ್ರೀಧರ ಅಂಡ್ ಶಾಸ್ತ್ರಿ, ಲೆಕ್ಕ ಪರಿಶೋಧಕರು, ಇವರಿಂದ ಲೆಕ್ಕ ಪರಿಶೋಧನೆಯನ್ನು ಮಾಡಿಸಬೇಕಾಗಿರುತ್ತದೆ.

ಕಡೆಯದಾಗಿ, ವರದಿ ಸಾಲಿನಲ್ಲಿ ಸಂಸ್ಥೆಯ ಎಲ್ಲಾ ವಹಿವಾಟುಗಳನ್ನು ಸುಗಮ ಹಾಗೂ ಸಮರ್ಪಕವಾಗಿ ನಡೆಸಲು ಶ್ರಮಿಸಿರುವ ಎಲ್ಲಾ ಅಧಿಕಾರಿಗಳು/ಸಿಬ್ಬಂದಿ ವರ್ಗದವರಿಗೆ ಸಂಸ್ಥೆಯು ಪ್ರಶಂಶಿಸಿ, ಇವರುಗಳ ಸೇವೆಯನ್ನು ದಾಖಲಿಸಿದೆ.

ಅನುಬಂಧ-I

ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ

ವೃಂದವಾರು ಮಂಜೂರಾಗಿರುವ, ಭರ್ತಿಯಾಗಿರುವ, ಖಾಲಿ ಇರುವ ಹುದ್ದೆಗಳ ವಿವರಗಳು

(ದಿನಾಂಕ: 31.03.2020ರ ಅವದಿಗೆ)

ಕ್ರ.ಸಂಖ್ಯೆ	ಹುದ್ದೆ ಹಾಗೂ ವೇತನ ಶ್ರೇಣಿ	ಮಂಜೂರಾತಿಯಾಗಿರುವ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳು		
			ಸಂಸ್ಥೆಯ ಸಿಬ್ಬಂದಿ ಸಂಖ್ಯೆ	ಪ್ರತಿನಿಯೋಜನೆ ಯಲ್ಲಿ	ಖಾಲಿ ಇರುವ ಹುದ್ದೆಗಳು
1	ನಿರ್ದೇಶಕರು (ರೂ.90500–123300)	01	00	01	00
2	ಜಂಟಿ ನಿರ್ದೇಶಕರು (ರೂ.74400–109600)	01	00	01	00
3	ಉಪ ನಿರ್ದೇಶಕರು, ಬೀಪ್ರ., (ರೂ.67500–104600)	04	03	00	01
4	ಸಹಾಯಕ ನಿರ್ದೇಶಕರು, ಬೀಪ್ರ., (ರೂ.52650–97100)	20	18	00	02
5	ಸೀನಿಯರ್ ಸೀಡ್ ಅನಲಿಸ್ಟ್, (ರೂ.52650–97100)	02	00	00	02
6	ಬೀಜ ಪ್ರಮಾಣನ ಅಧಿಕಾರಿ, (ರೂ.43100–83900)	51	05	00	46
7	ಬೀಜ ಅಧಿಕಾರಿ (ರೂ.40900–78200)	10	04	00	06
8	ಹಿರಿಯ ಬೀಜ ಸಂಸ್ಕರಣಾ ಸಹಾಯಕರು (ರೂ.37900–70850)	22	15	00	07
9	ಬೀಜ ಸಂಸ್ಕರಣಾ ಸಹಾಯಕರು (ರೂ.23500-47650)	21	03	00	18
10	ಆಡಳಿತಾಧಿಕಾರಿ (ರೂ.40900–78200)	01	00	00	01
11	ಲೆಕ್ಕಾಧಿಕಾರಿ (ರೂ.40900-78200)	01	01	00	00
12	ಅಧೀಕ್ಷಕರು (ರೂ.37900-70850)	06	01	00	05
13	ಹಿರಿಯ ಕಛೇರಿ ಸಹಾಯಕರು (ರೂ.27650-52650)	06	04	00	02
14	ಶೀಘ್ರಲಿಪಿಗಾರರು (ರೂ.27650-52650)	01	00	00	01
15	ಕಛೇರಿ ಸಹಾಯಕರು (ರೂ.21400-42000)	13	06	00	07
16	ಬೆರಳಚ್ಚುಗಾರರು (ರೂ.21400-42000)	02	00	00	02
17	ಸ್ವಾಗತಗಾರರು ಹಾಗೂ ದೂರವಾಣಿ ನಿರ್ವಾಹಕರು (ರೂ.27650-52650)	01	00	00	01

ಕ್ರ.ಸಂ.	ಹುದ್ದೆ ಹಾಗೂ ವೇತನ ಶ್ರೇಣಿ	ಮಂಜೂರಾತಿಯಾಗಿರುವ ಹುದ್ದೆಗಳ ಸಂಖ್ಯೆ	ಭರ್ತಿಯಾಗಿರುವ ಹುದ್ದೆಗಳು		
			ಸಂಸ್ಥೆಯ ಸಿಬ್ಬಂದಿ ಸಂಖ್ಯೆ	ಪ್ರತಿನಿಯೋಜನೆ ಯಲ್ಲಿ	ಖಾಲಿ ಇರುವ ಹುದ್ದೆಗಳು
18	ಹಿರಿಯ ವಾಹನ ಚಾಲಕರು (ರೂ.27650-52650)	02	02	00	00
19	ವಾಹನ ಚಾಲಕರು (ರೂ.21400-42000)	11	02	00	09
20	ಅನುಚರರು (ರೂ.18600-32600)	15	07	00	08
21	ಕಾವಲುಗಾರರು / ಗ್ರೂಪ್ ಡಿ (ರೂ.17000-28950)	12	02	00	10
	ಒಟ್ಟು	**203**	**73**	**02**	**128**

ಲೆಕ್ಕಸಾರ:		
ಅ	ಪ್ರತಿ ನಿಯೋಜನೆ ಸೇವೆಯಲ್ಲಿ	02
ಆ	ಸಂಸ್ಥೆಯ ಸಿಬ್ಬಂದಿ	73
	ಒಟ್ಟು	**75**
ಇ	ಖಾಲಿ ಇರುವ ಹುದ್ದೆ	128
	ಒಟ್ಟು	203

ಹೊರಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿರುವ ಸಿಬ್ಬಂದಿಗಳು		
ಅ	ಬೀಜ ಪ್ರಮಾಣನ ಅಧಿಕಾರಿ	32
ಆ	ಕಂಪ್ಯೂಟರ್ ಆಪರೇಟರ್ ಕಂ. ಆಫೀಸ್ ಅಸಿಸ್ಟೆಂಟ್	17
ಇ	ವಾಹನ ಚಾಲಕರು	12
ಈ	ಗ್ರೂಪ್ "ಡಿ"	12
ಉ	ರಾತ್ರಿ ಕಾವಲುಗಾರ	03
ಊ	ಸ್ವಚ್ಛತಾ ಸಿಬ್ಬಂದಿ	02
	ಒಟ್ಟು	**78**

ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (ಕೆಪೆಕ್) ದ ಕಾರ್ಯ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತ ವರದಿ

ರಾಜ್ಯ ಸರ್ಕಾರವು "ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ" ವನ್ನು ದಿನಾಂಕ 22.04.1996 ರಲ್ಲಿ ಕಂಪನಿ ಕಾಯ್ದೆ 1956 ರಡಿಯಲ್ಲಿ ಸ್ಥಾಪಿಸಿದೆ. ನಿಗಮದ ಅಧಿಕೃತ ಷೇರು ಬಂಡವಾಳ ರೂ.500 ಲಕ್ಷಗಳು; ಈ ಪೈಕಿ ರೂ.50 ಲಕ್ಷ ಷೇರು ಬಂಡವಾಳವನ್ನು ಸರ್ಕಾರವು ಸಂಸ್ಥೆಗೆ ಬಿಡುಗಡೆ ಮಾಡಿರುತ್ತದೆ. ಕರ್ನಾಟಕ ಸರ್ಕಾರವು ರೂ.1000 ಲಕ್ಷಗಳನ್ನು ಒಂದು ಬಾರಿಯ ಅನುದಾನವಾಗಿ ರಾಜ್ಯದ ವಿವಿಧೆಡೆ ಕೊಯ್ಲಿನ ನಂತರದ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಬಿಡುಗಡೆ ಮಾಡಿರುತ್ತದೆ.

ನಿಗಮದ ಮುಖ್ಯ ಉದ್ದೇಶಗಳು :

* ಕೃಷಿ, ತೋಟಗಾರಿಕೆ ಹಾಗೂ ಪುಷ್ಪೋದ್ಯಮದ ಅಭಿವೃದ್ಧಿ, ಪದೋನ್ನತಿ, ಸಂಸ್ಕರಣೆ ಹಾಗೂ ರಫ್ತಿಗೆ ಅನುಕೂಲ ಕಲ್ಪಿಸುವುದು.
* ಕೃಷಿ ಹಾಗೂ ತೋಟಗಾರಿಕೆ ಉತ್ಪನ್ನಗಳ ಕೊಯ್ಲಿನ ನಂತರದ ನಿರ್ವಹಣೆಗೆ ಅವಶ್ಯವಾದ ಮೂಲಭೂತ ಸೌಕರ್ಯಗಳನ್ನು ನಿರ್ಮಾಣ ಮಾಡುವುದು ಹಾಗೂ ಖಾಸಗಿಯವರಿಗೆ ನಿರ್ಮಿಸಲು ಪ್ರೋತ್ಸಾಹಿಸುವುದು.
* ರೈತರು, ವಿಜ್ಞಾನಿಗಳು, ಮತ್ತು ಹಣಕಾಸು ಸಂಸ್ಥೆಯ ಅಧಿಕಾರಿಗಳನ್ನು ಒಳಗೊಂಡ ಸಭೆಗಳನ್ನು ನಡೆಸಿ ರೈತರಿಗೆ ಅವರಲ್ಲಿ ಕೃಷಿ ಉತ್ಪನ್ನಗಳ ರಫ್ತಿನಿಂದಾಗುವ ಅನುಕೂಲಗಳ ಬಗ್ಗೆ ತಿಳಿಸುವುದು.
* ಸರ್ಕಾರದಿಂದ ಘೋಷಿಷಲ್ಪಡುವ ಕೊಯ್ಲಿನ ನಂತರದ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದ ಯೋಜನೆಗಳ ಅನುಷ್ಠಾನಕ್ಕೆ ನೋಡಲ್ ಏಜನ್ಸಿಯಾಗಿ ಕಾರ್ಯ ನಿರ್ವಹಣೆ ಅಥವಾ ಕಾಲ ಕಾಲಕ್ಕೆ ಸರ್ಕಾರವು ನಿಯೋಜಿಸುವ ಚಟುವಟಿಕೆಗಳು.
* ರೈತರಿಗೆ, ರೈತರ ಸಂಸ್ಥೆಗಳಿಗೆ, ಭಾವೀ ಉದ್ದಿಮೆದಾರರಿಗೆ / ರಫ್ತುದಾರರಿಗೆ ರಫ್ತು ವ್ಯಾಪಾರ ಪ್ರಾರಂಭಿಸಲು ಹಾಗೂ ಕೃಷಿ ಸಂಸ್ಕರಣೆ ಘಟಕಗಳನ್ನು ಸ್ಥಾಪಿಸಲು ಅವಶ್ಯಕವಿರುವ ಮಾರ್ಗದರ್ಶನ ನೀಡುವುದು.

ಕೆಪೆಕ್ ಸಂಸ್ಥೆಯು ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಹಾಗೂ ಸಂರಕ್ಷಣೆ ಸಲುವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ಕೊಯ್ಲಿನ ನಂತರದ ಮೂಲಭೂತ ಸೌಕರ್ಯಗಳಾದ ಪ್ಯಾಕ್‌ಹೌಸ್, ಪ್ರೀ ಕೂಲಿಂಗ್ ಘಟಕ, ಶೀತಲ ಗೃಹ, ಹಣ್ಣು ಮಾಗಿಸುವ ಘಟಕ, ಉಗ್ರಾಣಗಳು ಮುಂತಾದವುಗಳನ್ನು

ಸ್ಥಾಪಿಸುತ್ತಿದೆ ಹಾಗೂ ಸುರಕ್ಷಿತ ಸಾಗಾಣಿಕೆಗೆ ರೆಫ್ರಿಜರೇಟೆಡ್ ವಾಹನ, ಮುಂತಾದವುಗಳನ್ನು ಹೊಂದಲಾಗಿದೆ. ವಿವರಗಳು ಕೆಳಕಂಡಂತಿವೆ:-

1. ದ್ರಾಕ್ಷಿ, ದಾಳಿಂಬೆ, ಲಿಂಬೆ ಮುಂತಾದ ಕೃಷಿ / ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ, ಸಂರಕ್ಷಣೆ ಹಾಗೂ ರಫ್ತು ಅನುಕೂಲಕ್ಕೋಸ್ಕರ ರಾಜ್ಯದ ವಿಜಯಪುರ ಮತ್ತು ಕುಷ್ಟಗಿಯಲ್ಲಿ ಸಮಗ್ರ ಶೀತಲ ಸರಪಳಿ ಘಟಕಗಳು ಕಾರ್ಯಾಚರಣೆಯಲ್ಲಿವೆ.

2. ಮಾವು, ದ್ರಾಕ್ಷಿ, ದಾಳಿಂಬೆ ಹಾಗೂ ಇತರೇ ಕೃಷಿ / ತೋಟಗಾರಿಕೆ ಉತ್ಪನ್ನಗಳ ಸಂರಕ್ಷಣೆ, ಸಂಸ್ಕರಣೆ ಹಾಗೂ ರಫ್ತಿನ ಸಲುವಾಗಿ ರಾಜ್ಯದ ಹುಬ್ಬಳ್ಳಿ ಹಾಗೂ ಬಾಗಲಕೋಟೆಗಳಲ್ಲಿ ಸಮಗ್ರ ಶೀತಲ ಸರಪಳಿ ಘಟಕಗಳು ಕಾರ್ಯಾಚರಣೆಯಲ್ಲಿವೆ.

3. ವಿಜಯಪುರದಲ್ಲಿ ರೈತರು ಸಂಸ್ಕರಿಸಿದ ಒಣದ್ರಾಕ್ಷಿ ಹಾಗೂ ಇತರೇ ಕೃಷಿ / ತೋಟಗಾರಿಕೆ ಉತ್ಪನ್ನಗಳ ಶೇಖರÀಣೆಗೆ ಸುಮಾರು 4000 ಮೆ. ಟನ್ ಸಾಮಥ್ರ್ಯದ ಶೀತಲಗೃಹ ಕಾರ್ಯಾಚರಣೆಯಲ್ಲಿದೆ.

4. ಒಣ ಮೆಣಸಿನಕಾಯಿ, ಹೆಸರು ಹಾಗೂ ಇತರೇ ಕೃಷಿ / ತೋಟಗಾರಿಕೆ ಉತ್ಪನ್ನಗಳ ಶೇಖರಣೆಗೆ ಗದಗ್‌ನ ಎ.ಪಿ.ಎಂ.ಸಿ ಆವರಣದಲ್ಲಿ ಸುಮಾರು 1000 ಮೆ. ಟನ್ ಸಾಮಥ್ರ್ಯದ ಶೀತಲಗೃಹ ಕಾರ್ಯಾಚರಣೆಯಲ್ಲಿದೆ.

5. ಕೃಷಿ ಉತ್ಪನ್ನಗಳ ಶೇಖರಣೆಗೆ ಹುಬ್ಬಳ್ಳಿ ಎ.ಪಿ.ಎಂ.ಸಿ ಆವರಣದಲ್ಲಿ ಸುಮಾರು 6300 ಮೆ. ಟನ್ ಸಾಮಥ್ರ್ಯದ ಗೋದಾಮು ಕಾರ್ಯಾಚರಣೆಗೆ ಸಿದ್ಧವಾಗಿದೆ. ಇದೇ ಆವರಣದಲ್ಲಿ ಸುಮಾರು 2500 ಮೆ. ಟನ್ ಸಾಮಥ್ರ್ಯದ ಗೋದಾಮು ಕಾರ್ಯಾಚರಣೆಗೆ ಸಿದ್ಧವಾಗಿದೆ.

6. ದ್ರಾಕ್ಷಿ, ದಾಳಿಂಬೆ, ಲಿಂಬೆ ಹಾಗೂ ಇತರೇ ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಹಾಗೂ ಸಂರಕ್ಷಣೆಗೆ ಮತ್ತು ರಫ್ತಿನ ಅನುಕೂಲಕ್ಕೋಸ್ಕರ ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ಸಮಗ್ರ ಶೀತಲ ಸರಪಳಿ ಘಟಕ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದ್ದು, ಕಾರ್ಯಾಚರಣೆಗೆ ಸಿದ್ಧವಾಗಿದೆ.

7. ಕೃಷಿ ಉತ್ಪನ್ನಗಳ ಶೇಖರಣೆಗೆ ಬೀದರ್ ಜಿಲ್ಲೆಯ ಹುಮ್ನಾಬಾದ್‌ನ ಕೆ.ಐಎ.ಡಿ.ಬಿ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 2780 ಮೆ. ಟನ್ ಸಾಮಥ್ರ್ಯದ ಗೋದಾಮು ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದ್ದು, ಕಾರ್ಯಾಚರಣೆಗೆ ಸಿದ್ಧವಾಗಿದೆ.

8. ಕೃಷಿ ಉತ್ಪನ್ನಗಳ ಶೇಖರಣೆಗೆ ವಿಜಯಪುರದ ಕೆ.ಐಎ.ಡಿ.ಬಿ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 5420 ಮೆ. ಟನ್ ಸಾಮಥ್ರ್ಯದ ಗೋದಾಮು ನಿರ್ಮಾಣ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದ್ದು, ಕಾರ್ಯಾಚರಣೆಗೆ ಸಿದ್ಧವಾಗಿದೆ.

9. ಕೃಷಿ ಉತ್ಪನ್ನಗಳ ಶೇಖರಣೆಗೆ ಬಾಗಲಕೋಟೆಯ ನವನಗರದ ಕೆ.ಐಎ.ಡಿ.ಬಿ ಕೈಗಾರಿಕಾ ಪ್ರದೇಶದಲ್ಲಿ ಸುಮಾರು 3750 ಮೆ. ಟನ್ ಸಾಮಥ್ರ್ಯದ ಗೋದಾಮು ಕಾರ್ಯ ಮುಕ್ತಾಯಗೊಂಡಿದ್ದು, ಕಾರ್ಯಾಚರಣೆಗೆ ಸಿದ್ಧವಾಗಿದೆ.

10. ಅಪೇಡಾ ಸಹಾಯಧನದಿಂದ ಮೆ|| ದಿ ರಾಯ್‌ಬಾಗ್ ತಾಲ್ಲೂಕಾ ದ್ರಾಕ್ಷಿ ಬೆಳೆಗಾರರ ಸಂಸ್ಕರಣೆದಾರರ ಹಾಗೂ ರಫ್ತುದಾರರ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಕುಡಚಿ ಇವರಿಗೆ ಬೆಳಗಾವಿ ಜಿಲ್ಲೆಯ ಕುಡಚಿಯಲ್ಲಿ ಸಮಗ್ರ ಶೀತಲ ಸರಪಳಿ ಘಟಕ ನಿರ್ಮಾಣ ಕಾರ್ಯ ಮುಕ್ತಾಯಗೊಂಡಿದ್ದು, ಕಾರ್ಯಾಚರಣೆಗೆ ಸಿದ್ಧವಾಗಿದೆ. ಈ ಯೋಜನೆಯಲ್ಲಿ ಕೆಪೆಕ್ ಸಂಸ್ಥೆಯು ಯಾವುದೇ ಹಣಕಾಸು ತೊಡಗಿಸಿರುವುದಿಲ್ಲ.

11. ಹುಬ್ಬಳ್ಳಿ ಸಮೀಪದ ಕಲಘಟಗಿ ತಾಲ್ಲೂಕಿನಲ್ಲಿ ಖಾಸಗೀ ಸಹಭಾಗಿತ್ವದಲ್ಲಿ ಮೆ|| ಟ್ರಾಪಿಕೂಲ್ ಫುಡ್ಸ್ ಪ್ರೈವೇಟ್ ಲಿಮಿಟೆಡ್ ಎಂಬ ಹೆಸರಿನಲ್ಲಿ ಹಣ್ಣು ಮತ್ತು ತರಕಾರೀ ಸಂಸ್ಕರಣಾ ಘಟಕವನ್ನು ಪ್ರಾರಂಭಿಸಿದ್ದು, ಘಟಕವು ರೈತರಿಂದ ನೇರವಾಗಿ ಉತ್ಪನ್ನಗಳನ್ನು ಖರೀದಿಸುತ್ತಿದ್ದು, ಇದರಿಂದ ಒಪ್ಪಂದ ಕೃಷಿ ಅಭಿವೃದ್ಧಿಗೆ ಸಹಾಯಕಾರಿಯಾಗಿದೆ. ಈ ಘಟಕದಲ್ಲಿ ಸಂಸ್ಥೆಯಿಂದ ರೂ.169 ಲಕ್ಷಗಳ ಷೇರು ಬಂಡವಾಳ ಹೂಡಲಾಗಿದೆ.

12. ಹಣ್ಣು, ಹೂವು, ತರಕಾರಿ ಮತ್ತು ಇತರೆ ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತಿಗಾಗಿ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರವಿರುವ ಪೂಜೇನಹಳ್ಳಿ ತೋಟಗಾರಿಕಾ ಕ್ಷೇತ್ರದಲ್ಲಿ ಸಮಗ್ರ ಶೀತಲ ಸರಪಳಿ ಘಟಕ ಸ್ಥಾಪನೆ. ಟೆಂಡರ್ ಪ್ರಕ್ರಿಯೆ ಮುಕ್ತಾಯಗೊಂಡಿದ್ದು, ಕಾರ್ಯಾದೇಶ ನೀಡಲಾಗಿದೆ.

13. ಗದಗ್‌ನ ಕೃಷಿ ಮಾರುಕಟ್ಟೆ ಪ್ರಾಂಗಣದಲ್ಲಿ 2800 ಮೆಟ್ರಿಕ್ ಟನ್ ಸಾಮಥ್ರ್ಯದ ಬಹುಕೊಠಡಿ ಶೀತಲ ಗೃಹ ಸ್ಥಾಪನೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದೆ.

ಮುಂದುವರೆದು, ರಾಜ್ಯದ ರೈತರ ಅನುಕೂಲಕ್ಕೋಸ್ಕರ ಕೆಪೆಕ್ ಸಂಸ್ಥೆಯು ರಾಜ್ಯದ ವಿವಿಧ ಭಾಗಗಳಲ್ಲಿ ಅವಶ್ಯಕತೆಗೆ ಹಾಗೂ ಆದ್ಯತೆಗೆ ಅನುಗುಣವಾಗಿ ಕೊಯ್ಲಿನ ನಂತರದ ಮೂಲಭೂತ ಸೌಕರ್ಯಗಳನ್ನು ಹಂತ ಹಂತವಾಗಿ ಸ್ಥಾಪಿಸುವ ಉದ್ದೇಶ ಹೊಂದಿದೆ. ಈ ಉದ್ದೇಶಕ್ಕಾಗಿ ಸಂಸ್ಥೆಯು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಅಪೇಡಾ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಹಾಗೂ ರಾಜ್ಯ ಸರ್ಕಾರದಿಂದ ಹಣಕಾಸಿನ ನೆರವನ್ನು ಪಡೆಯುತ್ತಿದೆ ಮತ್ತು ರಾಜ್ಯ ಸರ್ಕಾರದಿಂದ ಪಡೆದಿರುವ ಒಂದು ಬಾರಿಯ ಅನುದಾನ.

* * * * *

ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ. ಕಲಬುರಗಿ

(ಹಿಂದಿನ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ. ಕಲಬುರಗಿ)

2019–20 ವಾರ್ಷಿಕ ವರದಿ

ಸ್ಥಾಪನೆ :

ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿಯು ಸರ್ಕಾರದ ಆದೇಶ ಸಂ. ಎಹೆಚ್‌ಡಿ 399 ಎಮ್‌ಎಸ್ 99, ಬೆಂಗಳೂರು ದಿನಾಂಕ: 15–03–2002 ರನ್ವಯ ಅಸ್ತಿತ್ವಕ್ಕೆಬಂದಿರುತ್ತದೆ.

14ನೇ ನವೆಂಬರ್ 2018ರಿಂದ ಜಾರಿಗೆ ಬರುವಂತೆ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿಯನ್ನು ಮರುನಾಮಕರಣ ಮಾಡಿ 'ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ' ಎಂದು ಅಸ್ಥಿತ್ವಕ್ಕೆ ಬಂದಿರುತ್ತದೆ. ರಜೀಸ್ಟ್ರಾರ್ ಆಫ್ ಕಂಪನಿ ಇವರ ಪ್ರಮಾಣ ದಿನಾಂಕ 14–11–2018.

ಬಜೆಟ್ - ಬಂಡವಾಳ :

ಕರ್ನಾಟಕ ಸರ್ಕಾರವು 2002ರಲ್ಲಿ ರೂ. 5.00 ಕೋಟಿ ಹಣವನ್ನು ಷೇರು ಹಣವಾಗಿ ಬಿಡುಗಡೆ ಮಾಡಿರುತ್ತದೆ. ಮತ್ತು ದಿನಾಂಕ 31.01.2007 ರಂದು ಸರ್ಕಾರದಿಂದ ರೂ. 285.00 ಲಕ್ಷಗಳನ್ನು ಮಾರುಕಟ್ಟೆ ಮಧ್ಯ ಪ್ರವೇಶ ಕಾರ್ಯಕ್ರಮಗಳನ್ನು ಜರುಗಿಸಲು ಬಿಡುಗಡೆ ಮಾಡಲಾಗಿರುತ್ತದೆ, ಅಲ್ಲದೆ ರೂ. 10.00 ಲಕ್ಷ ಹಣವನ್ನು ಸಂಶೋಧನಾ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಹಾಗೂ ರೂ. 5.00 ಲಕ್ಷವನ್ನು ವಿಸ್ತರಣಾ ಚಟುವಟಿಕೆಗಳಿಗಾಗಿ ಬಿಡುಗಡೆ ಮಾಡಲಾಗಿರುತ್ತದೆ.

ಉದ್ದೇಶಗಳು :

1. ವಿವಿಧ ತಳಿಯ ತೊಗರಿ ಬೆಳೆಯಲು, ಖರೀದಿಸಲು, ಸಂಗ್ರಹಣೆ ಮತ್ತು ಮಾರಾಟ ಮಾಡುವ ಮೂಲ ಉದ್ದೇಶ ಹೊಂದಿದ ಮಂಡಳಿಯು ಸಂಘಟನೆ ಮತ್ತು ಧನ ಸಹಾಯ ಇತ್ಯಾದಿಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳುವುದು.
2. ತೊಗರಿ ಹಾಗೂ ಇತರೆ ಬೇಳೆ ಕಾಳುಗಳು ಮತ್ತು ಅವುಗಳ ಉತ್ಪನ್ನಗಳನ್ನು ಹೆಚ್ಚಿಸುವುದಲ್ಲದೆ ಅಭಿವೃದ್ಧಿಪಡಿಸುವುದು, ಸಹಾಯ ಮಾಡುವುದು, ಸಂರಕ್ಷಿಸುವುದು, ಮತ್ತು ಮಾರಾಟವನ್ನು ಉತ್ತೇಜಿಸುವುದು.
3. ಕೃಷಿ ವಿಶ್ವವಿದ್ಯಾಲಯಗಳಿಂದ, ನಡೆಯುವ ಸಂಶೋಧನಾ ಕಾರ್ಯಗಳಿಗೆ ಪ್ರೋತ್ಸಾಹಿಸುವುದು ಮತ್ತು ಲಭ್ಯವಿರುವ ತಂತ್ರಜ್ಞಾನ ಸೇವೆಯನ್ನು ಉಪಯೋಗಿಸಿಕೊಳ್ಳುವವರಿಗೆ ದೊರಕಿಸಿ ಕೊಡುವುದು.

4. ತೊಗರಿ ಹಾಗೂ ಇತರೆ ಬೇಳೆಕಾಳುಗಳ ಉತ್ಪನ್ನ ಹೆಚ್ಚಿಸುವುದಕ್ಕಾಗಿ, ರೂಪಾಂತರಿಸುವುದಕ್ಕಾಗಿ, ತಂತ್ರಜ್ಞಾನವನ್ನು ಗುರುತಿಸಿ ಅದನ್ನು ರೈತರಿಗೆ, ರೈತರ ಸಹಕಾರ ಸಂಘಗಳಿಗೆ, ವ್ಯಾಪಾರಿಗಳಿಗೆ ಮತ್ತು ಸಂಸ್ಕರಣಾ ಘಟಕಗಳಿಗೆ ಸಿಗುವಂತೆ ಮಾಡುವುದು.

5. ತೊಗರಿ ಹಾಗೂ ಇತರೆ ಬೇಳೆ ಕಾಳುಗಳ ಉಪಯುಕ್ತತೆಯ ಸಂರಕ್ಷತೆಗಾಗಿ ಕರ್ನಾಟಕ ಸರ್ಕಾರದ ಪರವಾಗಿ ಕಾರ್ಯ ನಿರ್ವಹಿಸುವುದು.

6. ವಿಶ್ವವಿದ್ಯಾಲಯಗಳಿಂದ, ರಾಷ್ಟ್ರೀಯ ಸಂಶೋಧನಾ ಕೇಂದ್ರಗಳಿಂದ, ಕಂಪನಿಗಳಿಂದ ಮತ್ತು ದೇಶದ ಹೊರಗೂ ನಡೆಯುವ ಸಂಶೋಧನಾ ಕಾರ್ಯಗಳಿಗೆ ಪ್ರೋತ್ಸಾಹಿಸುವುದು ಮತ್ತು ಲಭ್ಯವಿರುವ ತಂತ್ರಜ್ಞಾನ ಸೇವೆಯನ್ನು ಉಪಯೋಗಿಸಿಕೊಳ್ಳುವವರಿಗೆ ದೊರಕಿಸಿ ಕೊಡುವುದು.

ಚಟುವಟಿಕೆಗಳು :

1. ತರಬೇತಿ ಕಾರ್ಯಕ್ರಮಗಳನ್ನು ಜರುಗಿಸುವುದು.
2. ಸಂಶೋಧನೆಗಳನ್ವಯ ತಾಂತ್ರಿಕತೆಯನ್ನು ರೈತರಿಗೆ ತಿಳಿಯಪಡಿಸುವುದು.
3. ಬೀಜೋತ್ಪಾದನಾ ಕಾರ್ಯಕ್ರಮಗಳಿಗೆ ಸಹಕರಿಸುವುದು.
4. ಬೆಂಬಲ ಬೆಲೆ ಯೋಜನೆಯಡಿ ಮಾರುಕಟ್ಟೆ ಮಧ್ಯಪ್ರವೇಶ ಕಾರ್ಯಕ್ರಮದಡಿ ತೊಗರಿಯನ್ನು ರೈತರಿಂದ ನೇರವಾಗಿ ಖರೀದಿಸುವುದು.

ಮಂಡಳಿಯ ನಿರ್ದೇಶಕರ ವಿವರಗಳು :

ಮಂಡಳಿಯ ಆರ್ಟಿಕಲ್ಸ್ ಆಫ್ ಅಸೋಸಿಯೇಶನ್ಸ್‌ನ ಆರ್ಟಿಕಲ್ 13ರನ್ವಯ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿಗೆ ಕನಿಷ್ಠ ಎರಡು ಮತ್ತು ಗರಿಷ್ಠ 17 ಇದಕ್ಕೆ ಮೀರದಂತೆ ನಿರ್ದೇಶಕರು ಇರಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಅದರಂತೆ, ಸರ್ಕಾರಿ ಪದಾಧಿಕಾರಿಗಳು (12), ಸರ್ಕಾರೇತರ ಪದಾಧಿಕಾರಿಗಳು (5) ಪ್ರಸ್ತುತ ನಿರ್ದೇಶಕರ ವಿವರಗಳು ಕೆಳಗಿನಂತಿವೆ.

ಕ್ರ.ಸಂ.	ಪದನಾಮ	ಹೆಸರು	ಹುದ್ದೆ	ಷರಾ
1.	ಅಧ್ಯಕ್ಷರು	ಶ್ರೀ ಎನ್.ಎಚ್.ಶಿವಶಂಕರ ರೆಡ್ಡಿ	ಕೃಷಿ ಸಚಿವರು ಹಾಗೂ ಅಧ್ಯಕ್ಷರು KSPAML ಕಲಬುರಗಿ	01–04–2018ರಿಂದ 02–08–2019
		ಶ್ರೀ ರಾಜೇಂದರ್ ಕುಮಾರ ಕಟಾರಿಯಾ , IAS	ಕಾರ್ಯದರ್ಶಿಗಳು ಕೃಷಿ ಇಲಾಖೆ ಹಾಗೂ ಅಧ್ಯಕ್ಷರು KSPAML ಕಲಬುರಗಿ	02–08–2019ರಿಂದ 31–03–2020

ಕ್ರ.ಸಂ.	ಪದನಾಮ	ಹೆಸರು	ಹುದ್ದೆ	ಷರಾ
2.	ಕೃಷಿ ಆಯುಕ್ತರು	ಶ್ರೀ ಬ್ರೀಜೇಶ್ ಕುಮಾರ ದೀಕ್ಷಿತ್, IFS	ನಿರ್ದೇಶಕರು ರಿಂದ	1–04–2019ರಿಂದ 31–03–2020
3.	ಜಿಲ್ಲಾಧಿಕಾರಿಗಳು	ಶ್ರೀ ಆರ್. ವೆಂಕಟೇಶ ಕುಮಾರ, IAS	ನಿರ್ದೇಶಕರು	01–04–2018ರಿಂದ 31–08–2019
		ಶ್ರೀ ಶರತ ಬಿ., IAS	ನಿರ್ದೇಶಕರು	31–08–2019 ರಿಂದ 31–03–2020
4.	ಯೋಜನಾ ನಿರ್ದೇಶಕರು ಕೃಷಿ ಸಂಶೋಧನ ಕೇಂದ್ರ, ಕಲಬುರಗಿ	ಶ್ರೀ ಜೈ. ಪ್ರಕಾಶ ಪಾಟೀಲ್	ನಿರ್ದೇಶಕರು	01–04–2019ರಿಂದ 31–03–2020
5.	ಪ್ರಾದೇಶಿಕ ವ್ಯವಸ್ಥಾಪಕರು, ನಬಾರ್ಡ್ ಕಲಬುರಗಿ	ಶ್ರೀ ರಮೇಶ ಎಸ್. ಭಟ್	ನಿರ್ದೇಶಕರು	01–04–2019ರಿಂದ 31–03–2020
6.	ಮುಖ್ಯ ವ್ಯವಸ್ಥಾಪಕರು, ಲೀಡ್ ಬ್ಯಾಂಕ್, ಕಲಬುರಗಿ (ಎಸ್‌ಬಿಐ)	ಶ್ರೀ ಸಿ.ಎಚ್. ಹವಲ್ದಾರ್	ನಿರ್ದೇಶಕರು	01–04–2019ರಿಂದ 31–03–2020
7.	ವಿಭಾಗೀಯ ವ್ಯವಸ್ಥಾಪಕರು/ ಶಾಖಾ ವ್ಯವಸ್ಥಾಪಕರು, ಕೆ.ಎಸ್.ಸಿ.ಎಂ.ಎಫ್. ಕಲಬುರಗಿ	ಶ್ರೀ ಪ್ರದೀಪ	ನಿರ್ದೇಶಕರು	01–04–2018ರಿಂದ 06–07–2019
		ಶ್ರೀ ಸುನೀಲಕುಮಾರ	ನಿರ್ದೇಶಕರು	06–07–2019ರಿಂದ 31–03–2020

ಕ್ರ.ಸಂ.	ಪದನಾಮ	ಹೆಸರು	ಹುದ್ದೆ	ಷರಾ
8.	ಕಾರ್ಯದರ್ಶಿಗಳು ಎ.ಪಿ.ಎಂ.ಸಿ. ಕಲಬುರಗಿ	ಶ್ರೀಮತಿ ಎಂ.ಎಸ್. ರಾಜಶ್ರೀ	ನಿರ್ದೇಶಕರು	01–04–2018ರಿಂದ 31–03–2019
		ಶ್ರೀಮತಿ ಶೈಲಜಾ ಎಮ್. ವಿ	ನಿರ್ದೇಶಕರು	01–04–2019ರಿಂದ 31–03–2020
9.	ಜಂಟಿ ಕೃಷಿ ನಿರ್ದೇಶಕರು, ಕಲಬುರಗಿ	ಶ್ರೀ. ರತೇಂದ್ರನಾಥ ಸುಗೂರ	ನಿರ್ದೇಶಕರು	01–04–2019ರಿಂದ 31–03–2020
10.	ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿ. ಕಲಬುರಗಿ	ಶ್ರೀ. ರತೇಂದ್ರನಾಥ ಸುಗೂರ	ವ್ಯವಸ್ಥಾಪಕ ನಿರ್ದೇಶಕರು (ಪ್ರಭಾರಿ)	01–04–2019 ರಿಂದ 22–07–2019
		ಶ್ರೀ. ಕರುಣಾಕರ ಜೆ.	ವ್ಯವಸ್ಥಾಪಕ ನಿರ್ದೇಶಕರು	22–07–2019 ರಿಂದ 31–03–2020

ಅಧಿಕಾರಿ/ಸಿಬ್ಬಂದಿಗಳ ಕರ್ತವ್ಯ ಮತ್ತು ವಿವರಗಳು :

ಹುದ್ದೆಯ ಹೆಸರು	ಪ್ರಸ್ತುತ ಕಾರ್ಯ ನಿರ್ವಹಣಾ ಸ್ಥಿತಿಗತಿ
ವ್ಯವಸ್ಥಾಪಕ ನಿರ್ದೇಶಕರು	1) ಶ್ರೀ ರತೇಂದ್ರನಾಥ ಸೂಗುರ 01–04–2019 ರಿಂದ 22–07–2019 ವರೆಗೆ 2) ಶ್ರೀ. ಕರುಣಾಕರ ಜೆ. 22–07–2019 ರಿಂದ 31–03–2020
ಮಾರುಕಟ್ಟೆ ಅಧಿಕಾರಿ/ ಕೃಷಿ ಅಧಿಕಾರಿ	M.Sc (Agri) ಕೃಷಿ ಪದವಿಹೊಂದಿದ ಒಬ್ಬ ಅಭ್ಯರ್ಥಿಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸಲಾಗಿದೆ.
ಆಡಳಿತಾಧಿಕಾರಿ	ಕೃಷಿ ಇಲಾಖೆಯಿಂದ ನಿವೃತ್ತಿಹೊಂದಿದ ಆಡಳಿತಾಧಿಕಾರಿಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸಲಾಗಿದೆ.

ಹುದ್ದೆಯ ಹೆಸರು	ಪ್ರಸ್ತುತ ಕಾರ್ಯ ನಿರ್ವಹಣಾ ಸ್ಥಿತಿಗತಿ
ಹಿರಿಯ ಮಾರುಕಟ್ಟೆ ಸಹಾಯಕ	ಕೃಷಿ ಮಾರುಕಟ್ಟೆ ಇಲಾಖೆಯಿಂದ ನಿವೃತ್ತಿಹೊಂದಿದ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸಲಾಗಿದೆ.
ಅಧೀಕ್ಷಕರು / ಅಕೌಂಟೆಂಟ್	MBA (Finance & HR) ಮತ್ತು ಗಣಕಯಂತ್ರದಲ್ಲಿ ಟ್ಯಾಲಿ ವ್ಯವಸ್ಥೆಯಲ್ಲಿ ಪರಿಣಿತಿ ಹೊಂದಿದಒಬ್ಬ ಅಭ್ಯರ್ಥಿಯನ್ನು ತಾತ್ಕಾಲಿಕವಾಗಿಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸಲಾಗಿದೆ.
ದ್ವಿತಿಯ ದರ್ಜೆ ಸಹಾಯಕರು (1)	ಶ್ರೀ ಶಿವಶರಣಪ್ಪ ಇವರು ಫೆಬ್ರುವರಿ 2012 ರಲ್ಲಿ ಅನುಕಂಪದ ಆಧಾರದ ಮೇಲೆ ದ್ವಿತಿಯ ದರ್ಜೆ ಸಹಾಯಕರೆಂದು ಕೃಷಿ ಇಲಾಖೆಯಲ್ಲಿ ನೇಮಕಗೊಂಡು ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿಗೆ ನಿಯೋಜನೆ ಮೇರೆಗೆ ನಿಯುಕ್ತಿಗೊಳಿಸಿರುತ್ತಾರೆ.
ಗಣಕಯಂತ್ರ ನಿರ್ವಾಹಕರು (1)	ಗಣಕಯಂತ್ರದಲ್ಲಿ ಪರಿಣಿತಿಹೊಂದಿದ ಒಬ್ಬ ಅಭ್ಯರ್ಥಿಯನ್ನು ತ್ಕಾಲಿಕವಾಗಿಹೊರಗುತ್ತಿಗೆಆಧಾರದ ಮೇಲೆ ಕಾರ್ಯ ನಿರ್ವಹಿಸಲುವ್ಯವಸ್ಥೆಗೊಳಿಸಲಾಗಿದೆ.
ವಾಹನ ಚಾಲಕ	ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸಲಾಗಿದೆ.
ಗ್ರೂಪ್-ಡಿ ಸೇವಕರು (1)	ಅಭ್ಯರ್ಥಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸಲು ವ್ಯವಸ್ಥೆಗೊಳಿಸಲಾಗಿದೆ.

ಮೇಲ್ಕಾಣಿಸಿದ ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇರೆಗೆ ನೇಮಕ ಮಾಡಿಕೊಂಡು ಸದರಿ ಹುದ್ದೆಗಳನ್ನು ಮಂಡಳಿಯ ನಿರ್ದೇಶಕರ ಸಭೆಯಲ್ಲಿ ಮಂಡಿಸಿ ಮಂಜೂರಾತಿ ಪಡೆಯಲಾಗಿರುತ್ತದೆ.

ಮಾರುಕಟ್ಟೆ ಮಧ್ಯ ಪ್ರವೇಶ ಕಾರ್ಯಕ್ರಮ :

ಕರ್ನಾಟಕ ರಾಜ್ಯದಲ್ಲಿ ಸಾಮಾನ್ಯವಾಗಿ ದ್ವಿದಳಧಾನ್ಯ ಬೆಳೆಗಳನ್ನು ಬೆಳೆಯುವ ರೈತರ ಮತ್ತು ವಿಶೇಷವಾಗಿ ತೊಗರಿ ಬೆಳೆಯುವ ರೈತಾಪಿ ಜನರ ಹಿತದೃಷ್ಟಿಯನ್ನು ಕಾಪಾಡುವ ದಿಶೆಯಲ್ಲಿ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿಯಮಿತ ಸಂಸ್ಥೆಯನ್ನು ಸ್ಥಾಪಿಸಲಾಗಿರುತ್ತದೆ. ಮಂಡಳಿಗೆ ಒದಗಿಸಲಾಗುತ್ತಿರುವ ಆರ್ಥಿಕ ನೆರವನ್ನಾಧರಿಸಿ ಇದುವರೆಗೂ ಕಲಬುರಗಿ, ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮಾತ್ರ ಮಾರುಕಟ್ಟೆ ಮಧ್ಯ ಪ್ರವೇಶ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. ಪ್ರಸ್ತುತ

ರಾಜ್ಯದ ಇತರೆ ಜಿಲ್ಲೆಗಳಿಂದಲೂ ಸಹ ರೈತರು ತೊಗರಿ ಮತ್ತು ಇತರೆ ದ್ವಿದಳ ಧಾನ್ಯ ಬೆಳೆಗಳನ್ನು ಬೆಳೆಯುವಲ್ಲಿ ಸದರಿ ಜಿಲ್ಲೆಗಳೊಂದಿಗೆ ಪೈಪೋಟಿ ನಡೆಸಿರುತ್ತವೆ.

2013–14ನೇ ಸಾಲಿನಲ್ಲಿ ಖರೀದಿ ಮಾಡಲಾಗಿದ್ದ **2,51,012** ಕ್ವಿಂಟಾಲ್ ತೊಗರಿಯನ್ನು **2014–15**ನೇ ಸಾಲಿನಲ್ಲಿ ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲಾಗಿ ಒಟ್ಟು **127** ಕೋಟಿ ರೂ. ವರಮಾನ ಅಂದಾಜಿಸಲಾಗಿದೆ. **2002–03**ರಿಂದ **2014–15**ನೇ ಸಾಲಿನ ವರೆಗೆ ಆವರ್ತನಿಧಿಯಿಂದ ಬಿಡುಗಡೆ ಮಾಡಲಾದ ಹಣವನ್ನು ಈಗಾಗಲೇ ಆವರ್ತನಿಧಿಗೆ ಹಿಂತಿರುಗಿಸಲಾಗಿದೆ.**2014–15**& **2015–16**ನೇ ಸಾಲಿನಲ್ಲಿ ತೊಗರಿಯ ಮಾರುಕಟ್ಟೆ ಬೆಲೆಯ ಕನಿಷ್ಟ ಬೆಂಬಲ ಬೆಲೆಕ್ಕಿಂತ ಹೆಚ್ಚಿನ ದರದಲ್ಲಿ ಮಾರಾಟವಾಗಿರುವದರಿಂದ **2014–15**& **2015–16** ನೇ ಸಾಲಿನಲ್ಲಿ ತೊಗರಿ ಖರೀದಿಸಲಾಗಿರುವುದಿಲ್ಲ.ಮಂಡಳಿಯು ಸ್ಥಾಪಿತಗೊಂಡ ವರ್ಷದಿಂದಲೂ ಇದುವರೆಗೂ ಈ ಕಾರ್ಯಕ್ರಮದಡಿ ಸಾಧಿಸಿದ ಪ್ರಗತಿ ಕೆಳಗಿನಂತಿರುತ್ತದೆ.

ವರ್ಷ	ಸರ್ಕಾರದಿಂದ ಬಿಡುಗಡೆಯಾದ ಹಣ	ಪರಿಮಾಣ (ಕ್ವಿಂಟಾಲ್‌ಗಳಲ್ಲಿ)	ಖರೀದಿಸಲಾದ ತೊಗರಿಯ ಮೊತ್ತ (ರೂ.ಗಳಲ್ಲಿ)
2002-03	50000000*	667.000	1043376.00
2004-05	150000000***	57489.690	103737640.00
2005-06	0	67685.340	114976746.20
2006-07	28500000**	0.000	0.00
2007-08	0	60.000	133004.00
2008-09	30000000***	0.000	0.00
2009-10	0	9745.000	40165311.00
2010-11	0	9248.000	37210540.00
2011-12	220000000****	55115.400	220461600.00
2012-13	250000000***	53484.000	240678000.00
2013-14	1370000000***	251012.000	1255060000.00
2014-15	0	0.000	0.00
2015-16	0	0.000	0.00

ವರ್ಷ	ಸರ್ಕಾರದಿಂದ ಬಿಡುಗಡೆಯಾದ ಹಣ	ಪರಿಮಾಣ (ಕ್ವಿಂಟಾಲ್‌ಗಳಲ್ಲಿ)	ಖರೀದಿಸಲಾದ ತೊಗರಿಯ ಮೊತ್ತ (ರೂ.ಗಳಲ್ಲಿ)
2016-17 *****	ಕೇಂದ್ರ ಸರಕಾರ ರೂ. 185,96,67,550 ರಾಜ್ಯ ಸರಕಾರ ರೂ. 16,57,12,950	367555.50	2021555250.00
2017-18	ಕೇಂದ್ರ ಸರಕಾರದ ಬೆಂಬಲ ಬೆಲೆ ರೂ. 5450/– ರಾಜ್ಯ ಸರಕಾರದ ಪ್ರೋತ್ಸಾಹ ಧನ ರೂ. 550/– ಒಟ್ಟು ಪ್ರತಿ ಕ್ವಿಂಟಾಲ್‌ಗೆ ರೂ. 6000/– ರೂ. 173,46,15,000–00	289102.50	173,46,15,000.00
2018-19	ಕೇಂದ್ರ ಸರಕಾರದ ಬೆಂಬಲ ಬೆಲೆ ರೂ.5675/– ರಾಜ್ಯ ಸರಕಾರದ ಪ್ರೋತ್ಸಾಹ ಧನ ರೂ. 425/– ಒಟ್ಟು ಪ್ರತಿ ಕ್ವಿಂಟಾಲ್‌ಗೆ ರೂ. 6100/– ಒಟ್ಟು ಮೊತ್ತ ರೂ.68,13,63,900/–	111699.00	68,13,63,900.00
2019-20	ಕೇಂದ್ರ ಸರಕಾರದ ಬೆಂಬಲ ಬೆಲೆ ರೂ.5800/– ರಾಜ್ಯ ಸರಕಾರದ ಪ್ರೋತ್ಸಾಹ ಧನ ರೂ. 300/–	281014.50 (15–05–2020ರವರೆಗೆ)	17,14,185,400.00 (15–05–2020ರವರೆಗೆ)

ವರ್ಷ	ಸರ್ಕಾರದಿಂದ ಬಿಡುಗಡೆಯಾದ ಹಣ	ಪರಿಮಾಣ (ಕ್ವಿಂಟಾಲ್‌ಗಳಲ್ಲಿ)	ಖರೀದಿಸಲಾದ ತೊಗರಿಯ ಮೊತ್ತ (ರೂ.ಗಳಲ್ಲಿ)
	ಒಟ್ಟು ಪ್ರತಿ ಕ್ವಿಂಟಾಲ್‌ಗೆ ರೂ. 6100/– ಒಟ್ಟು ಮೊತ್ತ ರೂ.17,14,185,400/–		

* ಷೇರು ಹಣವಾಗಿ ಸರ್ಕಾರದಿಂದ ಬಿಡುಗಡೆ ಮಾಡಲಾದ ಹಣ.

** ಖರೀದಿ ಪ್ರಕ್ರಿಯೆಗಾಗಿ ಬಿಡುಗಡೆ ಮಾಡಲಾದ ಹಣ.

*** ಆವರ್ತ ನಿಧಿಯಿಂದ ಖರೀದಿ ಪ್ರಕ್ರಿಯೆಯಗಾಗಿ ಬಿಡುಗಡೆ ಮಾಡಲಾದ ಹಣ.

**** ಆವರ್ತ ನಿಧಿಯಿಂದ ಸಾಲದ ರೂಪದಲ್ಲಿ ಖರೀದಿ ಪ್ರಕ್ರಿಯೆಗಾಗಿ ಬಿಡುಗಡೆ ಮಾಡಲಾದ ಹಣ.

2015–16ನೇ ಸಾಲಿನಲ್ಲಿ ತೊಗರಿಯ ಮಾರುಕಟ್ಟೆ ಬೆಲೆಯ ಕನಿಷ್ಠ ಬೆಂಬಲ ಬೆಲೆಕ್ಕಿಂತ ಹೆಚ್ಚಿನ ಬೆಲೆಯಲ್ಲಿ ಮಾರಾಟವಾಗಿರುವುದರಿಂದ 2015–16ನೇ ಸಾಲಿನಲ್ಲಿ ತೊಗರಿ ಖರೀದಿಸಲಾಗಿರುವುದಿಲ್ಲ.

2016–17ನೇ ಸಾಲಿನಲ್ಲಿ ಬಫರಸ್ಟಾಕ್ PSF ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ. ಗುಣಮಟ್ಟದ

ತೊಗರಿಯನ್ನು ನಾಫೆಡ್‌ವತಿಯಿಂದ ನೇರವಾಗಿ ರೈತರಿಂದ ಖರೀದಿಸುವುದು.

2016–17ನೇ ಸಾಲಿನಲ್ಲಿ ಬಫರ್ಸ್ಟಾಕ್ ಯೋಜನೆಯಡಿಯಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಗೆ ಕೇಂದ್ರ ಸರಕಾರ ನಿಗದಿಪಡಿಸಿದ ಬೆಂಬಲ ಬೆಲೆ ಹಾಗೂ ಬೋನಸ್ಸನ್ನೊಳಗೊಂಡಂತೆ ಪ್ರತಿ ಕ್ವಿಂಟಾಲಿಗೆ ರೂ. 5050/– ರಂತೆ ರೈತರಿಂದ ಖರೀದಿಸಲಾದ ತೊಗರಿಗೆ ರಾಜ್ಯ ಸರಕಾರದ ಪ್ರೋತ್ಸಾಹ ಧನ ಪ್ರತಿ ಕ್ವಿಂಟಾಲಿಗೆ ರೂ. 450/– ರಂತೆ ಸೇರಿಸಿ ಒಟ್ಟು ರೂ. 5500/– ಪ್ರಕಾರ ಸರಕಾರ ನೇರವಾಗಿ ರೈತರಿಂದ ಖರೀದಿಸಲು ಅನುಮತಿ ನೀಡಿರುತ್ತಾರೆ. ಅದರ ಅಂಗವಾಗಿ ನಾಫೆಡ್ ವತಿಯಿಂದ ತೊಗರಿ ಅಭಿವೃದ್ಧಿ ಮಂಡಳಿಯು ಸುಮಾರು 3,68,251 ಕ್ವಿಂಟಾಲ್ ತೊಗರಿಯನ್ನು ಪ್ರಸ್ತುತ ಸಾಲಿನಲ್ಲಿ ಖರೀದಿಸಿ, ರೂ. **2,02,53,80,500–00** ಗಳನ್ನು ರೈತರಿಗೆ ಆರ್.ಟಿ.ಜಿ.ಎಸ್. ಮೂಲಕ ಪಾವತಿ ಮಾಡಲು ಕ್ರಮಕೈಗೊಳ್ಳಲಾಗಿದೆ.

2016–17 ನಾಫೆಡ್ ಸಂಸ್ಥೆ ವತಿಯಿಂದ ಬಫರ್ ಸ್ಟಾಕ್/ಕಖಈ ಯೋಜನೆಯಡಿ ಕಲಬುರಗಿ ಜಿಲ್ಲೆಯಲ್ಲಿ 27 ತೊಗರಿ ಖರೀದಿ ಕೇಂದ್ರಗಳನ್ನು ತೆಗೆಯಲಾಗಿದ್ದು, ಸರಕಾರೇತರ ಸಂಸ್ಥೆಗಳು ಮತ್ತು ಸಹಕಾರ ಪತ್ತಿನ ಸಹಕಾರ ಸಂಘಗಳ ಮೂಲಕ ರೈತರಿಂದ ನೇರವಾಗಿ ತೊಗರಿಯನ್ನು ಖರೀದಿಸಿ, ನಾಫೆಡ್ ಸಂಸ್ಥೆಯವರು ಸೂಚಿಸಿದ ಕೇಂದ್ರ/ ರಾಜ್ಯ ಉಗ್ರಾಣಗಳಿಗೆ ಜಮಾ ಮಾಡಲಾಗಿದೆ. ಇದರಿಂದಾಗಿ ರೂ. 0.75% ರಂತೆ ಒಟ್ಟು ರೂ. 1,27,73,707/– ಕಮಿಷನ್ ರೂಪದಲ್ಲಿ ತೊಗರಿ ಅಭಿವೃದ್ಧಿ ಮಂಡಳಿಗೆ ವರಮಾನ ಬಂದಿರುತ್ತದೆ.

ಅದರಲ್ಲಿ ರೂ. 0.324% ರಂತೆ ಪ್ರತಿಯೊಂದು ಸಹಕಾರ ಸಂಘಗಳಿಗೆ ಕಮಿಷನ್ ರೂಪದಲ್ಲಿ ಹಣ ಸಂದಾಯ ಮಾಡಲಾಗಿದೆ.

ಸದರಿ ಸಾಲಿನ ತೊಗರಿ ಖರೀದಿ ಪ್ರಕ್ರಿಯೆಯು ಅತ್ಯಂತ ಪ್ರಮಾಣಿಕತೆ, ದಕ್ಷತೆಯಿಂದ ಯಶಸ್ವಿಯಾಗಿ ಕಾರ್ಯಗತಗೊಳಿಸಲಾಗಿದೆ.

2017–18ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಪಿ.ಎಸ್.ಎಸ್. ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಖರೀದಿಯ ವಿವರ:

2017–18ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಕೇಂದ್ರ ಸರಕಾರ ಘೋಷಿಸಿರುವ ಎಫ್.ಎ.ಕ್ಯೂ ಗುಣಮಟ್ಟದ ತೊಗರಿ ಉತ್ಪನ್ನವನ್ನು ಕೇಂದ್ರ ಸರಕಾರದ ಬೆಂಬಲ ಬೆಲೆ ಪ್ರತಿ ಕ್ವಿಂಟಾಲ್‌ಗೆ ರೂ. 5450/– ರಂತೆ ರಾಜ್ಯ ಸರಕಾರದ ಪ್ರೋತ್ಸಾಹ ಧನ ಪ್ರತಿ ಕ್ವಿಂಟಾಲ್‌ಗೆ ರೂ. 550/– ಸೇರಿದಂತೆ, ಒಟ್ಟು ಪ್ರತಿ ಕ್ವಿಂಟಾಲ್‌ಗೆ ರೂ.6000/– ರಂತೆ ಮಾರ್ಕೆಫೆಡ್ ಸಂಸ್ಥೆಯೊಂದಿಗೆ ತೊಗರಿ ಅಭಿವೃದ್ಧಿ ಮಂಡಳಿಯು ಅಗತ್ಯವಿರುವಲ್ಲಿ ಖರೀದಿ ಏಜನ್ಸಿಯಾಗಿ ಕಾರ್ಯನಿರ್ವಹಿಸಲು ಕರ್ನಾಟಕ ಸರಕಾರ ತನ್ನ ಆದೇಶ ಸಂಖ್ಯೆ ಸಇ 634 ಎಂಆರ್‌ಇ 2017 ಬೆಂಗಳೂರು, ದಿನಾಂಕ 21–12–2017 ಆದೇಶಿಸಿರುತ್ತಾರೆ. ಈ ನಿಟ್ಟಿನಲ್ಲಿ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿ. ಕಲಬುರಗಿ ಸಂಸ್ಥೆಯು ಕೂಡಲೇ ಕಾರ್ಯಪ್ರವುತ್ತರಾಗಿ, ಜಿಲ್ಲಾಧಿಕಾರಿ ಹಾಗೂ ಜಿಲ್ಲಾಟಾಸ್ಕಫೋರ್ಸ್ ಸಮಿತಿ ಅಧ್ಯಕ್ಷರು ಕಲಬುರಗಿ ಇವರು ಸೂಚಿಸಿರುವ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 24 ತೊಗರಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ಸಹಕಾರ ಸಂಘಗಳ ಮೂಲಕ ತೊಗರಿ ಖರೀದಿ ಪ್ರಕ್ರೀಯೆಯನ್ನು ಪ್ರಾರಂಭಿಸಲು ಆದೇಶಿಸಿರುತ್ತಾರೆ. ಜಿಲ್ಲಾಧಿಕಾರಿಗಳ ಸೂಚನೆ ಮತ್ತು ಮಾರ್ಗದರ್ಶನದ ಅನುಸಾರ ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 24 ತೊಗರಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ಸಹಕಾರ ಸಂಘಗಳ ಮೂಲಕ ನೇರವಾಗಿ ರೈತರಿಂದ ತೊಗರಿ ಖರೀದಿಸಲು ನೊಂದಣಿ ಕಾರ್ಯವನ್ನು ದಿನಾಂಕ 1–1–2018 ರಿಂದ ದಿನಾಂಕ 14–01–2018ರ ವರೆಗೆ ಮಾಡಿಕೊಳ್ಳಲಾಗಿದ್ದು, ಅದರಂತೆ ಖರೀದಿ ಪ್ರಕ್ರೀಯೆಯು 15–01–2018 ರಿಂದ ಪ್ರಾರಂಭಿಸಲಾಗಿರುತ್ತದೆ. ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 246895.50 ಕ್ವಿಂಟಾಲ್ ತೊಗರಿಯನ್ನು ಖರೀದಿಸಿ, ರೂ. **148,13,73,000**/– ರೈತರಿಗೆ ಆನ್‌ಲೈನ್ ಮೂಲಕ ಪಾವತಿ ಮಾಡಲಾಗಿರುತ್ತದೆ.

ಮುಂದುವರೆದು, ತೊಗರಿ ಅಭಿವೃದ್ಧಿ ಮಂಡಳಿಯ ವತಿಯಿಂದ ಯಾದಗಿರಿ ಜಿಲ್ಲೆಯಲ್ಲಿಯೂ ಸಹ 7 ತೊಗರಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ಅಲ್ಲಿಯೂ ಸಹ ತೊಗರಿ ಖರೀದಿಸಲು ನೊಂದಣಿ ಕಾರ್ಯವನ್ನು ದಿನಾಂಕ: 1–1–2018 ರಿಂದ ದಿನಾಂಕ: 14–01–2018ರ ವರೆಗೆ ಮಾಡಿಕೊಳ್ಳಲಾಗಿದ್ದು, ಅದರಂತೆ ಖರೀದಿ ಪ್ರಕ್ರೀಯೆಯು 15–01–2018 ರಿಂದ ಪ್ರಾರಂಭಿಸಲಾಗಿರುತ್ತದೆ. ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 42207 ಕ್ವಿಂಟಾಲ್ ತೊಗರಿಯನ್ನು ಖರೀದಿಸಿ, ರೂ. **25,32,42,000**/– ರೈತರಿಗೆ ಆನ್‌ಲೈನ್ ಮೂಲಕ ಪಾವತಿ ಮಾಡಲಾಗಿರುತ್ತದೆ.

2017–18ನೇ ಸಾಲಿನಲ್ಲಿ ತೊಗರಿ ಅಭಿವೃದ್ಧಿ ಮಂಡಳಿಯ ವತಿಯಿಂದ ನಾಫೆಡ್ ಸಂಸ್ಥೆಯ ಪರವಾಗಿ ತೊಗರಿ ಖರೀದಿಯ ಪ್ರಕ್ರೀಯೆಯು ಅತ್ಯಂತ ಪ್ರಮಾಣಿಕತೆ ಮತ್ತು ದಕ್ಷತೆಯಿಂದ ಯಶಸ್ವಿಯಾಗಿ ಆನ್‌ಲೈನ್ ಮೂಲಕ ರೈತರಿಗೆ ಹಣ ಸಂದಾಯ ಮಾಡಲಾಗಿರುತ್ತದೆ.

ಸರಕಾರದ ನಡವಳಿಗಳು ದಿನಾಂಕ: 28–11–2017ರ ಅನುಸಾರ ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ ನಿ. ಕಲಬುರಗಿ ಸಂಸ್ಥೆಯ ಹೆಸರನ್ನು "ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ" ಎಂದು ಬದಲಾವಣೆ ಮಾಡಲು ಅನುಮೋದನೆ ನೀಡಿ ಅನುಷ್ಠಾನಗೊಳಿಸಲು ಸೂಚಿಸಲಾಗಿತ್ತು. ಅದರಂತೆ ದಿನಾಂಕ: 11–09–2018 ರಂದು ನಡೆದ 15ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸಿದ ಪ್ರಕಾರ ನಿಗಮದಲ್ಲಿಯ ಎ.ಓ.ಎ ಮತ್ತು ಎಂ.ಓ.ಎ ಗಳಿಗೆ ಸೂಕ್ತ ತಿದ್ದುಪಡಿ ಮಾಡಿಕೊಂಡು ರಜಿಸ್ಟ್ರಾರ್ ಆಫ್ ಕಂಪನಿ ಇವರಿಗೆ ಹೆಸರು ಬದಲಾವಣೆ ಮಾಡಲು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿ, ಕ್ರಮವಹಿಸುವಂತೆ ನಿರ್ಣಯಿಸಲಾಗಿತ್ತು. ಅದರಂತೆ ಆರ್.ಓ.ಸಿ ಇವರಿಗೆ ಮನವಿ ಮಾಡಲಾಗಿ, ಅವರು ತಮ್ಮ ಕಚೇರಿಯ ಇ-ಮೇಲ್ mcaadm@mca.gov.in ದಿನಾಂಕ: 14–11–2018ರ ಮೂಲಕ "ಕರ್ನಾಟಕ ರಾಜ್ಯ (ಪಲ್ಸೆಸ್) ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿಯಮಿತ" ಎಂದು ಮರುನಾಮಕರಣ ಮಾಡಿ ದಿನಾಂಕ: 14–11–2018 ರಿಂದ ಜಾರಿಗೆ ಬರುವಂತೆ ಮಂಜೂರಾತಿ ನೀಡಿ ಪ್ರಮಾಣ ಪತ್ರ ನೀಡಿರುತ್ತಾರೆ.

2018–19ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಪಿ.ಎಸ್.ಎಸ್ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಖರೀದಿಯ ವಿವರ:

2018–19ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕ್ರಮವಾಗಿ 22 ಮತ್ತು 3 ತೊಗರಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ತೊಗರಿ ಖರೀದಿಸಲು ನೊಂದಣಿ ಕಾರ್ಯ ಕೈಕೊಳ್ಳಲಾಗಿರುತ್ತದೆ. ಅದರಂತೆ ತೊಗರಿ ಖರೀದಿ ಪ್ರಕ್ರಿಯೆಯು ದಿನಾಂಕ : 16–01–2019 ರಿಂದ ಪ್ರಾರಂಭ ಮಾಡಿ ದಿನಾಂಕ : 10–04–2019 ರವರೆಗೆ ತೊಗರಿ ಖರೀದಿ ಪ್ರಕ್ರಿಯೆ ನಾಫೆಡ್ ಸಂಸ್ಥೆಯ ಆದೇಶ ಮೇರೆಗೆ ಮುಕ್ತಾಯಗೊಳಿಸಲಾಗಿರುತ್ತದೆ. ಕಲಬುರಗಿ ಜಿಲ್ಲೆಯಲ್ಲಿ 18,788 ಮತ್ತು ಯಾದಗಿರಿ ಜಿಲ್ಲೆಯಲ್ಲಿ 1,298 ಕ್ರಮವಾಗಿ ರೈತರು ನೊಂದಣಿ ಮಾಡಿಸಿ, ಕಲಬುರಗಿ ಜಿಲ್ಲೆಯಿಂದ 1,05,855–00 ಕ್ವಿಂಟಾಲ್ ಮತ್ತು ಯಾದಗಿರಿ ಜಿಲ್ಲೆಯಿಂದ 5,843.50 ಕ್ವಿಂಟಾಲ್ ತೊಗರಿಯನ್ನು ನೇರವಾಗಿ ರೈತರಿಂದ ಖರೀದಿಸಿ, ಒಟ್ಟು 1,11,698.50 ಕ್ವಿಂಟಾಲ್ ತೊಗರಿಯ ಬಾಬತ್ತಿನ ಹಣ ರೂ.68,13,60,850–00 ಪಾವತಿ ಮಾಡಲಾಗಿರುತ್ತದೆ. ಖರೀದಿಸಿದ ತೊಗರಿ ಉತ್ಪನ್ನವನ್ನು ನಾಫೆಡ್ ಸಂಸ್ಥೆ ಮತ್ತು ಭಾರತೀಯ ಆಹಾರ ನಿಗಮ ಸಂಸ್ಥೆಯು ನಿಗದಿ ಮಾಡಿದ ಕೇಂದ್ರ/ರಾಜ್ಯ ಉಗ್ರಾಣಗಳಿಗೆ ಜಮಾ ಮಾಡಲಾಗಿರುತ್ತದೆ.

ಕೇಂದ್ರ ಸರ್ಕಾರದ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೂ.5675/– ಮತ್ತು ರಾಜ್ಯ ಸರ್ಕಾರದ ಪ್ರೋತ್ಸಾಹ ಧನ ರೂ. 425/– ರಂತೆ ಒಟ್ಟು ಕ್ವಿಂಟಾಲ್‌ಗೆ ರೂ. 6,100/– ರನ್ನು ರೈತರಿಗೆ ಆಧಾರ ಲಿಂಕ್ಡ್, ಆಧಾರದ ಮೇಲೆ ಆನ್‌ಲೈನ್ (NeML Portal)ಮೂಲಕ ಪಾವತಿ ಮಾಡಲಾಗಿದೆ.

2019–20ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರಕಾರದ ಬೆಂಬಲ ಬೆಲೆ ಯೋಜನೆಯಡಿ ಪಿ.ಎಸ್.ಎಸ್/ಪಿ.ಎಸ್.ಎಫ್. ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಖರೀದಿಯ ವಿವರ:

2019–20ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ವತಿಯಿಂದ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಕ್ರಮವಾಗಿ 39 ಮತ್ತು 3 ತೊಗರಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಿ, ತೊಗರಿ ಖರೀದಿಸಲು ನೋಂದಣಿ ಕಾರ್ಯ ಕೈಕೊಳ್ಳಲಾಗಿರುತ್ತದೆ. ಅದರಂತೆ ರೈತರ ನೋಂದಣಿ ಮತ್ತು ತೊಗರಿ ಖರೀದಿ ಪ್ರಕ್ರಿಯೆಯು ಜನವರಿ 2020ರ ಅಂತ್ಯದ ವೇಳೆಗೆ ಪ್ರಾರಂಭ ಮಾಡಲಾಗಿದ್ದು, ನೋಂದಣಿ ಕಾರ್ಯ ಸರ್ಕಾರದ ಆದೇಶದಂತೆ 25–02–2020ರವರೆಗೆ ಮುಕ್ತಾಯ ಮಾಡಲಾಗಿರುತ್ತದೆ. ಮುಂದೂವರೆದು ತೊಗರಿ ಖರೀದಿ ಪ್ರಕ್ರಿಯೆಯು ಇಂದಿನ ವರೆಗೂ ಮುಂದುವರೆದಿರುತ್ತದೆ. ಕಲಬುರಗಿ ಜಿಲ್ಲೆಯಲ್ಲಿ 29504 ಮತ್ತು ಯಾದಗಿರಿ ಜಿಲ್ಲೆಯಲ್ಲಿ 874, ಒಟ್ಟು 30378 ಜನ ರೈತರ ನೋಂದಣಿ ಮಾಡಲಾಗಿರುತ್ತದೆ. ಅದಕ್ಕನುಗುಣವಾಗಿ ಈವರೆಗೆ ಕಲಬುರಗಿ ಜಿಲ್ಲೆಯಿಂದ ಕ್ರಮವಾಗಿ 273226 ಕ್ವಿಂಟಾಲ್ ಮತ್ತು ಯಾದಗಿರಿ ಜಿಲ್ಲೆಯಿಂದ 7788.50 ಕ್ವಿಂಟಾಲ್ ತೊಗರಿ ಸೇರಿಸಿ ಒಟ್ಟು 281014.50 ಕ್ವಿಂಟಾಲ್ ತೊಗರಿಯನ್ನು ಖರೀದಿಸಿ ರೈತರಿಗೆ ಆಧಾರ ಲಿಂಕ್ಡ್, DBT ಆಧಾರದ ಮೂಲಕ ಪಾವತಿ ಹಣ ಮಾಡಲಾಗುತ್ತಿದೆ. ತೊಗರಿ ಖರೀದಿ ಪ್ರಕ್ರಿಯೆಯು ಏಪ್ರಿಲ್ 2020 ನಂತರವೂ ಸರ್ಕಾರದ ಆದೇಶ್ವನಯ ಮುಂದುವರೆದಿರುತ್ತದೆ.

ಇತರೆ ಚಟುವಟಿಕೆಗಳು :

2005–06 ರಲ್ಲಿ (27), 2006–07 ರಲ್ಲಿ (13), 2007–08 ರಲ್ಲಿ (41) ಮತ್ತು 2008–09 ರಲ್ಲಿ 13000 ಹೆ. ಭೂಮಿಯಲ್ಲಿ ಪ್ರಾತ್ಯಕ್ಷಿತೆ - ಹೀಗೆ ತರಬೇತಿ ಕಾರ್ಯಕ್ರಮಗಳನ್ನು ಜರುಗಿಸಲಾಗಿರುತ್ತದೆ.

2003–04ನೇ ಸಾಲಿನಲ್ಲಿ ಸಂಶೋಧನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ಕೃಷಿ ವಿಶ್ವವಿದ್ಯಾಲಯದ ತಜ್ಞರಿಂದ ಪ್ರಾರಂಭಿಸಲಾಗಿರುತ್ತದೆ. ಆದರೆ, ತಾಂತ್ರಿಕ ಸಿಬ್ಬಂದಿವರ್ಗದ ಕೊರತೆ ಮತ್ತು ದುರ್ಬಲ ಆರ್ಥಿಕ ಪರಿಸ್ಥಿತಿ ಮಂಡಳಿಯಲ್ಲಿ ಪ್ರಾರಂಭದಿಂದಲೂ ಇದ್ದುದರಿಂದ ಮಾರುಕಟ್ಟೆ ಮಧ್ಯ ಪ್ರವೇಶ ಕಾರ್ಯಕ್ರಮವನ್ನು ಹೊರತುಪಡಿಸಿ ಉಳಿದ ಚಟುವಟಿಕೆಗಳನ್ನು ಸ್ಥಗಿತಗೊಳಿಸಲಾಗಿರುತ್ತದೆ.

ಮಂಡಳಿಯಿಂದ ರೈತರಿಗಾದ ಪ್ರಯೋಜನ :

1. ತೊಗರಿ ಅಭಿವೃದ್ಧಿ ಮಂಡಳಿಯು ಸ್ಥಾಪನೆ ಆದ ನಂತರ ಮಂಡಳಿಯ ಮುಖ್ಯ ಧ್ಯೇಯಗಳಲ್ಲೊಂದಾದ ಮಾರುಕಟ್ಟೆ ಮಧ್ಯ ಪ್ರವೇಶ ಕಾರ್ಯಕ್ರಮದಿಂದಾಗಿ ಮಾರುಕಟ್ಟೆಯಲ್ಲಿ ಬೆಲೆಯನ್ನು ಹೆಚ್ಚಿಸಿ ಸ್ಥಿರೀಕರಣ ಮಾಡಿರುವುದರಿಂದ ರೈತರು ಬೆಳೆದ ತೊಗರಿಯಿಂದ ಹೆಚ್ಚಿನ ಲಾಭ ಪಡೆಯುವಂತಾಗಿರುತ್ತದೆ.

2. ಮಂಡಳಿಯ ವತಿಯಿಂದ ಜರುಗಿಸಲಾಗಿರುವ ತರಬೇತಿ ಕಾರ್ಯಕ್ರಮಗಳಿಂದ ರೈತರಿಗೆ ಹೊಸ ಹೊಸ ತಾಂತ್ರಿಕತೆಗಳ ಪರಿಚಯವಾಗಿರುತ್ತದೆ.

3 . 2008-09ನೇ ಸಾಲಿನಲ್ಲಿ ಆಯ್ದ ಹಳ್ಳಿಗಳಲ್ಲಿ ಜರುಗಿಸಲಾದ ಪ್ರಾತ್ಯಕ್ಷಿತೆಗಳಿಂದ ಸದರಿ ಹಳ್ಳಿಗಳಲ್ಲಿ ಎಕರೆಗೆ 2-3 ಕ್ವಿಂಟಾಲ್ ಇಳುವರಿ ಬಂದಿರುವುದು ಕಂಡು ಬಂದಿರುತ್ತದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ರೈತರು ಹೆಚ್ಚಿನ ಲಾಭವನ್ನು ಪಡೆಯುವಂತಾಗಿದೆ.

4. ಪ್ರಚಾರ ಕಾರ್ಯಕ್ರಮಗಳಡಿ ಮಂಡಳಿಯ ವತಿಯಿಂದ ಮುದ್ರಿಸಿ ಒದಗಿಸಲಾದ ಪುಸ್ತಕ, ಚಾರ್ಟ್‌ಗಳು ಮತ್ತು ಬಿತ್ತಿಪತ್ರಗಳ ಮುಖಾಂತರ ರೈತರಿಗೆ - ತೊಗರಿ ಬೆಳೆಯಲ್ಲಿ ಆಧುನಿಕ ಬೇಸಾಯ ಕ್ರಮ, ತೊಗರಿಯಲ್ಲಿ ಪ್ರಮುಖ ಕೀಟಗಳು ಮತ್ತು ಅವುಗಳ ಹತೋಟಿ ಕ್ರಮಗಳು, ತೊಗರಿಯಲ್ಲಿ ಪ್ರಮುಖ ರೋಗಗಳು ಮತ್ತು ಅವುಗಳ ಹತೋಟಿ ಕ್ರಮಗಳು, ತೊಗರಿಯ ಬೀಜೋತ್ಪಾದನಾ ಕ್ರಮಗಳು ಹಾಗೂ ತೊಗರಿಯಲ್ಲಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪಾದನೆ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯುವಂತಾಗಿರುತ್ತದೆ.

5. 2016-17ನೇ ಸಾಲಿನಲ್ಲಿ ರೈತರಿಗೆ ಕೋಡಬೇಕಾದ ಹಣವನ್ನು ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಖಖಿಉಖಮೂಲಕ ಜಮಾ ಮಾಡಲಾಗಿದೆ. ಅದರಂತೆ 2017-18ನೇ ಸಾಲಿನಲ್ಲಿ ರೈತರಿಗೆ ನೇರವಾಗಿ ಆನ್‌ಲೈನ್(NeML Portal)ಮೂಲಕ ಹಾಗೂ 2018-19ನೇ ಸಾಲಿನಲ್ಲಿ Aadhar Based NeML Portal ಮೂಲಕ ರೈತರಿಗೆ ನೇರವಾಗಿ ಪಾವತಿ ಮಾಡಲಾಗಿರುತ್ತದೆ. 2019-20ನೇ ಸಾಲಿನಲ್ಲಿ ಆಧಾರ ಲಿಂಕ್ಡ್, DBT ಆಧಾರದ ಮೂಲಕ ಪಾವತಿ ಮಾಡಲಾಗುತ್ತಿದೆ. ಈ ಒಂದು ವ್ಯವಸ್ಥೆ ಅಳವಡಿಸಿಕೊಂಡಿರುವುದರಿಂದ ಮಧ್ಯವರ್ತಿಗಳಿಂದ ರೈತರಿಗೆ ಆಗಬಹುದಾದ ಶೋಷಣೆಯನ್ನು ತಪ್ಪಿಸಿದಂತ್ತಾಗಿರುತ್ತದೆ.

ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ನಿ. ಕಲಬುರಗಿ ಕಾರ್ಯಾಲಯಕ್ಕೆ ಸಂಬಂಧಿಸಿದ

2020–21ನೇ ಸಾಲಿನ ಅಧಿಕಾರಿ/ ಸಿಬ್ಬಂದಿ ವೇತನ ಮತ್ತು ಕಚೇರಿ ವೆಚ್ಚದ

ಅನುದಾನದ ಬೇಡಿಕೆಯ ಪಟ್ಟಿ

ಕ್ರ.ಸಂ.	ವಿವರ	1 ವರ್ಷಕ್ಕೆ	ಮೊತ್ತ
1)	ಅಧಿಕಾರಿಯ ವೇತನ (ವ್ಯವಸ್ಥಾಪಕ ನಿರ್ದೇಶಕರು)	1,33,236x12	15,98,832-00
2)	ಸಿಬ್ಬಂದಿ ವೇತನ	27,322x12	3,27,864-00
3)	ಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ವೇತನ	99,000x12	11,88,000-00
4)	ಅಧ್ಯಕ್ಷರ ವೇತನ & ಇತರೇ ಭತ್ಯೆ	55000x12	6,60,000-00
5)	ಅಧ್ಯಕ್ಷರ ಸಿಬ್ಬಂದಿ ವೇತನ	40,000x12	4,80,000-00
6)	ಅಧ್ಯಕ್ಷರ ವಾಹನ ಇಂಧನ ಬಾಬತ್ತು		3,00,000-00
7)	ಅಧ್ಯಕ್ಷರ ವಾಹನ ನಿರ್ವಹಣಾ ವೆಚ್ಚ		2,00,000-00
8)	ವ್ಯವಸ್ಥಾಪಕ ನಿರ್ದೇಶಕರ ಕಾರ್ ನಿರ್ವಹಣಾ ವೆಚ್ಚ		3,00,000-00
9)	ಕಚೇರಿ ವೆಚ್ಚ		2,00,000-00
10)	ಕಚೇರಿ ಕಟ್ಟಡದ ಬಾಡಿಗೆ		3,00,000-00
11)	ಕಚೇರಿಯ ದೂರವಾಣಿ ವೆಚ್ಚ		1,00,000-00
12)	ಅಧ್ಯಕ್ಷರ ಪ್ರವಾಸ ವೆಚ್ಚ		2,00,000-00
13)	ವ್ಯವಸ್ಥಾಪಕ ನಿರ್ದೇಶಕರ ಪ್ರವಾಸ ವೆಚ್ಚ		2,00,000-00
14)	ನಿರ್ದೇಶಕ ಮಂಡಳಿಯ ಸಭೆಗೆ ತಗಲುವ ವೆಚ್ಚ	4 ಸಭೆಗಳು	1,00,000-00
15)	ನಿರ್ದೇಶಕ ಮಂಡಳಿಯ ಸಭೆಗೆ ಹಾಜರಾದ ನಿರ್ದೇಶಕರಿಗೆ ಕೊಡಮಾಡುವ ಸಭಾ ಭತ್ಯೆ ಮತ್ತು ವಾಸ್ತವ್ಯ & ಪ್ರಯಾಣ ಭತ್ಯೆ	4 ಸಭೆಗಳು	2,00,000-00
16)	ಲೆಕ್ಕಪರಿಶೋಧÀಕರ ಫೀಸು		2,50,000-00
17)	ಕಂಪನಿ ಕಾರ್ಯದರ್ಶಿ ಅವರ ವೇತನ		4,00,000-00
	ಒಟ್ಟು ರೂ.		**70,04,696-00**

(ರೂಪಾಯಿ ಏಪ್ಪತ್ತು ಲಕ್ಷ ನಾಲ್ಕು ಸಾವಿರದ ಆರು ನೂರಾ ತೊಂಬತ್ತಾರು ಮಾತ್ರ)

ಕರ್ನಾಟಕ ರಾಜ್ಯ ಆಗ್ರೋ ಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್

ಬಳ್ಳಾರಿ ರಸ್ತೆ, ಹೆಬ್ಬಾಳ ಬೆಂಗಳೂರು-560024

ಕರ್ನಾಟಕ ಸ್ಟೇಟ್ ಆಗ್ರೋಕಾರನ್ ಪ್ರಾಡಕ್ಟ್ಸ್‌ಲಿಮಿಟೆಡ್ ಸಂಸ್ಥೆಯು ದಿನಾಂಕ 06.04.1973 ರಂದು ಕೃಷಿ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಕಂಪನಿಗಳ ಕಾಯ್ದೆ 1956ರ ಅಡಿಯಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಯಾಗಿ ಪ್ರಾರಂಭವಾಯಿತು. ಇದರ ನೊಂದಾಯಿತ ಕಛೇರಿಯು ಬಳ್ಳಾರಿ ರಸ್ತೆ ಹೆಬ್ಬಾಳ, ಬೆಂಗಳೂರು-560 024 ಇಲ್ಲಿ ಇರುತ್ತದೆ. ಸಂಸ್ಥೆಯು ಗೋವಿನ ಜೋಳ ಉತ್ಪನ್ನಗಳು, ಪಶು ಆಹಾರ ತಯಾರಿಕೆಯ ಘಟಕಗಳನ್ನು ಹೆಬ್ಬಾಳದಲ್ಲಿ ಹಾಗೂ ಶಕ್ತಿಯುತ ಆಹಾರ ತಯಾರಿಕಾ ಘಟಕಗಳನ್ನು ಮೈಸೂರು, ಬೆಳಗಾವಿ, ಚಿತ್ರದುರ್ಗ, ರಾಯಚೂರು ಮತ್ತು ದೊಡ್ಡಬಳ್ಳಾಪುರಗಳಲ್ಲಿ ಹೊಂದಿರುತ್ತದೆ. ಸದರಿ ಕಂಪನಿಯು 1989ರಿಂದ ಸ್ವತಂತ್ರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು.

ಷೇರು ಬಂಡವಾಳ: (ರೂ. ಲಕ್ಷಗಳಲ್ಲಿ)

ಅಧಿಕೃತ ಷೇರು ಬಂಡವಾಳ	400.00
ಪೇಡ್ ಅಪ್ ಷೇರು ಬಂಡವಾಳ	273.77
ಅ) ಕರ್ನಾಟಕ ಸರ್ಕಾರ	223.37
ಆ) ಪೇಡ್ ಅಪ್ ಸೇರು ಬಂಡವಾಳ (ಕೆ.ಎ.ಐ.ಸಿ)	50.00
ಎ) ಖಾಸಗಿ ಷೇರು ಬಂಡವಾಳ	ಇಲ್ಲ

ಸಂಸ್ಥೆಯ ಚಟುವಟಿಕೆಗಳು :

ಸಂಸ್ಥೆಯು ಮೂರು ವಿಭಾಗಗಳನ್ನು ಹೊಂದಿದೆ.

ಅ) ಮುಸುಕಿನ ಜೋಳ ಉತ್ಪನ್ನಗಳನ್ನು ಉತ್ಪಾದಿಸುವ ವಿಭಾಗ

ಆ) ಪಶು ಆಹಾರ ತಯಾರಿಕಾ ವಿಭಾಗ

ಇ) ಶಕ್ತಿಯುಕ್ತ ಆಹಾರ ತಯಾರಿಕಾ ವಿಭಾಗ

ಸಂಸ್ಥೆಯ ಉತ್ಪಾದನಾ ಚಟುವಟಿಕೆಗಳು 2007 ನೇ ಇಸವಿಯಿಂದ ಸ್ಥಗಿತಗೊಂಡಿದ್ದರ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯನ್ನು ಸರ್ಕಾರಿ ಆದೇಶ ಸಂಖ್ಯೆ ಕೃತೋಇ/04/ಕೃಇಮಂ/2010, ದಿನಾಂಕ 22.02.2012 ರಂತೆ ಸಮಾಪನಗೊಳಿಸಲು ಆದೇಶಿಸಿದ್ದರಿಂದ ಈಗಾಗಲೇ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಎಲ್ಲಾ ನೌಕರರ ಪೈಕಿ ನಿಯೋಜನೆ ಮೇಲಿರುವ ನೌಕರರನ್ನು ಹೊರತುಪಡಿಸಿ ದಿನಾಂಕ 31.03.2012 ಕ್ಕೆ ಅನ್ವಯವಾಗುವಂತೆ ಸ್ವಯಂ ನಿವೃತ್ತಿ ಯೋಜನೆಯಡಿ ಸೇವೆಯಿಂದ ಬಿಡುಗಡೆಗೊಳಿಸಲಾಗಿದ್ದು ಸಮಾಪನ ಪ್ರಕ್ರಿಯೆಗಳು ಸರ್ಕಾರದ ಮಟ್ಟದಲ್ಲಿ ಪ್ರಗತಿಯಲ್ಲಿರುತ್ತದೆ.

ದಿ ಮೈಸೂರು ಟೊಬ್ಯಾಕೊ ಕಂಪನಿ ಕುರಿತು ಸಂಕ್ಷಿಪ್ತ ವರದಿ

ಮೈಸೂರು ಟೊಬ್ಯಾಕೊ ಕಂಪನಿಯು ಸರ್ಕಾರದ ಒಂದು ಉದ್ಯಮವಾಗಿದ್ದು, ಕೃಷಿ ಮಂತ್ರಾಲಯದ ಅಧೀನದಲ್ಲಿ ಬರುತ್ತದೆ. ಇದು 1937 ರಲ್ಲಿ ಪ್ರಾರಂಭವಾಯಿತು.

1980 ರಲ್ಲಿ ಕೇಂದ್ರ ಸರ್ಕಾರದ ವತಿಯಿಂದ ತಂಬಾಕು ಮಂಡಳಿಯು ಸ್ಥಾಪನೆಯಾಯಿತು ಮತ್ತು ಕರ್ನಾಟಕದಲ್ಲಿ ಅದರ ಕಾರ್ಯಗಳು 1983 ರಲ್ಲಿ ಪ್ರಾರಂಭ ಮಾಡಲಾಯಿತು. ಕಂಪನಿಯ ಎಲ್ಲಾ ಚಟುವಟಿಕೆಗಳು ತಂಬಾಕು ಮಂಡಳಿಗೆ ವರ್ಗಾವಣೆ ಆಗಿರುತ್ತದೆ. ಆದುದರಿಂದ ಕಂಪನಿಯು ನಷ್ಟ ಅನುಭವಿಸಿತು. ಸರ್ಕಾರದ ಆದೇಶದ ಪ್ರಕಾರ 1984 ರಲ್ಲಿ ಕಂಪನಿಯ ವ್ಯವಹಾರಗಳನ್ನು ನಿಲ್ಲಿಸಲಾಯಿತು.

ಈ ಕಂಪನಿಯಲ್ಲಿ ಸರ್ಕಾರದ ಬಂಡವಾಳ 95.15% ಹಾಗೂ ಖಾಸಗಿ ಶೇರು 4.85%. ವೈಟ್‌ಫೀಲ್ಡ್‌ನಲ್ಲಿ ಸಂಸ್ಥೆಯು ಗೋದಾಮುಗಳನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಉಗ್ರಾಣ ನಿಗಮಗಳಿಗೆ ಬಾಡಿಗೆಗೆ ಕೊಡಲಾಗಿದೆ ಮತ್ತು ಕೇಂದ್ರ ಕಛೇರಿಯ ಒಂದು ಭಾಗವನ್ನು ಕೆಪೆಕ್‌ಗೆ ಬಾಡಿಗೆಗೆ ಕೊಡಲಾಗಿದೆ.

ಸರ್ಕಾರದ ಕಾರ್ಯದರ್ಶಿರವರು, ಕೃಷಿ ಇಲಾಖೆರವರು ಕಂಪನಿಯ ಅಧ್ಯಕ್ಷರಾಗಿರುತ್ತಾರೆ.

ಕಂಪನಿಯನ್ನು ಸಂಪೂರ್ಣ ಸರ್ಕಾರಿ ಸಂಸ್ಥೆಯನ್ನಾಗಿಸಲು ಸರ್ಕಾರವು ಖಾಸಗಿ ಶೇರುದಾರರು ಹೊಂದಿರುವ ಶೇರುಗಳನ್ನು ರೂ.1.479/- ರಂತೆ ಪ್ರತಿ ಶೇರಿಗೆ ಖರೀದಿಸಿದೆ. ಖಾಸಗಿ ಶೇರುಗಳನ್ನು ಖರೀದಿಸಲು ಸರ್ಕಾರದ ಪರವಾಗಿ ಕೆಪೆಕ್ ಸಂಸ್ಥೆಯನ್ನು ನೇಮಿಸಲಾಗಿತ್ತು. ಈವರೆಗೆ 20,543 ಶೇರುಗಳನ್ನು ಖರೀದಿಸಲಾಗಿದೆ ಹಾಗೂ ದಿನಾಂಕ 16.08.2017 ರಂದು ಸರ್ಕಾರಕ್ಕೆ ವರ್ಗಾವಣೆ ಮಾಡಲಾಗಿದೆ.

ಸರ್ಕಾರವು ಆದೇಶ ಸಂಖ್ಯೆ:ಕೃಇ 146 ವುಇ 2014 ದಿನಾಂಕ 16.01.2015ರಲ್ಲಿ ಕಂಪನಿಯು ಬೆಂಗಳೂರಿನ ರಿಚ್‌ಮಂಡ್ ರಸ್ತೆ ಮತ್ತು ವೈಟ್‌ಫೀಲ್ಡ್‌ನಲ್ಲಿ ಹೊಂದಿರುವ ಆಸ್ತಿಗಳನ್ನು ಉಪಯೋಗಿಸಿಕೊಳ್ಳಲು ಸಾರ್ವಜನಿಕ ಹಿತಾಸಕ್ತಿಯಿಂದ ಕೆಪೆಕ್ ಸಂಸ್ಥೆಗೆ ವರ್ಗಾಯಿಸಲು ಆದೇಶಿಸಿದೆ. ಮೆ|| ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ (ಕೆಎಐಸಿ) ರವರು ಸಂಸ್ಥೆಯಲ್ಲಿ ಹೊಂದಿರುವ 1,10,515 ಶೇರುಗಳನ್ನು ಕೆಪೆಕ್ ಸಂಸ್ಥೆಗೆ ವರ್ಗಾಯಿಸಿದ್ದಾರೆ. ಸಂಸ್ಥೆಯು ಶೇರುಗಳನ್ನು ಡಿ-ಮ್ಯಾಟ್ ಮಾಡಿಸಲು ಕ್ರಮ ಕೈಗೊಳ್ಳುತ್ತಿದೆ ಹಾಗೂ ಪೂರ್ಣಗೊಂಡ ನಂತರ ಮೆ|| ಕೆಎಐಸಿ ಯ ಶೇರುಗಳನ್ನು ಕೆಪೆಕ್ ಸಂಸ್ಥೆಗೆ ವರ್ಗಾಯಿಸಲಾಗುವುದು.

ಆಹಾರ ಕರ್ನಾಟಕ ನಿಗಮ

9.8.1 ಆಹಾರ ಪಾರ್ಕುಗಳ ಪ್ರಸ್ತುತ ಪ್ರಗತಿ:

ಅ) 10ನೇ ಪಂಚವಾರ್ಷಿಕ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದ ಆಹಾರ ಸಂಸ್ಕರಣಾ ಮಂತ್ರಾಲಯವು ಮಾಲೂರು **(**ಕೋಲಾರ ಜಿಲ್ಲೆ**)**, ಹಿರಿಯೂರು **(**ಚಿತ್ರದುರ್ಗ ಜಿಲ್ಲೆ**)**, ಬಾಗಲಕೋಟೆ **(**ಬಾಗಲಕೋಟೆ ಜಿಲ್ಲೆ**)** ಹಾಗೂ ಜೇವರ್ಗಿ **(**ಗುಲ್ಬರ್ಗ ಜಿಲ್ಲೆ**)** ಗಳಲ್ಲಿ ಆಹಾರ ಪಾರ್ಕುಗಳ ಸ್ಥಾಪನೆಗೆ ಅನುಮೋದನೆಯನ್ನು ನೀಡಿರುತ್ತದೆ. ಸದರಿ ಪಾರ್ಕುಗಳ ಸ್ಥಾಪನಾ ಕಾರ್ಯದ ಉಸ್ತುವಾರಿ ಸಂಸ್ಥೆಯಾಗಿ ಆಹಾರ ಕರ್ನಾಟಕ ನಿಯಮಿತವನ್ನು ನೋಡಲ್ ಏಜನ್ಸಿಯಾಗಿ ನೇಮಿಸಲಾಗಿದೆ. ಸದರಿ ಪಾರ್ಕುಗಳ ಪ್ರಸ್ತುತ ಪ್ರಗತಿಯ ಸ್ಥೂಲ ವಿವರ ಕೆಳಕಂಡಂತಿದೆ.

1. ಇನ್ನೋವಾ ಅಗ್ರಿ ಬಯೋ-ಪಾರ್ಕು ನಿಯಮಿತ ಮಾಲೂರು:

ಕೋಲಾರ ಜಿಲ್ಲೆಯ, ಮಾಲೂರು ಕೈಗಾರಿಕಾ ಪ್ರದೇಶದಲ್ಲಿ **87** ಎಕರೆ ವಿಸ್ತೀರ್ಣದಲ್ಲಿ ಆಹಾರ ಪಾರ್ಕನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಈಗಾಗಲೇ ಭೂಮಿ ಅಭಿವೃದ್ಧಿ, ರಸ್ತೆ ಮತ್ತು ಚರಂಡಿ ಕಾರ್ಯ ಪೂರ್ಣಗೊಂಡಿದೆ, ಶೀತಲ ಗೃಹ ಹಾಗೂ ಉಗ್ರಾಣಗಳ ನಿರ್ಮಾಣವೂ ಸಹ ಮುಕ್ತಾಯಗೊಂಡಿದೆ. ಕಂಪನಿಯು ಹಣ್ಣು ಮತ್ತು ತರಕಾರಿ ಶ್ರೇಣಿಗೊಳಿಸುವ, ಧಾನ್ಯ ಸಂಸ್ಕರಿಸುವ ಮತ್ತು ಪ್ಯಾಕೇಜಿಂಗ್ ಯಂತ್ರೋಪಕರಣಗಳನ್ನು ಅಳವಡಿಸಿದೆ. ಇದರ ಜೊತೆಗೆ ಪ್ರಹಾರಾ ವಿಕಿರಣ USFDA. ಘಟಕವನ್ನು ಪೂರ್ಣಗೊಳಿಸಿದ್ದು ಎಲ್ಲಾ ಘಟಕಗಳು ಕಾರ್ಯ ಪ್ರಾರಂಭಿಸಿರುತ್ತವೆ. ಇದುವರೆವಿಗೂ **13** ಆಹಾರ ಸಂಸ್ಕರಣಾ ಘಟಕಗಳಿಗೆ **50.48** ಎಕರೆ ಭೂಮಿ ಹಂಚಿಕೆ/ಕೊಡಲು ತೀರ್ಮಾನ ಮಾಡಿದ್ದು, ಉಳಿದ **3.08** ಎಕರೆ ಭೂಮಿ ಹಂಚಿಕೆಗೆ ಲಭ್ಯವಿರುತ್ತದೆ. ಪ್ರವರ್ತಕರು ದಿನಾಂಕ **19.11.2018** ರಂದು ತಿಳಿಸಿರುವಂತೆ ಒಟ್ಟು ಯೋಜನಾ ವೆಚ್ಚ ರೂ.**2315** ಲಕ್ಷಗಳು. ಸದರಿ ಪಾರ್ಕಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ತಲಾ ರೂ.**400** ಲಕ್ಷಗಳ ಅನುದಾನ **(**ಒಟ್ಟು ರೂ.**800** ಲಕ್ಷಗಳು**)** ನೀಡಲಾಗಿದೆ. ಮುಂದುವರೆದು, ಸದರಿ ಸಭೆಯಲ್ಲಿ ಕಂಪನಿಯ ಪ್ರತಿನಿಧಿಯು, ಪಾರ್ಕಿನಲ್ಲಿ ತೀವ್ರವಾದ ನೀರಿನ ಸಮಸ್ಯೆಯಿದೆಯೆಂದು ತಿಳಿಸುತ್ತಾ ಸದರಿ ಸಮಸ್ಯೆಯ ಪರಿಹಾರಕ್ಕಾಗಿ ಮನವಿ ಮಾಡಿದರು,

2. ಗ್ರೀನ್‌ಪುಡ್ ಪಾರ್ಕ್, ಬಾಗಲಕೋಟೆ:

ಬಾಗಲಕೋಟೆ ಜಿಲ್ಲೆಯ, ನವನಗರ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು **100** ಎಕರೆ ಭೂ ಪ್ರದೇಶದಲ್ಲಿ ಈ ಪಾರ್ಕನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಭೂಮಿ ಅಭಿವೃದ್ಧಿ, ರಸ್ತೆ ಮತ್ತು ಚರಂಡಿ ಕಾರ್ಯ ಪೂರ್ಣಗೊಂಡಿದೆ. ಶೀತಲ ಗೃಹ ಹಾಗೂ ಉಗ್ರಾಣ ನಿರ್ಮಾಣ ಕಾರ್ಯವು ಸಹ ಮುಗಿದಿರುತ್ತದೆ. ಧಾನ್ಯ/ತರಕಾರಿ/ ಹಣ್ಣುಗಳನ್ನ ಶ್ರೇಣಿಕರಿಸುವ ಮತ್ತು ಪ್ಯಾಕೇಜಿಂಗ್ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ತೂಕ ಸೇತುವೆ ಕಾರ್ಯವು ಮುಗಿದಿರುತ್ತದೆ. ಇದುವರೆಗೂ **18** ಆಹಾರ ಸಂಸ್ಕರಣಾ ಘಟಕಗಳಿಗೆ ಒಟ್ಟು **52.5** ಎಕರೆ ಭೂಮಿ ಹಂಚಿಕೆ ಮಾಡಿದ್ದು, ಉಳಿದ **2.25** ಎಕರೆ ಭೂಮಿ ಹಂಚಿಕೆಗೆ ಲಭ್ಯವಿರುತ್ತದೆ. ಪ್ರವರ್ತಕರು ದಿನಾಂಕ

19.11.2018 ತಿಳಿಸಿರುವಂತೆ ಈ ಯೋಜನೆಗೆ ತಗುಲಿರುವ ಒಟ್ಟು ಯೋಜನಾ ವೆಚ್ಚ ರೂ. 2241.05 ಲಕ್ಷಗಳು. ಸದರೀ ಪಾರ್ಕಗೆ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ತಲಾ ರೂ.400 ಲಕ್ಷಗÀಳಂತೆ (ಒಟ್ಟು ರೂ. 800 ಲಕ್ಷಗಳು) ಅನುದಾನ ನೀಡಲಾಗಿದೆ ಮುಂದುವರೆದು. ಸದರಿ ಸಭೆಯಲ್ಲಿ ಕಂಪನಿಯ ಪ್ರತಿನಿಧಿಯು, ಪಾರ್ಕಿನಲ್ಲಿ ತೀವ್ರವಾದ ನೀರಿನ ಸಮಸ್ಯೆಯಿದೆಯೆಂದು ತಿಳಿಸುತ್ತಾ ಸದರಿ ಸಮಸ್ಯೆಯ ಪರಿಹಾರಕ್ಕಾಗಿ ಮನವಿ ಮಾಡಿದರು.

1. ಅಕ್ಷಯ ಆಹಾರ ಪಾರ್ಕ್ ನಿಯಮಿತ, ಹಿರಿಯೂರು:

ಸದರಿ ಆಹಾರ ಪಾರ್ಕನ್ನು ಚಿತ್ರದುರ್ಗ ಜಿಲ್ಲೆಯ, ಹಿರಿಯೂರು ತಾಲ್ಲೂಕಿನ ಹುಚ್ಚವನಹಳ್ಳಿಯಲ್ಲಿ 106 ಎಕರೆ ಮತ್ತು 37 ಗುಂಟೆ ಪ್ರದೇಶದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಭೂಮಿ ಸಮತಟ್ಟು ಮಾಡಿ ರಸ್ತೆಗಳನ್ನು ಮತ್ತು ಚರಂಡಿನಿರ್ಮಿಸುವ ಕಾರ್ಯ ಮುಗಿಸಲಾಗಿದೆ. ಶೀತಲೀಕರಣ, ಯಂತ್ರೋಪಕರಣಗಳು, ಹಣ್ಣು, ತರಕಾರಿ ಆಹಾರಧ್ಯಾನ, ಎಣ್ಣೆ ಕಾಳುಗಳು ಹಾಗೂ ಮಸಾಲಾ ಪದಾರ್ಥಗಳ ಸಂಸ್ಕರಣೆಗಾಗಿ 4 ತರಹ ವಿಂಗಡಣೆಮಾಡುವ ಆಹಾರಪದಾರ್ಥಗಳ ಪ್ಯಾಂಕಿಂಗ್ ಮಾಡುವ ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಪ್ರವರ್ತಕರು ದಿನಾಂಕ 19.11.18 ತಿಳಿಸಿರುವಂತೆ ಒಟ್ಟು ಯೋಜನಾ ವೆಚ್ಚ ರೂ. 1886.89 ಲಕ್ಷಗಳು. ಸದರಿ ಪಾರ್ಕಗೆ ಕೇಂದ್ರ ಸರ್ಕಾರದಿಂದ ರೂ.400 ಲಕ್ಷಗಳ ಅನುದಾನ ಹಾಗೂ ರಾಜ್ಯ ಸರ್ಕಾರದಿಂದ ರೂ. 400 ಲಕ್ಷಗಳ ಬಡ್ಡಿರಹಿತ/ಭದ್ರತೆರಹಿತ ಸಾಲ (ಒಟ್ಟು ರೂ. 800 ಲಕ್ಷಗಳು) ನೀಡಲಾಗಿದೆ. ರಸ್ತೆ ಅಗಲೀಕರಣಕ್ಕಾಗಿ PW ಇಲಾಖೆಯವರಿಗೆ ಮನವಿಯನ್ನು ಸಲ್ಲಿಸಿದ್ದು, ಸದರಿ ರಸ್ತೆಯ ಅಗಲೀಕರಣ ಮಾಡಬೇಕಾಗಿರುತ್ತದೆ.

4. ಜೇವರ್ಗಿ ಫುಡ್ ಪಾರ್ಕ್ ನಿಯಮಿತ, ಜೇವರ್ಗಿ:

ಸದರಿ ಪಾರ್ಕನ್ನು ಗುಲ್ಬರ್ಗ ಜಿಲ್ಲೆಯ, ಜೇವರ್ಗಿಯಲ್ಲಿ 105 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗುತ್ತಿದೆ. ಭೂಮಿ ಸಮತಟ್ಟು ಮಾಡಿ, ರಸ್ತೆ ಮತ್ತು ಚರಂಡಿಗಳನ್ನು ನಿರ್ಮಿಸಲಾಗುತ್ತಿದೆ. ಉಗ್ರಾಣದ ಕಾಮಗಾರಿಯು ಪ್ರಗತಿಯಲ್ಲಿದೆ. ಪ್ರವರ್ತಕರು ದಿನಾಂಕ 19.11.2018 ಕ್ಕೆ ಅಂತ್ಯಗೊಂಡಂತೆ ಒಟ್ಟು ಯೋಜನಾ ವೆಚ್ಚ ರೂ. 1792.00 ಲಕ್ಷಗಳು. ಕೇಂದ್ರ ಸರ್ಕಾರದ ರೂ.396 ಲಕ್ಷಗಳ ಮತ್ತು ರಾಜ್ಯ ಸರ್ಕಾರದ ರೂ. 400 ಲಕ್ಷಗಳ ಅನುದಾನದಲಿ ್ಲ(ಒಟ್ಟು ರೂ. 796 ಲಕ್ಷಗಳು) ಕ್ರಮವಾಗಿ ರೂ.200 ಲಕ್ಷ ಹಾಗೂ ರೂ.300 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಪ್ರವರ್ತಕರು ಈಗಾಗಲೇ ಸುಮಾರು 113 ಆಹಾರ ಸಂಸ್ಕಾರಣಾ ಉದ್ದಿಮೆದಾರರಿಗೆ ಘಟಕಗಳನ್ನು ಸ್ಥಾಪಿಸಲು ಭೂಮಿ ಹಂಚಿಕೆ ಮಾಡಿರುವುದಾಗಿ ತಿಳಿಸಿರುತ್ತಾರೆ.

ಆ) ರಾಜ್ಯ ಸರ್ಕಾರದ ಯೋಜನೆಯಡಿಯಲ್ಲಿಯ ಆಹಾರ ಪಾರ್ಕುಗಳು:

ರಾಜ್ಯ ಸರ್ಕಾರವು 2008-09ರ ಆಯವ್ಯಯದಲ್ಲಿ ಒಟ್ಟು 6 ಜಿಲ್ಲೆಗಳಲ್ಲಿ ಅಂದರೆ, ಬೆಂಗಳೂರು (ಗ್ರಾಮಂತರ) ತುಮಕೂರು, ಶಿವಮೊಗ್ಗ, ದಾವಣಗೆರೆ, ಬಿಜಾಪುರ ಹಾಗೂ ಬೆಳಗಾಂ ಜಿಲ್ಲೆಗಳಲ್ಲಿ ಆಹಾರ

ಪಾರ್ಕುಗಳ ಸ್ಥಾಪನೆಗೆ ಯೋಜಿಸಲಾಗಿತ್ತು. ಸದರಿ ಆಹಾರ ಪಾರ್ಕುಗಳ ಅಭಿವೃದ್ಧಿಯನ್ನು ಕೈಗೊಳ್ಳುವುದಕ್ಕೂ ಮುನ್ನ ಆಹಾರ ಪಾರ್ಕುಗಳ ಅಭಿವೃದ್ಧಿಯನ್ನು ತುಲನೆ ಮಾಡಿ ನಿರ್ಣಯ ಕೈಗೊಳ್ಳಲಾಗುತ್ತಿದೆ.

1. ಶಿವಮೊಗ್ಗ ಆಹಾರ ಪಾರ್ಕ್: ಮೆ:// ಎಲ್.ಎಂ.ಜೆ ಇಂಟರ್ ನ್ಯಾಷನಲ್ ಲಿ. **100** ಎಕರೆ ಸೊಗಾನೆ ಹಳ್ಳಿಯ, ನಿಧಿಗೆ ಹೋಬಳಿಯ ಕೈಗಾರಿಕಾ ಪ್ರದೇಶದಲ್ಲಿ ಆಹಾರ ಪಾರ್ಕ್ ಸ್ಥಾಪಿಸಲು ಡೆವಲಪರ್ ಆಗಿ ಆಯ್ಕೆಯಾಗಿದ್ದಾರೆ. ಆದಾಗ್ಯೂ ರಾಜ್ಯದಲ್ಲಿ ಸ್ಥಾಪಿಸುತ್ತಿರುವ ಇತರೇ ಆಹಾರ ಪಾರ್ಕ್‌ಗಳ ಅಭಿವೃದ್ಧಿಯ ಮಂದಗತಿಯ ಪ್ರಗತಿಯನ್ನು ಮನಗಂಡು ಶಿವಮೊಗ್ಗ ಆಹಾರ ಪಾರ್ಕ್‌ನ ಪ್ರವರ್ತಕರಿಗೆ ಭೂಮಿ ಹಸ್ತಾಂತರಿಸುವ ಪ್ರಕ್ರಿಯೆಯನ್ನು ಪರಿಶೀಲಿಸಲಾಗುತ್ತಿದೆ. ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

2. ವಿಜಯಪುರ ಆಹಾರ ಪಾರ್ಕ್: ಆಹಾರ ಕರ್ನಾಟಕ ನಿಯಮಿತಕ್ಕೆ ಬಿಜಾಪುರ ಜಿಲ್ಲೆಯ ಇಟ್ಟಂಗಿಹಾಳದಲ್ಲಿ ವಿಜಯಪುರ ಜಿಲ್ಲಾಧಿಕಾರಿಯವರು **75** ಎಕರೆ ಭೂಸ್ವಾಧೀನ ಮಾಡಿ ಆಹಾರ ಕರ್ನಾಟಕ ನಿಯಮಿತ ರವರಿಗೆ ಹಸ್ತಾಂತರಿಸಿದ್ದಾರೆ. ಸದರಿ ಆಹಾರ ಪಾರ್ಕ ಅಭಿವೃಧಿ ಪಡಿಸಲು ಪ್ರವರ್ತಕರನ್ನು ಆಯ್ಕೆಮಾಡಬೇಕಾಗಿದೆ.

3. ಸ್ಪೆಸ್ ಪಾರ್ಕ್, ಬ್ಯಾಡಗಿ, ಹಾವೇರಿ ಜಿಲ್ಲೆ: ಆಹಾರ ಕರ್ನಾಟಕ ನಿಯಮಿತ ಸಂಸ್ಥೆಯು ಬ್ಯಾಡಗಿಯಲ್ಲಿ ಸ್ಪೈಸ್ ಪಾರ್ಕ್‌ನ್ನು ಅಭಿವೃದ್ಧಿಗೊಳಿಸಲು ಖಾಸಗಿ ಸಂಸ್ಥೆಯವರಿಂದ ಪ್ರಸ್ತಾವನೆಯನ್ನು ಕೋರಿ ಪ್ರಮುಖ ಪತ್ರಿಕೆಗಳಲ್ಲಿ ಎರಡು ಬಾರಿ ಜಾಹೀರಾತು ಪ್ರಕಟಿಸಲಾಗಿತ್ತು. ಆದರೆ ಪ್ರಕಟಿತ ಜಾಹೀರಾತಿಗೆ ಖಾಸಗೀ ಸಂಸ್ಥೆಯವರಿಂದ ಯಾವುದೇ ಪ್ರಸ್ತಾವನೆ ಬಾರದ ಕಾರಣ, ಈಗಾಗಲೇ ಸದರೀ ಪಾರ್ಕ್‌ಗೆ ಅವಶ್ಯವಿರುವ ಭೂಮಿ ಖರೀದಿಗೆ ಅನುವಾಗುವಂತೆ ರೂ **100** ಲಕ್ಷಗಳನ್ನು **KIADB** ರವರಿಗೆ ಪಾವತಿಸಲಾಗಿದೆ. **KIADB** ರವರು ಅವಶ್ಯವಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿರುತ್ತಾರೆ.

*****

ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ

	ಯೋಜನೆ ಹೆಸರು ಮತ್ತು ಜಾರಿಗೊಳಿಸಿದ ವರ್ಷ	ಕರ್ನಾಟಕ ಅಂತರಗಂಗಾ ಸೂಕ್ಷ್ಮ ನೀರಾವರಿ ನಿಗಮ
ಆ	ಅಯವ್ಯಯ ಶೀರ್ಷಿಕೆ	2401–00–001–1–01, ಉಪ ಲೆಕ್ಕ ಶೀರ್ಷಿಕೆ: **101:** ವೇತನ ಮತ್ತು **103:** ಇತರೆ ವೆಚ್ಚಗಳು
ಇ	ಯೋಜನೆಯಡಿ ಕೇಂದ್ರ ಮತ್ತು ರಾಜ್ಯದ ಪಾಲು	ರಾಜ್ಯವಲಯ ಯೋಜನೆ (100%)
ಈ	ಯೋಜನೆ ಉದ್ದೇಶ	• ರೈತ ಸಮುದಾಯದಲ್ಲಿ ಸೂಕ್ಷ್ಮ ನೀರಾವರಿ ಯೋಜನೆಗಳ ಅರಿವು ಮೂಡಿಸುವುದು. • ರೈತರಿಗೆ ಗುಣಮಟ್ಟದ ಸಾಮಗ್ರಿಗಳ ಸರಬರಾಜು, ಸಮಯೋಚಿತ ಮತ್ತು ರೈತರಿಗೆ ಸಹಾಯಧನವನ್ನು ತ್ವರಿತವಾಗಿ ವಿತರಿಸುವುದು. • ಪ್ರಸ್ತುತ ಅನುಷ್ಠಾನ ಮಾಡುತ್ತಿರುವ ಸೂಕ್ಷ್ಮ ನೀರಾವರಿ ಯೋಜನೆಗಳನ್ನು ಏಕಗವಾಕ್ಷಿ ಮಾದರಿಯಲ್ಲಿ ನಿಗಮದಿಂದ ಅನುಷ್ಠಾನ ಮಾಡುವುದು. • ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳಲ್ಲಿ ಪ್ರಸ್ತುತ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಸೂಕ್ಷ್ಮ ನೀರಾವರಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದು. • ಫಲಾನುಭವಿಗಳ ಅರ್ಜಿ ಸ್ವೀಕೃತಿ ಪ್ರಕ್ರಿಯೆಯಿಂದ ಅನುಷ್ಠಾನದವರೆಗೆ ಗಣಕೀಕರಿಸುವುದು.
ಉ	ಅಂದಾಜು ಪಲಿತಾಂಶ/ಫಲಾನುಭವಿಗಳು	–
ಊ	ಹಣಕಾಸು ರೂ. ಲಕ್ಷ ಗಳಲ್ಲಿ)	2019–20 ನೇ ಸಾಲಿಗೆ ರೂ. **200.00** ಲಕ್ಷಗಳ ಆರ್ಥಿಕ ಗುರಿ ಇರುತ್ತದೆ

ಋ) ವೆಚ್ಚ (ಲಕ್ಷ ರೂ.ಗಳಲ್ಲಿ)

ಲೆಕ್ಕ 2018–19		ಪರಿಷ್ಕೃತ ಅಂದಾಜು 2019–20		ಅಯವ್ಯಯ ಅಂದಾಜು 2020–21
ಅನುದಾನ ಬಿಡುಗಡೆ	ವೆಚ್ಚ	ಅನುದಾನ ಬಿಡುಗಡೆ	ವೆಚ್ಚ(ಜನವರಿ 2020ರ ಅಂತ್ಯದವರೆಗೆ)	ನೀರಿಕ್ಷಿತ ಅನುದಾನ
90.76	90.76	150.00	150.00	1566.00

ಎ) ಭೌತಿಕ ಸಾಧನೆ (ಘಟಕ: ಸಂಖ್ಯೆಗಳಲ್ಲಿ)

2018-19		2019-20		ಲೆಕ್ಕ ಪರಿಶೋಧನೆ ವಿವರ ಸಾಧನೆ
ಗುರಿ	ಸಾಧನೆ	ಗುರಿ	ಗುರಿ	
–	–	–	–	2018–19ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನೆ ಮುಗಿದಿದ್ದು ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ. 2019–20 ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನೆಯನ್ನು ಆರ್ಥಿಕ ವರ್ಷದ ನಂತರ ಮಾಡಲಾಗುವುದು.

ಏ) ಕಾರ್ಯನಿರ್ವಹಣೆಯ ಪ್ರವೃತ್ತಿಯ ಸಂಕ್ಷೀಪ್ತ ವಿಶ್ಲೇಷಣೆ ಹಾಗೂ ಅನುಷ್ಠಾನದಲ್ಲಿನ ತೊಡಕುಗಳು, ಸೌಲಭ್ಯಗಳನ್ನು ಒದಗಿಸುವ ಕೊರತೆ ಉಂಟಾದಲ್ಲಿ ಅಥವಾ ಫಲಾನುಭವಿಗಳನ್ನು ತಲುಪಲು ಹಾಗೂ ಅನುಷ್ಠಾನ ವಿಳಂಬವಾಗಲು ಕಾರಣಗಳು:

–ಅನ್ವಯಿಸುವುದಿಲ್ಲ-

ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ಪ್ರಸಕ್ತ ವಿದ್ಯಮಾನ

1. ಸ್ಥಾಪನೆ, ಬಂಡವಾಳ ಮತ್ತು ಸ್ಥಾಪಿಸಿದ ಉದ್ದೇಶ:

ಕರ್ನಾಟಕ ಕೃಷಿ ಕೈಗಾರಿಕಾ ನಿಗಮ ನಿಯಮಿತವು 1967ರಲ್ಲಿ ರಾಜ್ಯ ಸರ್ಕಾರದ ಶೇ.51 ರಷ್ಟು ಷೇರು ಬಂಡವಾಳ ಮತ್ತು ಕೇಂದ್ರ ಸರ್ಕಾರದ ಶೇ.49 ರಷ್ಟು ಷೇರು ಬಂಡವಾಳದೊಂದಿಗೆ ಸ್ಥಾಪನೆಗೊಂಡು ಕೃಷಿ ಕ್ಷೇತ್ರದ ಅಭಿವೃದ್ಧಿಗೋಸ್ಕರ ವ್ಯವಸ್ಥಿತ, ವೈಜ್ಞಾನಿಕ ಹಾಗೂ ಲಾಭದಾಯಕ ಕೃಷಿ ಕೈಗೊಳ್ಳಲು ರಾಜ್ಯದ ರೈತರಿಗೆ ಕೃಷಿ ನೀತಿಯೊಂದಿಗೆ ಪ್ರಗತಿ ಪಥದಲ್ಲಿ ಮುನ್ನಡೆಯುವಂತೆ ಸಹಕಾರಿಯಾಗಲು ಕೃಷಿ ಪರಿಕರಗಳ ಮಾರಾಟ ಸೇವೆಯಲ್ಲಿ ತೊಡಗಿಸಿಕೊಂಡಿತು. ಕೇಂದ್ರ ಸರ್ಕಾರದ ಶೇ.49 ಷೇರು ಬಂಡವಾಳವನ್ನು ಪೂರ್ತಿಯಾಗಿ ರಾಜ್ಯ ಸರ್ಕಾರಕ್ಕೆ ವರ್ಗಾವಣೆಗೊಂಡು ದಿ. 15–03–2001 ರಿಂದ ಸಂಸ್ಥೆಯು ರಾಜ್ಯ ಸರ್ಕಾರದ ಅಧೀನಕ್ಕೆ ಬಂದಿತು.

2. ಸಿಬ್ಬಂದಿಯ ಸ್ವಯಿಚ್ಛಾ ನಿವೃತ್ತಿಗಾಗಿ ಸರ್ಕಾರದ ಆರ್ಥಿಕ ಸಹಾಯ:

ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಡಿಡಿಪಿಇಆರ್/55/ಎ.ಆರ್.ಯು/2003 ದಿನಾಂಕ 03–09–2003ರಲ್ಲಿ ನಿಗಮವನ್ನು ಮುಚ್ಚಲು ನಿರ್ಣಯಿಸಿ ಎಲ್ಲ ನೌಕರರಿಗೂ ಸ್ವಯಂ ನಿವೃತ್ತಿ ಯೋಜನೆ ಜಾರಿಗೊಳಿಸಲು ಆದೇಶಿಸಿತು. ಈ ಆದೇಶದ ಅನ್ವಯ ಸಂಸ್ಥೆಯ ಎಲ್ಲಾ ನೌಕರರಿಗೂ ಸ್ವಯಂ ನಿವೃತ್ತಿ ನೀಡಲಾಗಿದೆ ಮತ್ತು ಎಲ್ಲಾ ಜಿಲ್ಲಾ ಕಛೇರಿಗಳನ್ನೂ 2004ನೇ ವರ್ಷದಲ್ಲಿ ಮುಚ್ಚಲಾಗಿದೆ. 2003ರ ಸ್ವಯಂ ನಿವೃತ್ತಿ ಯೋಜನೆಯಡಿ ನಿವೃತ್ತಿ ಗೊಂಡ ನೌಕರರ ಸವಲತ್ತುಗಳ ವಿತರಣೆ ಹಾಗೂ ಭವಿಷ್ಯನಿಧಿ ವಂತಿಗೆ ಪಾವತಿಗಾಗಿ ರೂ.49,39,34,883 ಗಳನ್ನು ಸಾಲದ ರೂಪದಲ್ಲಿ ರಾಜ್ಯ ಸರ್ಕಾರವು ದಿನಾಂಕ: 26–12–2003ರಿಂದ 31–12–2007ರ ವರೆಗೆ 9 ಸರ್ಕಾರಿ ಆದೇಶಗಳ ಮೂಲಕ ಬಿಡುಗಡೆಗೊಳಿಸಿತು. ಸಮಾಪನ ಮಾಡಲು ಅದೇಶಿಸಲ್ಪಟ್ಟಿರುವ ಕರ್ನಾಟಕ ಸರ್ಕಾರದ ಇತರ ಅಂಗಸಂಸ್ಥೆಗಳಿಗೆ ನೀಡಿರುವ ಇಂತಹ ಆರ್ಥಿಕ ಸಹಾಯವನ್ನು ಅನುದಾನವಾಗಿ ಪರಿಗಣಿಸಿರುವಂತೆ, ನಮ್ಮ ಸಂಸ್ಥೆಗೆ ಪರಿಗಣಿಸದೆ ಸಾಲ ರೂಪದಲ್ಲಿ ಅನುದಾನ ಬಿಡುಗಡೆ ಮಾಡಿದ್ದರೂ ಕೂಡ, ಸರ್ಕಾರದಿಂದ ಹಣ ಬಂದ ಹಾಗೆ ಸವಲತ್ತುಗಳನ್ನು ವಿತರಣೆ ಮಾಡಲಾಯಿತು. ಹಾಗೂ ತಡವಾಗಿ ಪಾವತಿಸಿದ ಸವಲತ್ತುಗಳ ಹಣಕ್ಕೆ ಬಡ್ಡಿ ಯನ್ನು ಕೋರಿ ನೌಕರರು ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಹೈಕೋರ್ಟ್ ಆದೇಶದ ಮೇರೆಗೆ ಶೇ.6 ರಷ್ಟು ಬಡ್ಡಿಯನ್ನೂ ಆಡಳಿತಾತ್ಮಕ ಅನುಮೋದನೆ ಪಡೆದು ಪಾವತಿಸಲಾಯಿತು. ಮೇಲ್ಕಂಡ ಸಾಲ, ಅದರ ಮೇಲಿನ ಬಡ್ಡಿ ಮತ್ತು ಚಕ್ರಬಡ್ಡಿಗಳನ್ನು, ಈಗಾಗಲೇ ರಾಜ್ಯ ಸರ್ಕಾರಕ್ಕೆ ಭೌತಿಕವಾಗಿ ಹಸ್ತಾಂತರ ಮಾಡಲಾಗಿರುವ / ಮಾಡೇಕಾಗಿರುವ ಕ.ಎ.ಐ.ಸಿ. ಸಂಸ್ಥೆಯ 21 ಸ್ಥಿರಾಸ್ತಿಗಳ ರೂ.685/– ಕೋಟಿಗಳ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳುವಂತೆ ರಾಜ್ಯ ಸರ್ಕಾರವನ್ನು ಕೋರಲಾಗಿದೆ.

3. ಸಂಸ್ಥೆಯನ್ನು ಮುಚ್ಚುವ ಕಾರ್ಯ:

ಪ್ರಸಕ್ತ ಕೃಷಿ ಆಯುಕ್ತರು ಸಂಸ್ಥೆಯ ವ್ಯವಸ್ಥಾಪಕ ನಿದೇಶಕರಾಗಿದ್ದು ತಾತ್ಕಾಲಿಕವಾಗಿ ನೇಮಿಸಿಕೊಂಡಿರುವ 4 ಜನ ಸಿಬ್ಬಂದಿ ವರ್ಗದವರ ಸಹಾಯದಿಂದ ಸಂಸ್ಥೆಯನ್ನು ಮುಚ್ಚುವ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಮಾಪನ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

4. 2019–20ನೇ ಸಾಲಿನ ಸಂಕ್ಷಿಪ್ತ ತಾತ್ಕಾಲಿಕ ವರದಿ:

2019–20ನೇ ಸಾಲಿನಲ್ಲಿ ಹಿಂದಿನ ಸಾಲಿನ ಇತರೆ ಆದಾಯಕ್ಕೆ ಹೋಲಿಸಿದಲ್ಲಿ ರೂ.26.40 ಲಕ್ಷಗಳು (ರೂ.82.21 ಲಕ್ಷಗಳು - ರೂ.56.17 ಲಕ್ಷಗಳು) ರೂ.ಗಳಷ್ಟು ಕಡಿಮೆ ಆಗಿರುವುದು. ಒಟ್ಟಾರೆ ಆಡಳಿತಾತ್ಮಕ ಮತ್ತು ನಿರ್ವಹಣಾ ವೆಚ್ಚದಲ್ಲಿ ರೂ.425.25 ಲಕ್ಷಗಳಷ್ಟು (ರೂ.2,837.93ಲಕ್ಷ – ರೂ.2,412.68ಲಕ್ಷ) ಹೆಚ್ಚಳವಾಗಿರುತ್ತದೆ. ಆದಕಾರಣ 2019–20ನೇ ಸಾಲಿನಲ್ಲಿ ಅಂದರೆ ದಿನಾಂಕ 31–03–2020ರಲ್ಲಿದ್ದಂತೆ ಸಂಸ್ಥೆಯ ನಿವ್ವಳ ನಷ್ಟ ರೂ.27.82 ಕೋಟಿಗಳು ಮತ್ತು ಸಂಚಿತನಷ್ಟ ರೂ.350.84 ಕೋಟಿಗಳಷ್ಟಾಗಿರುತ್ತದೆ. ಸಂಸ್ಥೆಯು ಅನುಭವಿಸಿದ ನಿವ್ವಳ ನಷ್ಟಕ್ಕೆ ಮುಖ್ಯವಾಗಿ ಸರ್ಕಾರಿ ಸಾಲಗಳ ಮೇಲೆ ಬಡ್ಡಿ ಹವಣಿಕೆಗಳನ್ನು ಮಾಡಿಕೊಂಡಿರುವುದು ಮತ್ತು ಸಂಸ್ಥೆಯ ಎಲ್ಲಾಚಟುವಟಿಕೆಗಳ ಸ್ಥಗಿತವೇ ಕಾರಣವಾಗಿರುತ್ತದೆ.

ಕೃಷಿ ವಿಜ್ಞಾನಗಳ ವಿಶ್ವ ವಿದ್ಯಾಲಯ

2019-20ನೇ ಸಾಲಿನ ಸಂಕ್ಷಿಪ್ತ ವಾರ್ಷಿಕ ವರದಿ

ಕೃಷಿ ಶಿಕ್ಷಣ

- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಸಂಖ್ಯೆಯು 1262 ಇದ್ದು, ಒಟ್ಟು 790 ಬಾಲಕರು ಮತ್ತು 472 ಬಾಲಕೀಯರು ಪ್ರವೇಶಾತಿ ಪಡೆದಿದ್ದಾರೆ. ಅದರಲ್ಲಿ 343 ವಿದ್ಯಾರ್ಥಿಗಳು 2018-19 ರಲ್ಲಿ ಪ್ರವೇಶಾತಿ ಪಡೆದಿದ್ದು, 209 ಬಾಲಕರು ಮತ್ತು 134 ಬಾಲಕೀಯರಾಗಿದ್ದಾರೆ.
- 2018-19 ಶೈಕ್ಷಣಿಕ ವರ್ಷದಲ್ಲಿ ಬಿ.ಎಸ್ಸಿ. ಕೃಷಿ ಪದವಿಗೆ 167 ಬಾಲಕರು ಮತ್ತು 117 ಬಾಲಕಿಯರು ಪ್ರವೇಶವನ್ನು ಪಡೆದಿರುತ್ತಾರೆ ಹಾಗೂ ಕೃಷಿ ತಾಂತ್ರಿಕ ಪದವಿಗೆ 42 ಬಾಲಕರು ಮತ್ತು 17 ಬಾಲಕಿಯರು ಪ್ರವೇಶವನ್ನು ಪಡೆದಿರುತ್ತಾರೆ.
- ಪ್ರಸ್ತುತ ವರ್ಷದಲ್ಲಿ 342 ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಪ್ರವೇಶ ಪಡೆದಿದ್ದಾರೆ. ಅದರಲ್ಲಿ 116 ಸ್ನಾತಕೋತ್ತರ ಮತ್ತು 38 ಡಾಕ್ಟೋರಲ್ ಪದವಿಗಳಿಗೆ ಪ್ರವೇಶ ಪಡೆದಿದ್ದಾರೆ. 130 ವಿದ್ಯಾರ್ಥಿಗಳು ಡಿಪ್ಲೋಮಾ ಕೋರ್ಸಿಗೆ ಪ್ರವೇಶ ಪಡೆದಿದ್ದಾರೆ.
- 2018-19ನೇ ಸಾಲಿನಲ್ಲಿ63 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿವೇತನ, 43 ವಿದ್ಯಾರ್ಥಿಗಳಿಗೆ ಸಾಮಾನ್ಯ ವಿದ್ಯಾರ್ಥಿವೇತನ ಲಭಿಸಿರುತ್ತದೆ. 43 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೃವಿವಿ.,ರಾಯಚೂರು ಮೆರಿಟ್ ಶಿಷ್ಯ ವೇತನ, 158 ವಿದ್ಯಾರ್ಥಿ ಪ್ರೋತ್ಸಾಹ ವೇತನ ಮತ್ತು 17 ಡಾಕ್ಟೋರಲ್ ವಿದ್ಯಾರ್ಥಿಗಳಿಗೆ ಕೃವಿವಿ., ರಾಯಚೂರು ಮೆರಿಟ್ ಶಿಷ್ಯ ವೇತನ, 5 ಡಾಕ್ಟೋರಲ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ವಿದ್ಯಾರ್ಥಿ ವೇತನ ಲಭಿಸಿರುತ್ತದೆ.
- ಕೃವಿವಿ, ರಾಯಚೂರಿನ ಎಸ್‌ಸಿಎಸ್‌ಪಿ/ಟಿಎಸ್‌ಪಿ ಕೋಶದ 2019-20ನೇ ವರ್ಷದಲ್ಲಿ ಒಟ್ಟು 277 (ಪ.ಜಾ. 207, ಪ.ಪಂ.70 ವಿದ್ಯಾರ್ಥಿಗಳು) ಸ್ನಾತಕ / ಸ್ನಾತಕೋತ್ತರ / ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಶೂನ್ಯ ಮೆಸ್ ಬಿಲ್‌ನ ಸೌಲಭ್ಯ ನೀಡಲಾಗಿದೆ ಮತ್ತು ಒಟ್ಟು 86 ವಿದ್ಯಾರ್ಥಿಗಳಿಗೆ (ಪ.ಜಾ. 66, ಪ.ಪಂ. 20) ಲ್ಯಾಪ್‌ಟಾಪ್ ವಿತರಿಸಲಾಗಿದೆ. ಜೊತೆಗೆ 277 ವಿದ್ಯಾರ್ಥಿಗಳಿಗೆ (ಪ.ಜಾ. 207, ಪ.ಪಂ.70) ಸ್ನಾತಕ ವಿದ್ಯಾರ್ಥಿಗಳಿಗೆ ರೂ. 5,000/- ಗಳಂತೆ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ. 10,000/ ಗಳಂತೆ ಪ್ರತಿ ವಿದ್ಯಾರ್ಥಿಗೆ ಮತ್ತು ಪಿ.ಹೆಚ್.ಡಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 15,000/- ಗಳಂತೆ ಕಾಂಟಿನ್‌ಜೆನ್ಸಿ ಹಣವನ್ನು ನೀಡಲಾಗಿದೆ.

ಮೂರನೆ ವರ್ಷದ ಸ್ನಾತಕ ಪ.ಜಾ. ಮತ್ತು ಪ.ಪಂಗಡದ ಒಟ್ಟು 49 ವಿದ್ಯಾರ್ಥಿಗಳಿಗೆ ರಾಜ್ಯ ಶೈಕ್ಷಣಿಕ ಪ್ರವಾಸಕ್ಕಾಗಿ ಬಳಸಲಾಗಿದೆ. ಅಂತಿಮ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ಪ.ಜಾ/ಪ.ಪಂಗಡದ 62 ವಿದ್ಯಾರ್ಥಿಗಳಿಗೆ ಅಖಿಲ ಭಾರತ ಶೈಕ್ಷಣಿಕ ಪ್ರವಾಸ ಕೈಗೊಳ್ಳಲಾಗಿದೆ.

ಕೃವಿವಿ, ರಾಯಚೂರು ಆವರಣದಲ್ಲಿ ಮಾರ್ಚ್ 12 ರಿಂದ 14ರ ವರೆಗೆ ಏರ್ಪಡಿಸಲಾದ Role of Agricultural Engineering innovation in doubling farmer income" ಎಂಬ ರಾಷ್ಟ್ರೀಯ ಸಂಕೀರಣದಲ್ಲಿ ಭಾಗವಹಿಸಿದ 43 ಸ್ನಾತಕೋತ್ತರ, ಮತ್ತು 12 ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನಸಹಾಯ ಮಾಡಲಾಗಿದೆ. 287 ಸ್ನಾತಕ, ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಕಾರ್ಯಗಳನ್ನು ಮತ್ತು ತರಬೇತಿಗಳನ್ನು ಕೈಗೊಳ್ಳಲಾಗಿದೆ ಮತ್ತು ಕೃವಿವಿ, ರಾಯಚೂರು ಅಡಿಯಲ್ಲಿನ ಎಲ್ಲಾ ಮಹಾವಿದ್ಯಾಲಯಗಳಲ್ಲಿನ ವಸತಿ ನಿಲಯಗಳಲ್ಲಿ ವಿದ್ಯಾರ್ಥಿ ಕೊಠಡಿಗಳ, ಪರೀಕ್ಷಾ ಕೊಠಡಿ, ವಿಚಾರ ಸಂಕೀರಣ ಕೊಠಡಿಗಳ ನಿರ್ವಹಣೆಗಾಗಿ ಬಳಸಲಾಗಿದೆ.

ಕೃಷಿ ಸಂಶೋಧನೆ

ರಾಯಚೂರು ಕೃಷಿ ವಿಶ್ವವಿದ್ಯಾಲಯವು ಒಟ್ಟು 13 ಕೃಷಿ ಸಂಶೋಧನಾ ಕೇಂದ್ರಗಳನ್ನು ಹೊಂದಿದ್ದು ಅದರಲ್ಲಿ ಒಂದು ಮುಖ್ಯ ಕೃಷಿ ಸಂಶೋಧನಾ ಕೇಂದ್ರವು ರಾಯಚೂರಿನಲ್ಲಿದ್ದು ಇತರೇ 12 ಕೃಷಿ ಸಂಶೋಧನಾ ಕೇಂದ್ರಗಳು, 18 ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಗಳು ಉತ್ತರ ಕರ್ನಾಟಕದ 6 ಜಿಲ್ಲೆಗಳನ್ನೊಳಗೊಂಡಂತೆ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಹರಡಿರುತ್ತವೆ. 2018-19ನೇ ಸಾಲಿನಲ್ಲಿ ಸಜ್ಜೆಯಲ್ಲಿ MBP-2, ಹತ್ತಿಯಲ್ಲಿ BGDHH-697, ಭತ್ತದಲ್ಲಿ RPBIO-226 ಎಂಬ ಹೊಸ ತಳಿಗಳನ್ನು ಬಿಡುಗಡೆಗೊಳಿಸಲಾಗಿದೆ. ಬೆಳೆ ಉತ್ಪಾದನೆಯಲ್ಲಿ 13, ಬೆಳೆ ಸಂರಕ್ಷಣೆಯಲ್ಲಿ 08, ಮಣ್ಣು ವಿಜ್ಞಾನ ಮತ್ತು ರಸಾಯನಶಾಸ್ತ್ರ ವಿಭಾಗದಿಂದ 02, ಬೀಜ ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಿ 01, ಬೆಳೆ ಶರೀರಶಾಸ್ತ್ರದಲ್ಲಿ 02, ತೋಟಗಾರಿಕೆಯಲ್ಲಿ 03, ಮತ್ತು ಕೃಷಿ ತಾಂತ್ರಿಕತೆ ವಿಭಾಗದಿಂದ 07 ತಂತ್ರಜ್ಞಾನಗಳನ್ನು, ಒಟ್ಟಾರೆ 40 ತಂತ್ರಜ್ಞಾನಗಳನ್ನು ರೈತರ ಉಪಯೋಗಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದಲ್ಲದೆ ಪ್ರಸ್ತುತ ವರ್ಷದಲ್ಲಿ (2019-20) ಭತ್ತ, ಮೆಕ್ಕೆಜೋಳ, ತೊಗರಿ, ಕಡಲೆ ಮತ್ತು ಮೆಣಸಿನಕಾಯಿ ಬೆಳೆಗಳಲ್ಲಿ ಆರು ಹೊಸ ತಳಿಗಳನ್ನು ಕ್ಷೇತ್ರ ಪ್ರಯೋಗಕ್ಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ್ದಾರೆ.

ಇದಲ್ಲದೆ 2019-20 ನೇ ಸಾಲಿನಲ್ಲಿ ಒಟ್ಟು 35 ಹೊಸ ಕ್ಷೇತ್ರ ಪ್ರಯೋಗಳನ್ನು (ತಳಿ ಅಭಿವೃದ್ಧಿ ವಿಭಾಗದಿಂದ 6, ಬೆಳೆ ಉತ್ಪಾದನೆ ವಿಭಾಗದಿಂದ 8, ಕೀಟಶಾಸ್ತ್ರ ವಿಭಾಗದಿಂದ 12, ಸಸ್ಯ ರೋಗಶಾಸ್ತ್ರ ಹಾಗೂ ಬೀಜ ತಾಂತ್ರಿಕತೆ ವಿಭಾಗದಿಂದ ತಲಾ 3, ಕೃಷಿ ಸೂಕ್ಷ್ಮಜೀವಶಾಸ್ತ್ರ, ಬೆಳೆ ಶರೀರಶಾಸ್ತ್ರ ಹಾಗೂ ಮಣ್ಣು ಮತ್ತು ನೀರು ಸಂರಕ್ಷಣಾ ವಿಭಾಗದಿಂದ ತಲಾ 1, ಅಂತಿಮ ಮೌಲ್ಯಮಾಪನಕ್ಕಾಗಿ ಸೂಚಿಸಲಾಗಿದೆ. ಅದೇ ರೀತಿ 10 ಕ್ಷೇತ್ರ ಪ್ರಯೋಗಗಳನ್ನು 2019-20 ರಲ್ಲಿ ಮುಂದುವರೆಸಲಾಗಿದೆ.

ಪ್ರಸಕ್ತ ವರ್ಷದಲ್ಲಿ (2019-20) 433 ನೂತನ ಪ್ರಯೋಗಗಳನ್ನು ವಿವಿಧ ವಿಭಾಗಳಿಂದ ಪರೀಕ್ಷಿಸಲಾಗಿದೆ. ಇದಕ್ಕೆ ಅನುಗುಣವಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ರೂ. 11.29 ಕೋಟಿ ಮೊತ್ತದ ಅನುದಾನ ಕರ್ನಾಟಕ ಸರ್ಕಾರದಿಂದ ಮಂಜೂರಾತಿ ದೊರಕಿದೆ. ಇದಲ್ಲದೆ 114 ಯೋಜನೆಗಳಿಗೆ ಬಾಹ್ಯವಾಗಿ ಹಾಗೂ ವಿಶ್ವವಿದ್ಯಾಲಯದ ಅನುದಾನವತಿಯಿಂದ 21 ಯೋಜನೆಗಳು ಕೃಷಿ ಸಮುದಾಯದ ಅನುಕೂಲಕ್ಕಾಗಿ ಕಾರ್ಯನಿವಹಿಸುತ್ತಿವೆ.

ಕೇಂದ್ರೀಕೃತ ವಿಶೇಷ ಸರಕುಗಳ ಬದಲು ತಂತ್ರಜ್ಞಾನ ಉತ್ಪಾದನೆಗೆ ವ್ಯವಸ್ಥೆಯ ದೃಷ್ಟಿಕೋನ ತರುವುದು ಮತ್ತು ಕೇವಲ ಉತ್ಪಾದನೆಯಲ್ಲಿ ಕೊನೆಗೊಳ್ಳುವುದರ ಬದಲು ಒಕ್ಕಲುತನ ಪದ್ಧತಿ ಮೇಲೆ, ಸಂಪನ್ಮೂಲಾಧಾರಿತ ಪಶು ಸಂಪತ್ತಿನ ಉತ್ಪಾದನೆ : ಉತ್ಪನ್ನಗಳ ಮಾರ್ಪಾಡಿನ ಮೇಲೆ ಕೊಡಲಾಗುವ ಒತ್ತನ್ನು ಬದಲಾಯಿಸುವುದು ಮತ್ತು ಮೌಲ್ಯ ಸೇರ್ಪಡೆ ಕುರಿತಂತೆ ಸಂಶೋಧನೆಯನ್ನು ಪುನ:ಶ್ಚೇತನಗೊಳಿಸಲಾಗುತ್ತದೆ.

ಮಳೆಯಾಶ್ರಿತ ಹಾಗೂ ಒಣ ಭೂಮಿ ಪ್ರದೇಶಗಳ ಉತ್ಪಾದನೆಯನ್ನು ಹೆಚ್ಚಿಸುವುದು, ಉತ್ತಮ ಗುಣಮಟ್ಟದ ಬೀಜೋತ್ಪಾದನೆಗಾಗಿ ರೈತ ವಿಜ್ಞಾನಿ ಸಂಪರ್ಕ, ನೀರಿನ ಸದ್ಬಳಕೆ, ಕೀಟ ನಿರ್ವಹಣೆಗಾಗಿ ನೈಸರ್ಗಿಕ ಜೈವಿಕ ಕೀಟ ನಿಯಂತ್ರಕಗಳನ್ನು ತೀವ್ರಗೊಳಿಸುವುದು, ತೋಟಗಾರಿಕೆ ಬೆಳೆಗಳಲ್ಲಿ ಕೊಯ್ಲು ನಂತರದ ಸಂಶೋಧನೆಗಳನ್ನು ಬಲಪಡಿಸುವುದು, ಕೃಷಿ ಉದ್ದಿಮೆಗಳ ಸ್ಥಾಪನೆಯಲ್ಲಿ ಕಾರ್ಯಸಾಧ್ಯ ಅಧ್ಯಯನಗಳು ಮತ್ತು ಸಂಶೋಧನಾ ಮಾಹಿತಿಗಾಗಿ ಸಂಪರ್ಕ ಜಾಲವನ್ನು ಬಲಪಡಿಸುವುದು. ಪರಿಸರ ಸಂರಕ್ಷಣೆ ಹಾಗು ಸ್ಥಿರ ಉತ್ಪಾದಕತೆಗಾಗಿ ಸಾವಯವ ಕೃಷಿ ಉತ್ಪಾದನಾ ನಿಲುವುಗಳನ್ನು ಅನುಸರಿಸುವುದು.

ಸಂಶೋಧನೆ ಯೋಜನೆಗಳು ರೈತರ ಅಭಿವೃದ್ಧಿಯ ಜೊತೆಗೆ ಪರಿಸರ ಸಂರಕ್ಷಣೆಗೂ ಸಹಾಯಕಾರಿಯಾಗಿವೆ. ಮೌಲ್ಯವರ್ಧನೆಗೆ ಹೆಚ್ಚು ಒತ್ತು ಕೊಡಲಾಗಿದೆ. ಇತ್ತೀಚಿನ ನ್ಯಾನೋ ತಂತ್ರಜ್ಞಾನ ಬೆಳೆ ಸಂರಕ್ಷಣೆಯಲ್ಲಿ ಉತ್ತಮ ಪಾತ್ರ ವಹಿಸಬಹುದಾದರಿಂದ ಈ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳಲಾಗಿದೆ. ಕಳೆ, ಕೀಟ ಹಾಗೂ ರೋಗಗಳನ್ನು ಗುರುತಿಸಿ ಅವುಗಳ ನಿಯಂತ್ರಣಕ್ಕಾಗಿ e-SaP ತಂತ್ರಜ್ಞಾನವನ್ನು ಆಳವಡಿಸಿಕೊಳ್ಳಲಾಗಿದೆ. ಕಡಲೆಯಲ್ಲಿ ಯಾಂತ್ರಿಕ ಕೊಯ್ಲಿಗೆ ಜಿಬಿಎಮ್-2 ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ಯಾದಗಿರಿ ಜಿಲ್ಲೆಯ ತಿಂಥಣಿಯಲ್ಲಿ ಜೈವಿಕ-ಇಂಧನ ಪಾರ್ಕನ್ನು ಪ್ರಾರಂಭಿಸಲಾಗಿದೆ. ರಾಷ್ಟ್ರೀಯ ಮಣ್ಣು ಆರೋಗ್ಯ ಅಭಿಯಾನದ ಅಡಿಯಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿಗೆ ಮಂಜೂರಾದ ಅನುದಾನದಲ್ಲಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಎಲ್ಲಾ ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ಸಂಶೋಧನೆ ಮತ್ತು ಕೃಷಿ ಮಹಾವಿದ್ಯಾಲಯಗಳಲ್ಲಿ ಸುಸಜ್ಜಿತ ಹದಿಮೂರು ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ 75 ಲಕ್ಷ ರೂಪಾಯಿಗಳು ವೆಚ್ಚದಲ್ಲಿ ಮಾದರಿ (ರೆಫರಲ್) ಮಣ್ಣು ಪರೀಕ್ಷ ಕೇಂದ್ರವನ್ನು, ಕೃಷಿ ಮಹಾ ವಿದ್ಯಾಲಯ, ರಾಯಚೂರಿನಲ್ಲಿ ಸ್ಥಾಪಿಸಲಾಗಿದೆ. ಈ ಎಲ್ಲಾ ಕೇಂದ್ರಗಳಿಂದ ಸುಮಾರು 21.935 ಮಣ್ಣು ಮಾದರಿಗಳನ್ನು ಮತ್ತು 3248 ನೀರಿನ ಮಾದರಿಗಳನ್ನು ಪರೀಕ್ಷಿಸಲಾಗಿದೆ ಹಾಗೂ ರೆಫರಲ್ ಮಣ್ಣು ಪರೀಕ್ಷಾ ಕೇಂದ್ರದಲ್ಲಿ

4111 ಮಣ್ಣು ಮಾದರಿಗಳನ್ನು ಈವರೆಗೆ ಪರೀಕ್ಷಿಸಲಾಗಿದೆ. ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ ಪಲ್ಸ್ ಮ್ಯಾಜಿಕ್ ತಾಂತ್ರಿಕತೆಯನ್ನು 4500 ಹೇ. ಪ್ರದೇಶದಲ್ಲಿ ರೈತರು ಅಳವಡಿಸಿಕೊಂಡಿದ್ದಾರೆ.

ವಿಶ್ವಬ್ಯಾಂಕ್‌ನ ಹಣಕಾಸು ನೆರವಿನ ಸುಜಲಾ-3 ಯೋಜನೆ ಅಡಿಯಲ್ಲಿ ಕಲಬುರಗಿ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ, 2.47 ಲಕ್ಷ ಹೇಕ್ಟರ್ ಮಳೆ ಆಶ್ರಿತ ಪ್ರದೇಶದಲ್ಲಿ ಸಂಪೂರ್ಣ ಭೂ ಸಂಪನ್ಮೂಲ ಮಾಹಿತಿಯನ್ನು ಸಂಗ್ರಹಿಸಿಲಾಗಿದ್ದು, ಅವುಗಳ ನಕ್ಷೆಗಳನ್ನು ತಯಾರಿಸಿ ರೈತರಿಗೆ ಮಾಹಿತಿ ತಲುಪುವಂತೆ ರೈತ ಸಂಪರ್ಕ ಕೇಂದ್ರ ಹಾಗೂ ಜಂಟಿ ಕೃಷಿ ನಿರ್ದೇಶಕರ ಕಛೇರಿಗಳಿಗೆ ಕನ್ನಡ ಅಟ್ಲಾಸ್ ಗಳನ್ನು ತಯಾರಿಸಿ ಕೊಡಲಾಗಿದೆ. ಇದರ ಆಧಾರದ ಮೇಲೆ ಭೂ ಸಂಪನ್ಮೂಲ/ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು 63,968 ರೈತರಿಗೆ ವಿತರಿಸಲಾಗಿದೆ. ಈ ಮಾಹಿತಿಯಿಂದ ರೈತರಿಗೆ, ವಿಜ್ಞಾನಿಗಳಿಗೆ, ವಿಧ್ಯಾರ್ಥಿಗಳಿಗೆ ಹಾಗೂ ಆಡಳಿತ ನೀತಿ ನಿರೂಪಕರಿಗೆ ಅನುಕೂಲವಾಗುವಂತೆ ಜಿಯೋ ಪೋರ್ಟಲ್‌ಅನ್ನು ಬಿಡುಗಡೆ ಮಾಡಲಾಗುತ್ತದೆ. ಇದಕ್ಕೆ ಬೇಕಾದ ಡಿ.ಎಸ್.ಎಸ್. ಮಾಡಲ್‌ಗಳನ್ನು ಒದಗಿಸಲು ನಮ್ಮ ವಿಜ್ಞಾನಿಗಳು ಶ್ರಮಿಸಿದ್ದಾರೆ. ನಮ್ಮ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಸುಜಲಾ-3 ಯೋಜನೆ ಮಣ್ಣು, ನೀರು ಹಾಗೂ ಬೆಳೆ ಸಂರಕ್ಷಣೆಗಾಗಿ ಕೃಷಿ ಇಲಾಖೆ ಹೊಂದಿಗೆ ಜಂಟಿಯಾಗಿ ಸುಮಾರು 10 ಕಿರು ಜಲಾನಯನಗಳಲ್ಲಿ ಅಳವಡಿಸಲಾಗಿದ್ದು ಇದನ್ನು ಜಲಾನಯನ ಇಲಾಖೆ ಹಾಗೂ ವಿಶ್ವ ಬ್ಯಾಂಕ್ ಪ್ರಶಂಸೆ ವ್ಯಕ್ತಪಡಿಸಿದೆ.

ಕೃಷಿ ವಿಜ್ಞಾನ ಕೇಂದ್ರಗಳ ವಿಸ್ತರಣಾ ಚಟುವಟಿಕೆಗಳಿಂದ ಕೂರಿಗೆ ಭತ್ತದ ತಾಂತ್ರಿಕತೆ ಕಲ್ಯಾಣ ಕರ್ನಾಟಕ ಭಾಗದ ಸುಮಾರು 79500 ಹೇ. ಪ್ರದೇಶದಲ್ಲಿ ಹಂಚಿದೆ. ಕೃಷಿ ವಿಜ್ಞಾನ ಕೇಂದ್ರಗಳ ಮುಖಾಂತರ 935 ಹೇ. ಪ್ರದೇಶದಲ್ಲಿ ಮುಂಚೂಣಿ ಪ್ರಾತ್ಯಾಕ್ಷಿಕೆಗಳನ್ನು ಕೈಗೊಳ್ಳಲಾಗಿದೆ ಈ ಪ್ರಾತ್ಯಕ್ಷಿಗಳ ಮುಖಾಂತರ ಸಿರಿಧಾನ್ಯಗಳು, ಎಣ್ಣೆಕಾಳುಗಳ, ದ್ವಿದಳಧಾನ್ಯಗಳು ಮತ್ತು ಕೃಷಿ ಮಾರುಕಟ್ಟೆ ತಂತ್ರಜ್ಞಾನಗಳ ಬಗೆಗೆ ಮಾಹಿತಿ ಕೊಡಲಾಗಿದೆ.

ಕೃಷಿಯಲ್ಲಿ ಯಾಂತ್ರೀಕರಣಕ್ಕಾಗಿ ಅನೇಕ ಯಂತ್ರಗಳ ಅಭಿವೃದ್ಧಿ, ಮಣ್ಣು ಮತ್ತು ನೀರು ಸಂರಕ್ಷಣಾ ತಂತ್ರಜ್ಞಾನಗಳು, ಸಂಸ್ಕರಣಾ ತಂತ್ರಜ್ಞಾನಗಳನ್ನೂ ಸಹ ರೈತರಿಗೆ ನೀಡಿದ ಹೆಮ್ಮೆ ನಮ್ಮದು. ಸಮಗ್ರ ಕೃಷಿ ಪದ್ಧತಿಯ ಪ್ರಾತ್ಯಕ್ಷಿಕೆಗಳಿಂದ ರೈತರ ಜೀವನ ಸುಸ್ಥಿರತೆಯನ್ನು ಕಾಪಾಡಿಕೊಂಡು ಹೋಗಬಹುದು ಎಂದು ಮನದಟ್ಟು ಮಾಡಿದ ನಂತರ ಅದೇ ತಂತ್ರಜ್ಞಾನವನ್ನು ಆರೂ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಭತ್ತದಲ್ಲಿ ಕಡಿಮೆ ನೀರು ಕಡಿಮೆ ಖರ್ಚು, ಕಡಿಮೆ ಗೊಬ್ಬರ ಬಳಕೆ ಮಾಡಿ ಅದಾಯ ಹೆಚ್ಚಿಸುವ ಕೂರಿಗೆ ಬಿತ್ತನೆ ತಂತ್ರಜ್ಞಾನವನ್ನು 50,000 ಎಕರೆಗಳಲ್ಲಿ ತೋರಿಸಲಾಗಿದೆ.

ಕೃಷಿ ತಾಂತ್ರಿಕ ಮಹಾವಿದ್ಯಾಲಯದ, ಕೃಷಿ ಯಂತ್ರೋಪಕರಣ ಮತ್ತು ಶಕ್ತಿ ತಾಂತ್ರಿಕತೆ ವಿಭಾಗದಲ್ಲಿ ಅಭಿವೃದ್ಧಿಪಡಿಸಿದ ರಿಮೋಟ್ ಆಧಾರಿತ ಸೌರಶಕ್ತಿ ಚಾಲಿತ ಸಿಂಪರಣಾ ಯಂತ್ರ ಹಾಗೂ ಸಂಸ್ಕರಣೆ ಮತ್ತು ಆಹಾರ ತಂತ್ರಜ್ಞಾನ ವಿಭಾಗದಲ್ಲಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳಾದ ಪವರ್ ಆಪರೇಟೆಡ್ ಅಲೋವೆರಾ ಲೀಫ್ ಸ್ಲೈಸಿಂಗ್ ಮಷಿನ್, ಮತ್ತು ಕೈಟೋಸನ್ ಜಿಂಕ್ ಆಕ್ಸೈಡ್ ನ್ಯಾನೋ ಅಬ್ಸಾರ್ಬೆಂಟ್ ಕೋಟೆಡ್ ಸ್ಯಾಂಡ್ ಫಿಲ್ಟರ್ ಬೆಡ್ ಫಾರ್ ಡೈರಿ ಇಂಡಸ್ಟ್ರಿ ವೇಸ್ಟ್ ವಾಟರ್ ತಂತ್ರಜ್ಞಾನಗಳಿಗೆ ಪೇಟೆಂಟ್ ಪಡೆಯಲಾಗಿದೆ.

ಇದಲ್ಲದೇ, 2018-19 ನೇ ಸಾಲಿನಲ್ಲಿ ಶಿಕ್ಷಕ ಮತ್ತು ವಿಜ್ಞಾನಿಗಳು ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸಿದ್ದು ಅದರಲ್ಲಿ ರಿಮೋಟ್ ಆಧಾರಿತ ಸೌರಶಕ್ತಿ ಚಾಲಿತ ಸಿಂಪರಣಾ ಯಂತ್ರ, ಡ್ರೋಣ್ ಚಾಲಿತ ಸಿಂಪರಣಾ ಯಂತ್ರ, ಸಣ್ಣ ಟ್ರ್ಯಾಕ್ಟರ್ ಚಾಲಿತ ಕಳೆ ತಗೆಯುವ ಮತ್ತು ಗೊಬ್ಬರ ಬಿತ್ತುವ ಯಂತ್ರ ಇವುಗಳನ್ನು ರೈತರ ಅನುಕೂಲಕ್ಕಾಗಿ ಬಿಡುಗಡೆ ಮಾಡಲಾಗಿದೆ.

2013-14 ರಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ಆಹಾರ ಸರಬರಾಜು ಸಂಸ್ಥೆಯ ಆರ್ಥಿಕ ಸಹಾಯದಿಂದ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಕೀಟನಾಶಕಗಳ ಶೇಷ ಮತ್ತು ಆಹಾರ ಗುಣಮಟ್ಟ ವಿಶ್ಲೇಷಣೆ ಪ್ರಯೋಗಾಲಯವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸ್ಥಾಪಿಸಲಾಯಿತು. ಈ ಪ್ರಯೋಗಾಲಯವು ಜುಲೈ 12, 2018 ರಂದು National Accreditation Board for Testing and Calibration Laboratories (NABL) ¢AzÀ ISO/IEC 17025:2005 General Requirements for the Competence of Testing and Calibration Laboratories ಮಾನ್ಯತೆಯನ್ನು ಪಡೆದಿದೆ. ಂಂಃಐ ಭಾರತ ಸರಕಾರದ ಒಂದು ಸ್ವಾಯತ್ತತ ಸಂಸ್ಥೆಯಾಗಿದ್ದು ವೈಜ್ಞಾನಿಕ ವಿಶ್ಲೇಷಣೆ ಕ್ಷೇತ್ರದಲ್ಲಿ ಪರೀಕ್ಷೆ ಮತ್ತು ಮಾಪನಾಂಕ ಪ್ರಮಾಣೀಕರಿಸುವ ರಾಷ್ಟ್ರೀಯ ಮಾನ್ಯತಾ ಮಂಡಳಿಯಾಗಿದೆ. ಇದರ ಅಡಿಯಲ್ಲಿ ಬರುವ ISO/IEC 17025:2005 ರಾಸಾಯನಿಕಗಳ ವಿಶ್ಲೇಷಣೆಯಲ್ಲಿ ಕೃವಿವಿ., ರಾಯಚೂರಿನ ಪ್ರಯೋಗಾಲಯವು ಹಲವು ಪ್ರಕಾರದ ಪರೀಕ್ಷೆ ಮತ್ತು ಮೌಲ್ಯಮಾಪನದಲ್ಲಿ ಭಾಗವಹಿಸಿ ಪೀಡಡೆನಾಶಕಗಳ ಅವಶೇಷ, ಭಾರವಾದ ಲೋಹಗಳ/ಧಾತುರೂಪಗಳ ಮತ್ತು ಆಹಾರ ಗುಣ ವಿಶ್ಲೇಷಣೆಯಲ್ಲಿ ಪ್ರಮಾಣೀಕರಿಸಿದ ಮಾನ್ಯತೆಯನ್ನು ಪಡೆದಿದೆ.

ಬೀಜೋತ್ಪಾದನೆ:

ಈ ಭಾಗದ ಪ್ರಮುಖ ಬೆಳೆಗಳಾದ ಭತ್ತ, ಜೋಳ, ತೊಗರಿ, ಕಡಲೆ, ಹೆಸರು, ಉದ್ದು, ಶೇಂಗಾ, ಸೂರ್ಯಕಾಂತಿ, ಕುಸುಬೆ ಮತ್ತು ಸೋಯಾ ಅವರೆಗಳಲ್ಲಿ ಬೀಜೋತ್ಪಾದನೆ ಚಟುವಟಿಕೆ ಕೈಗೊಂಡಿದ್ದು ಉತ್ತಮ ಗುಣಮಟ್ಟದ ಬೀಜ, ಉತ್ತಮ ದರ ಹಾಗೂ ಸಮಯಕ್ಕೆ ಸರಿಯಾಗಿ ರೈತರಿಗೆ ಸಿಗುವಂತೆ ಮಾಡಿದೆ. ವಿವಿಧ ಬೆಳೆಗಳ ಬೀಜೋತ್ಪಾದನೆಯಲ್ಲಿ ಪ್ರಸಕ್ತ ವರ್ಷ ಒಟ್ಟು 10,664 ಕ್ವಿಂಟಾಲ್ ಬೀಜೋತ್ಪಾದನೆಯನ್ನು ಮಾಡಲಾಗಿದೆ. ಪ್ರತಿ ವರ್ಷ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಬೀಜಮೇಳಗಳನ್ನು ಹಮ್ಮಿಕೊಂಡು ರೈತರಿಗೆ ಮಾಹಿತಿ ನೀಡಲಾಗುತ್ತದೆ.

ಕೃಷಿ ವಿಸ್ತರಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಪ್ರಸ್ತುತ 7 ಕೃಷಿ ವಿಜ್ಞಾನ ಕೇಂದ್ರಗಳು ಮತ್ತು 6 ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ವಿಸ್ತರಣಾ ಚಟುವಟಿಕೆಗಳಿಂದ ರೈತ ಸ್ನೇಹಿ, ಇಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುವಂತಹ ಹಲವಾರು ತಂತ್ರಜ್ಞಾನಗಳನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ವಿಸ್ತರಣಾ ಚಟುವಟಿಕೆಗಳೂ ನಿರಂತರವಾಗಿ ನಡೆಯುತ್ತಿವೆ.

ರೈತರಿಗೆ ಕೂರಿಗೆ ಭತ್ತದ ತಾಂತ್ರಿಕತೆಯು ಕಲ್ಯಾಣ-ಕರ್ನಾಟಕದ ಭಾಗದ ಸುಮಾರು 87,200 ಹೆ. ಪ್ರದೇಶದಲ್ಲಿ ಹರಡಿಸಿದೆ. ತೊಗರಿಯಲ್ಲಿ ಕೈಗಾಳು/ನಾಟಿ ಪದ್ಧತಿ ತಾಂತ್ರಿಕತೆಯನ್ನು ಕಲಬುರಗಿ ಮತ್ತು ಬೀದರ ಜಿಲ್ಲೆಯಲ್ಲಿ ಸುಮಾರು 4000 ಹೆ. ಪ್ರದೇಶದಲ್ಲಿ ಅಳವಡಿಸಿಕೊಳ್ಳಲು ಉತ್ತೇಜಿಸಲಾಗಿದೆ.

ಹತ್ತಿಯಲ್ಲಿ ಗುಲಾಬಿ ಕಾಯಿಕೊರಕ ಹುಳುವಿನ ನಿಯಂತ್ರಣಕ್ಕಾಗಿ ಕಲ್ಯಾಣ-ಕರ್ನಾಟಕ ಪ್ರದೇಶದಾದ್ಯಂತ ಕೃಷಿ ಇಲಾಖೆಯ ಸಹಯೋಗದೊಂದಿಗೆ ಸಮೀಕ್ಷೆ, ಕೈಗೊಂಡು, ರೈತರಿಗೆ ಹತ್ತಿಯಲ್ಲಿ ಸಮಗ್ರ ಕೀಟ ನಿಯಂತ್ರಣ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಪಲ್ಸ್ ಮ್ಯಾಜಿಕ್ ತಾಂತ್ರಿಕತೆಯನ್ನು ಕಲಬುರಗಿ ಜಿಲ್ಲೆಯಲ್ಲಿ ಸುಮಾರು 6000 ಹೆ. ಪ್ರದೇಶದಲ್ಲಿ ರೈತರು ಅಳವಡಿಸಿಕೊಂಡಿದ್ದಾರೆ. ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ ಹೆಸರಿನ ತಳಿ ಬಿ.ಜಿ.ಎಸ್-9 ಬೀದರ ಜಿಲ್ಲೆಯಲ್ಲಿ ಸುಮಾರು 2300 ಹೆ. ಪ್ರದೇಶದಲ್ಲಿ ಹರಡಿದೆ.

ತೊಗರಿಯಲ್ಲಿ ಕುಡಿ ಚಿವುಟುವಿಕೆ ತಾಂತ್ರಿಕತೆಯನ್ನು ಕಲಬುರಗಿ ಜಿಲ್ಲೆಯಲ್ಲಿ ಸುಮಾರು 4000 ಹೆ. ಪ್ರದೇಶದಲ್ಲಿ ರೈತರು ಅಳವಡಿಸಿಕೊಂಡಿದ್ದಾರೆ. ನಂತರ ನೂತನ ತಾಂತ್ರಿಕತೆಗಳನ್ನು 847 ಹೆ. ಪ್ರದೇಶದಲ್ಲಿ ಮಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು 2341 ರೈತರನ್ನು ಉತ್ತೇಜಿಸಲಾಗಿದೆ

ಕೃಷಿ ವಿಜ್ಞಾನ ಕೇಂದ್ರಗಳ ಮಣ್ಣು ಪರೀಕ್ಷೆ ಕೇಂದ್ರಗಳಲ್ಲಿ 4688 ಮಣ್ಣು ಹಾಗೂ 2082 ನೀರಿನ ಮಾದರಿಗಳನ್ನು ವಿಶ್ಲೇಷಿಸಿ ರೈತರಿಗೆ ಮಾಹಿತಿ ನೀಡಲಾಗಿದೆ. ಹಾಗೂ ಎಲ್ಲ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳಿಗೆ ತರಬೇತಿ, ಪ್ರಾತ್ಯಕ್ಷಿಕೆ, ತಿಳುವಳಿಕೆ ಶಿಬಿರ, ಆಕಾಶವಾಣಿ ಮತ್ತು ದೂರದರ್ಶನದ ಮೂಲಕ ರೈತರಿಗೆ ನಿರಂತರವಾಗಿ ಮಾಹಿತಿ ಒದಗಿಸಲಾಗುತ್ತಿದೆ.

ತಂತ್ರಜ್ಞಾನದ ಬಳಕೆ ಮಾಡಿಕೊಂಡು ನಿಯಮಿತವಾಗಿ ಸಮಸ್ಯಾತ್ಮಕ ರೈತರ ತಾಕುಗಳ ಭೇಟಿ, ದೂರವಾಣಿ ಮುಖಾಂತರ ಸಲಹೆ, ಕೃಷಿ ಸಂಬಂಧಿತ ಮಾರ್ಗದರ್ಶನ ನೀಡುವುದರ ಜೊತೆಗೆ ರೇಡಿಯೋ (ಸುಮಾರು 90 ಕಾರ್ಯಕ್ರಮಗಳು), ದೂರದರ್ಶನ (ಸುಮಾರು 60 ಕಾರ್ಯಕ್ರಮಗಳು), ಮೊಬೈಲ್ ಸಂದೇಶಗಳು (30,000), ವಾಟ್ಸಪ್ ಸಂದೇಶಗಳು (2,50,000) ಮುಖಾಂತರ ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನಗಳನ್ನು ರೈತರಿಗೆ ತಲುಪಿಸಲಾಗುತ್ತಿದೆ.

ರಾಸುಗಳಿಗೆ ಬರುವ ಉಣ್ಣೆ ಬಾಧೆಯನ್ನು ನಿಯಂತ್ರಿಸುವ ತಾಂತ್ರಿಕತೆಯನ್ನು ವಿಶ್ವವಿದ್ಯಾಲಯವು ಪಶುವೈದ್ಯಕೀಯ ಇಲಾಖೆ, ಬಳ್ಳಾರಿ ಮತ್ತು ಬಿ.ಎ.ಐ.ಎಫ್., ಸಂಸ್ಥೆಗಳ ಸಹಕಾರದಲ್ಲಿ ರೈತರಿಗೆ ಮಾಹಿತಿ ನೀಡಲಾಗಿದೆ.

ಕೃಷಿ ವಿಶ್ವವಿದ್ಯಾಲಯವು ಕಲ್ಯಾಣ-ಕರ್ನಾಟಕ ಪ್ರದೇಶದ ಪ್ರತಿ ರೈತ ಸಂಪರ್ಕ ಕೇಂದ್ರಗಳಿಗೆ ಒಬ್ಬ ವಿಜ್ಞಾನಿಯಂತೆ ಸುಮಾರು 162 ರೈತ ಸಂಪರ್ಕ ಕೇಂದ್ರಗಳಿಗೆ ನಿಯೋಜನೆಗೊಳಿಸಿ ಗ್ರಾಮ ಮಟ್ಟದಲ್ಲಿ ಕೃಷಿ ಸಂಬಂಧಿತ ಸಲಹೆ / ಮಾಹಿತಿಯನ್ನು ನೀಡಲಾಗುತ್ತಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ದೇಸೀ

ಕಾರ್ಯಕ್ರಮದ ಮೂಲಕ ಕೃಷಿ ಪರಿಕರಗಳ ಮಾರಾಟಗಾರರಿಗೆ ತರಗತಿಗಳನ್ನು ತೆಗೆದುಕೊಂಡು ತರಬೇತಿ ನೀಡಿ ಡಿಪ್ಲೊಮ ಪ್ರಮಾಣ ಪತ್ರ ನೀಡಲಾಗುತ್ತಿದೆ.

ನಮ್ಮ ನಾಡಿಗೆ, ನಮ್ಮ ರೈತರಿಗೆ ಕೃಷಿ ವಿಜ್ಞಾನದಲ್ಲಿ ನಡೆದ ಹೊಸ ಪ್ರಯೋಗಗಳ ತಲುಪಿಸುವ ನಿಟ್ಟಿನಲ್ಲಿ ಕೃಷಿ ಪ್ರದೀಪಿಕೆ ಎಂಬ ತ್ರೈಮಾಸಿಕವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಿಂದ 2009 ರಿಂದ ಪ್ರಕಟಿಸುತ್ತಿದ್ದು, ಈ ಸಂಚಿಕೆ ರಾಜ್ಯಾದ್ಯಂತ ವಿತರಣೆಯಾಗುತ್ತಿದ್ದು, ಇದುವರೆಗೆ 1776 ಚಂದಾದಾರರನ್ನು ಹೊಂದಿದೆ.

ಸಮಾಜ ಸೇವಾ ಕಾರ್ಯಕ್ರಮಗಳು:

ರಾಷ್ಟ್ರೀಯ ಸೇವಾ ಯೋಜನೆಯಲ್ಲಿಯೂ ಸಹ ವಿಶ್ವವಿದ್ಯಾಲಯ ಅತ್ಯಂತ ಸಕ್ರೀಯವಾಗಿ ಭಾಗವಹಿಸಿ ವನಮಹೋತ್ಸವ, ಪಲ್ಸ ಪೋಲಿಯೋ ಜಾಗೃತಿ ಕಾರ್ಯಕ್ರಮ, ಸದ್ಭಾವನಾ ರ್ಯಾಲಿ, ಏಡ್ಸ ಜಾಗೃತಿ ಕಾರ್ಯಕ್ರಮ, ವ್ಯಕ್ತಿತ್ವ ವಿಕಸನ ಶಿಬಿರಗಳ ಮುಖಾಂತರ ಸಮಾಜಕ್ಕೆ ಕಾಣಿಕೆ ನೀಡುತ್ತಿದೆ. ರಾಷ್ಟ್ರೀಯ ಸೇವಾ ಯೋಜನೆಯನ್ನು ನಮ್ಮ ವಿಶ್ವವಿದ್ಯಾಲಯ, ಸ್ನಾತಕ ವಿದ್ಯಾರ್ಥಿಗಳಿಗೆ ಪಠ್ಯೇತರ ವಿಷಯವನ್ನಾಗಿ ಅಂಗೀಕರಿಸಿದೆ. ಒಟ್ಟಾರೆ, ಈ ಭಾಗದ ರೈತರ ಸರ್ವ ಸಮಸ್ಯೆಗಳಿಗೂ ಸ್ಪಂದಿಸುವ ಸಂಕಲ್ಪದಿಂದ ಮುನ್ನುಗ್ಗುವ ಉತ್ಸಾಹ ವಿಶ್ವವಿದ್ಯಾಲಯಕ್ಕಿದ್ದು, ಅದು ಸಾಕಾರಗೊಳ್ಳುವಲ್ಲಿ ಸಮಸ್ತ ಸಿಬ್ಬಂದಿ ಕಂಕಣಬದ್ಧರಾಗಿದ್ದು, ಬರುವ ದಿನಗಳಲ್ಲಿ ರಾಯಚೂರು ವಿಶ್ವವಿದ್ಯಾಲಯ "ರೈತರ ವಿಶ್ವವಿದ್ಯಾಲಯ"ವಾಗಿ ಪ್ರಕಾಶಮಾನವಾಗುವುದರಲ್ಲಿ ಸಂದೇಹವಿಲ್ಲ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

2019-20 ನೇ ಸಾಲಿನ ವಾರ್ಷಿಕ ವರದಿ (ಫೆಬ್ರುವರಿ, 2020 ರವರೆಗೆ)

I ಶಿಕ್ಷಣ

ವಿಶ್ವವಿದ್ಯಾನಿಲಯವು ಆರು ಕಾಲೇಜುಗಳನ್ನು ಹೊಂದಿದ್ದು ಕೃಷಿ ವಿಜ್ಞಾನ, ತಂತ್ರಜ್ಞಾನ ಹಾಗೂ ಸಂಬಂಧಿತ ವಿಜ್ಞಾನ ಕ್ಷೇತ್ರಗಳಲ್ಲಿ ಶಿಕ್ಷಣ ನೀಡುವ ತನ್ನ ಆಧ್ಯಾದೇಶದ ಕಾರ್ಯವನ್ನು ಕೈಗೊಳ್ಳಲು ತನ್ನ ವ್ಯಾಪ್ತಿಯಲ್ಲಿ ಕರ್ನಾಟಕದ 10 ದಕ್ಷಿಣ ಜಿಲ್ಲೆಗಳನ್ನು ಹೊಂದಿದೆ. ಪ್ರಸ್ತುತ ವಿಶ್ವವಿದ್ಯಾನಿಲಯವು ಬಿ.ಎಸ್ಸಿ.(ಕೃಷಿ), ಬಿ.ಎಸ್ಸಿ.(ರೇಷ್ಮೆ ಕೃಷಿ), ಬಿ.ಎಸ್ಸಿ. (ಕೃಷಿ ಮಾರುಕಟ್ಟೆ ಮತ್ತು ಸಹಕಾರ), ಬಿ.ಟೆಕ್.(ಜೈವಿಕ ತಂತ್ರಜ್ಞಾನ), ಬಿ.ಟೆಕ್.(ಕೃಷಿ ಇಂಜಿನಿಯರಿಂಗ್) ಮತ್ತು ಬಿ.ಟೆಕ್.(ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ) ಎಂಬ ಆರು ಸ್ನಾತಕ ಪದವಿ ಕಾರ್ಯಕ್ರಮಗಳನ್ನು 22 ವಿಷಯಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು 15 ವಿಷಯಗಳಲ್ಲಿ ಡಾಕ್ಟೊರಲ್ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

ಪ್ರಮುಖ ಸಾಧನೆಗಳು:

- ಭಾರತೀಯ ಕೃಷಿ ಅನುಸಂಧಾನ ಪರಷತ್ತು ನವದೆಹಲಿ ಇವರು ಪದವಿ ವಿದ್ಯಾರ್ಥಿಗಳ ಸ್ನಾತಕ ಪದವಿಗೆ ಪ್ರವೇಶ ಪಡೆಯಲು ನಡೆಸುವ ಅಖಿಲ ಭಾರತ ಪ್ರವೇಶ ಪರೀಕ್ಷೆಯಲ್ಲಿ (ಜೆ.ಆರ್.ಎಫ್.) ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು 2019ನೇ ಸಾಲಿನಲ್ಲಿ ಕೃಷಿ ವಿಜ್ಞಾನ ಹಾಗೂ ಇಂಜಿನಿಯರಿಂಗ್ ಮತ್ತು ತಾಂತ್ರಿಕತೆ ವರ್ಗಗಳಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ.
- ವಿಶ್ವವಿದ್ಯಾನಿಲಯದ ಎಲ್ಲಾ ಅಂತರರಾಷ್ಟ್ರೀಯ ಚಟುವಟಿಕೆಗಳನ್ನು ಸಂಘಟಿಸಲು ಜಿ.ಕೆ.ವಿ.ಕೆ., ಬೆಂಗಳೂರಿನ ವಿದ್ಯಾರ್ಥಿ ಕಲ್ಯಾಣ ನಿರ್ದೇಶನಾಲಯದಲ್ಲಿ ಅಂತರರಾಷ್ಟ್ರೀಯ ಕೇಂದ್ರವನ್ನು ಸ್ಥಾಪಿಸಲಾಗಿದೆ
- ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ವಿದ್ಯಾರ್ಥಿಗಳು ರಾಯಪುರದ ಇಂದಿರಾ ಗಾಂಧಿ ಕೃಷಿ ವಿಜ್ಞಾನದಲ್ಲಿ ನಡೆದ 20ನೇ ಅಖಿಲ ಭಾರತ ಅಂತರ ಕೃಷಿ ವಿಶ್ವವಿದ್ಯಾನಿಲಯಗಳ ಯುವಜನೋತ್ಸವದಲ್ಲಿ ಭಾಗವಹಿಸಿ ಜಾನಪದ ನೃತ್ಯ ಮತ್ತು ಏಕಪಾತ್ರಾಭಿನಯದಲ್ಲಿ ಮೊದಲನೇ ಸ್ಥಾನ ಪಡೆದಿರುತ್ತಾರೆ
- ಕೃಷಿಯಲ್ಲಿ ಉದಯೋನ್ಮುಖ ಸಮಸ್ಯೆಗಳನ್ನು ಪರಿಹರಿಸಲು, ಅಗತ್ಯ ಆಧಾರಿತ ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೊ. ನಂಜುಂಡಸ್ವಾಮಿ ಸಂಶೋಧನಾ ಪೀಠವನ್ನು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲಾಗಿದೆ
- ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ ಮತಿಯಿಂದ ವಿಶೇಷ ವಿಶ್ವವಿದ್ಯಾನಿಲಯದ ವಿಭಾಗದಲ್ಲಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ಪಂಚತಾರ ಸಂಸ್ಥೆ ಪ್ರಶಸ್ತಿ ನೀಡಲಾಗಿದೆ.

- ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕೃಷಿ ಹವಾಮಾನ ವಿಭಾಗವು 2019 ನೇ ಸಾಲಿನಲ್ಲಿ ಇಡೀ ದೇಶದಲ್ಲಿನ ಹವಾಮಾನ ಸಂಶೋಧನಾ ಕೇಂದ್ರಗಳಲ್ಲಿ ಅತ್ಯುತ್ತಮ ಕೇಂದ್ರವೆಂದು ಪ್ರಶಸ್ತಿ ಪಡೆದಿರುತ್ತದೆ

- ಕೃಷಿ ವಿಶ್ವವಿದ್ಯಾನಿಲಯದ ಪರೀಕ್ಷಾ ಕೇಂದ್ರದಿಂದ ಸ್ನಾತಕ ವಿದ್ಯಾರ್ಥಿಗಳಿಗೆ ಕಾಗದರಹಿತ (Paperless) ಶುಲ್ಕ ಪಾವತಿ ಹಾಗೂ ಸೆಮಿಸ್ಟರ್ ನೊಂದಣಿಗೆ ಮೊಬೈಲ್ ಆಪ್ ತಂತ್ರಾಂಶವನ್ನು ಬಿಡುಗಡೆಗೊಳಿಸಿರುತ್ತದೆ

- ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ದಲ್ಲಿ 2020 ರ ಜನವರಿ 3-7 ರಂದು 107 ನೇ ಭಾರತೀಯ ವಿಜ್ಞಾನ ಕಾಂಗ್ರೆಸ್ ಅನ್ನು ಆಯೋಜಿಸಲಾಗಿತ್ತು, ಜನವರಿ 3 ರಂದು ಭಾರತದ ಗೌರವಾನ್ವಿತ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಜಿ ಅವರು ಶ್ರೀ ಬಿ. ಎಸ್. ಯಡಿಯೂರಪ್ಪ, ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಮತ್ತು ಕೇಂದ್ರ ಸರ್ಕಾರದ ವಿಜ್ಞಾನ ಹಾಗೂ ತಂತ್ರಜ್ಞಾನ, ಭೂ ವಿಜ್ಞಾನ ಮತ್ತು ಕುಟುಂಬ ಆರೋಗ್ಯ ಹಾಗೂ ಕಲ್ಯಾಣ ಸಚಿವರಾದ ಡಾ. ಹರ್ಷ್‌ವರ್ಧನ್ ಅವರ ಉಪಸ್ಥಿತಿಯಲ್ಲಿ ಉದ್ಘಾಟಿಸಿದರು.

2019-20ನೇ ಸಾಲಿನ ಪ್ರವೇಶಾತಿ ವಿವರಗಳು: ಈ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕ ಶೈಕ್ಷಣಿಕ ಕಾರ್ಯಕ್ರಮಗಳಿಗೆ 107 ಭಾರತೀಯ ಕೃಷಿ ಅನುಸಂಧಾನ ಪರಿಷತ್ ವಿದ್ಯಾರ್ಥಿಗಳಿಗೆ ಹಾಗೂ 51 ಅನಿವಾಸಿ ಭಾರತೀಯ ವಿದ್ಯಾರ್ಥಿಗಳನ್ನೊಳಗೊಂಡಂತೆ 956 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳಿಗೆ 319 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದ್ದು ಅದರಲ್ಲಿ 77 ಭಾರತೀಯ ಕೃಷಿ ಅನುಸಂಧಾನ ಪರಿಷತ್/ಜೆ.ಎನ್.ಯು. ವಿದ್ಯಾರ್ಥಿಗಳು 04 ಅನಿವಾಸಿ ಭಾರತೀಯ ವಿದ್ಯಾರ್ಥಿಗಳು ಮತ್ತು 02 ವಿದೇಶಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಡಾಕ್ಟೊರಲ್ ಪದವಿ ಕಾರ್ಯಕ್ರಮಕ್ಕೆ 125 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದು ಅವರಲ್ಲಿ 23 ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ವಿದ್ಯಾರ್ಥಿಗಳು ಮತ್ತು 03 ವಿದೇಶಿ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಮಂಡ್ಯ ಆವರಣದ ಎರಡು ವರ್ಷದ ಕೃಷಿಯಲ್ಲಿ ಡಪ್ಲೊಮಾ ಸ್ನಾತಕ ಕೋರ್ಸ್‌ಗೆ 50 ವಿದ್ಯಾರ್ಥಿಗಳು ಪ್ರವೇಶವನ್ನು ಪಡೆದಿದ್ದಾರೆ.

ವಿದ್ಯಾರ್ಥಿವೇತನಗಳ ವಿವರ : ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ವಿಶ್ವವಿದ್ಯಾನಿಲಯವು 80 ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ರೆಸಿಡೆಂಟ್ ಮೆರಿಟ್ ವಿದ್ಯಾರ್ಥಿವೇತನ, 398 ಸಾಮಾನ್ಯ ಅರ್ಹತಾ ವಿದ್ಯಾರ್ಥಿವೇತನಗಳು ಹಾಗು 08 ದಾನಿಗಳ ವಿದ್ಯಾರ್ಥಿವೇತನಗಳನ್ನು ಸ್ನಾತಕ ಪದವಿಯ ವಿದ್ಯಾರ್ಥಿಗಳಿಗೆ ನೀಡಿದೆ. ಸ್ನಾತಕೋತ್ತರ ಪದವಿಗಳ ವಿದ್ಯಾರ್ಥಿಗಳಿಗೆ 78 ಕೃಷಿ ವಿಶ್ವವಿದ್ಯಾನಿಲಯವು ಸ್ಥಾನಿಕ ಅರ್ಹತಾ ವಿದ್ಯಾರ್ಥಿವೇತನ ಮತ್ತು 04 ದಾನಿಗಳ ಶಿಷ್ಯವೇತನವನ್ನು ನೀಡಿದೆ. ಜಿ.ಕೆ.ವಿ.ಕೆ. ಆವರಣದಲ್ಲಿ ಪಿಎಚ್.ಡಿ. ಪದವಿ ವಿದ್ಯಾರ್ಥಿಗಳಿಗೆ 24 ಕೃಷಿ ವಶ್ವವಿದ್ಯಾನಿಲಯದ ಸ್ಥಾನಿಕ ಅರ್ಹತಾ ವಿದ್ಯಾರ್ಥಿವೇತನವನ್ನು ನೀಡಿದೆ.

2019-20ನೇ ಸಾಲಿನಲ್ಲಿ ಪದವಿ ಪಡೆಯುತ್ತಿರುವವರ ವಿವರ: ಮಾರ್ಚ್, 2020ರ ಕೊನೆಯ ವಾರದಲ್ಲಿ ನಡೆಯುವ 54ನೇ ಘಟಿಕೊತ್ಸವದಲ್ಲಿ ಉತ್ತೀರ್ಣರಾದ 638 ಸ್ನಾತಕ, 280 ಸ್ನಾತಕೋತ್ತರ ಹಾಗೂ 68 ಡಾಕ್ಟರಲ್ ಪದವಿಗಳನ್ನು ನೀಡಲಾಗುವುದು.

II ಸಂಶೋಧನೆ :

ತಂತ್ರಜ್ಞಾನ ವಾಣಿಜ್ಯೀಕರಣ : ಕೃಷಿ ವಿಶ್ವವಿದ್ಯಾನಿಲಯದಿಂದ ಅಭಿವೃದ್ಧಿಪಡಿಸಲಾದ ಒಟ್ಟು 16 ತಂತ್ರಜ್ಞಾನಗಳನ್ನು ವಾಣಿಜ್ಯೀಕರಣಗೊಳಿಸಲಾಗಿದೆ

- ಕೃಷಿ ವಿಶ್ವವಿದ್ಯಾನಿಲಯದಿಂದ ಅಭಿವೃದ್ಧಿಪಡಿಸಲಾದ ಒಟ್ಟು ಐದು ಆಹಾರ ಪದಾರ್ಥಗಳು (ತೆಂಗಿನಕಾಯಿ ಹಿಟ್ಟಿನಕುಕ್ಕಿಸ್, ತೆಂಗಿನಕಾಯಿ ಹಿಟ್ಟಿನ ಮಸಾಲ ಬಿಸ್ಕತ್ತು, ತೆಂಗಿನಕಾಯಿ ಹಿಟ್ಟಿನಕೇಕ್, ತೆಂಗಿನಕಾಯಿ ಹಿಟ್ಟಿನರಸ್ಕ್ ಮತ್ತುಅಧಿಕ ನಾರುಯುಕ್ತ ಕಿರುಧಾನ್ಯ ಆಧಾರಿತ ಆಹಾರ ಮಿಶ್ರಣ), ಮೂರು ಯಂತ್ರೋಪಕರಣಗಳು (ಉನ್ನತ ಸಾಮರ್ಥ್ಯದ ಹುಣಸೆಹಣ್ಣಿನ ಸಿಪ್ಪೆ ತೆಗೆಯುವಯಂತ್ರ, ಹೊಂಗೆ ಸಿಪ್ಪೆ ಸುಲಿಯುವಯಂತ್ರ, ಸೂರ್ಯಕಾಂತಿ ಸಿಪ್ಪೆ ಸುಲಿಯುವಯಂತ್ರ) ಹಾಗೂ ಒಂದು ಸಂಕರಣಾ ತಳಿಯನ್ನು (ಭತ್ತದ ಸಂಕರಣ ತಳಿ - ಕೆ.ಆರ್.ಹೆಚ್ 4) ರಾಷ್ಟ್ರೀಯ ಸಂಶೋಧನಾ ನಿಗಮ, ನವದೆಹಲಿ ಇವರ ಮುಖಾಂತರ ವಾಣಿಜ್ಯೀಕರಣಗೊಳಿಸಲಾಗಿದೆ.
- ಆರು ಆಹಾರ ಪದಾರ್ಥಗಳು (ಉತ್ಕೃಷ್ಟರಾಗಿ ಶ್ಯಾವಿಗೆ, ಅಶ್ವಗಂಧದ ಬೇರಿನ ಪುಡಿಯೊಂದಿಗೆರಾಗಿ ಶ್ಯಾವಿಗೆ, ಅಮೃತ ಬಳ್ಳಿ ಎಲೆಪುಡಿಯೊಂದಿಗೆರಾಗಿ ಶ್ಯಾವಿಗೆ, ಮೊಳಕೆಕಟ್ಟಿದ ಮೆಂತ್ಯಕಾಳಿನ ಪುಡಿಯೊಂದಿಗೆರಾಗಿ ಶ್ಯಾವಿಗೆ, ಮಧುನಾಶಿನಿ ಎಲೆಪುಡಿಯೊಂದಿಗೆರಾಗಿ ಶ್ಯಾವಿಗೆ ಮತ್ತು ನೇರಳೆಹಣ್ಣಿನ ಬೀಜದ ಪುಡಿಯೊಂದಿಗೆರಾಗಿ ಶ್ಯಾವಿಗೆ) ಮತ್ತುಒಂದು ಸಂಕರಣಾ ತಳಿಯನ್ನು (ಜೋಳದ ಸಂಕರಣ ತಳಿ-ಎಂ.ಎ.ಹೆಚ್. 14-5) ಕೃಷಿ ವಿಶ್ವವಿದ್ಯಾನಿಲಯದಿಂದ ನೇರವಾಗಿ ವಾಣಿಜ್ಯೀಕರಣಗೊಳಿಸಲಾಗಿದೆ.
- ಅಧಿಕ ನಾರುಯುಕ್ತಕಿರುಧಾನ್ಯಆಧಾರಿತಆಹಾರ ಮಿಶ್ರಣ ಮತ್ತು ತೆಂಗಿನ ಕಾಯಿ ಹಿಟ್ಟಿನಕುಕ್ಕಿಸ್ ಈ ಎರಡು ಆಹಾರ ಉತ್ಪನ್ನಗಳು ಮಾತ್ರ ರಾಷ್ಟ್ರೀಯ ಸಂಶೋಧನಾ ನಿಗಮ, ನವದೆಹಲಿ ಇವರ ಮುಖಾಂತರ ಹಾಗೂ ಕೃಷಿ ವಿಶ್ವವಿದ್ಯಾನಿಲಯದಿಂದ ನೇರವಾಗಿಯು ಸಹ ವಾಣಿಜ್ಯೀಕರಣಗೊಳಿಸಲಾಗಿರುತ್ತವೆ.

ಬೀಜ ಉತ್ಪಾದನೆ: ರಾಷ್ಟ್ರೀಯ ಬೀಜ ಪ್ರಾಯೋಜನೆ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ರವರು 2019-20ನೇ ಸಾಲಿನಲ್ಲಿ 1242 ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳಿಂದ ಒಟ್ಟು 19,042 ಕ್ವಿಂಟಾಲ್‌ನಷ್ಟು ಉತ್ಪಾದನಾ ಗುರಿಯ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿದೆ. ಇಂದಿನ ವರೆಗೆ 868.5 ಕ್ವಿಂಟಾಲ್‌ನಷ್ಟು ಮೂಲ ಬೀಜಗಳ ಉತ್ಪಾದನೆ ಮತ್ತು 15,500 ಕ್ವಿಂಟಾಲ್‌ನಷ್ಟು ಗುಣಮಟ್ಟದ ಬೀಜಗಳನ್ನು ಉತ್ಪಾದಿಸಲಾಗಿದೆ.

III ವಿಸ್ತರಣೆ:

ವಿಸ್ತರಣಾ ನಿರ್ದೇಶನಾಲಯವು ರಾಜ್ಯ ಸರ್ಕಾರದ ವಿವಿಧ ಅಭಿವೃದ್ಧಿ ಇಲಾಖೆಗಳ ಪ್ರಯತ್ನಗಳಿಗೆ ಪೂರಕವಾಗಿ ಹಾಗೂ ಬೆಂಬಲವಾಗಿ ವಿಸ್ತರಣಾ ಚಟುವಟಿಕೆಗಳನ್ನು ತನ್ನ ವಿವಿಧ ಘಟಕಗಳ ಮೂಲಕ ಕಾರ್ಯಗತಗೊಳಿಸುತ್ತಿದೆ. 2019-20ನೇ ಸಾಲಿನಲ್ಲಿ 308 ತರಬೇತಿಗಳ ಮೂಲಕ 13934 ರೈತರು/ರೈತ ಮಹಿಳೆಯರಿಗೆ ತರಬೇತಿಯನ್ನು ನೀಡಿದೆ. 841 ವಿಸ್ತರಣಾ ಕಾರ್ಯಕರ್ತರಿಗೆ ಮತ್ತು 1156 ಸಿಬ್ಬಂದಿಗೆ ವಿವಿಧ ವಿಷಯಗಳಲ್ಲಿ ತರಬೇತಿ ನೀಡಿದೆ. ಮುಂದುವರೆದಂತೆ 16 ಕ್ಷೇತ್ರ ತಂತ್ರಜ್ಞಾನ ಪರಿಶೀಲನೆ, 58 ಮುಂಚೂಣಿ ಪ್ರಾತ್ಯಕ್ಷಿಕೆಗಳು, 113 ಪದ್ಧತಿ ಪ್ರಾತ್ಯಕ್ಷಿಕೆಗಳು, 107 ಸಮಸ್ಯಾತ್ಮಕ ಕ್ಷೇತ್ರಗಳ ಭೇಟಿ, 37 ಕ್ಷೇತ್ರೋತ್ಸವ, 699 ಕ್ಷೇತ್ರ ಭೇಟಿ, 16 ದೃಶ್ಯ-ಮಾಸಿಕ ಕಾರ್ಯಾಗಾರ, 21 ವಸ್ತು ಪ್ರದರ್ಶನಗಳನ್ನು ಆಯೋಜಿಸಿದೆ. 490 ಮೊಬೈಲ್ ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ರೈತರಿಗೆ ಕಳುಹಿಸಲಾಗಿದೆ. ಇದಲ್ಲದೆ 3494 ಮಣ್ಣು ಮತ್ತು 1532 ನೀರಿನ ಮಾದರಿಗಳನ್ನು ವಿಶ್ಲೇಷಿಸಿ ಸಲಹೆ ನೀಡಲಾಗಿದೆ. ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ ಮತ್ತು ಕೃಷಿ ವಿಜ್ಞಾನ ಕೇಂದ್ರಗಳು 18464 ರೈತರಿಗೆ ಸಲಹಾ ಸೇವೆಗಳನ್ನು ನೀಡಿದೆ. ಒಟ್ಟು 36.41 ಕ್ವಿ. ಬಿತ್ತನೆ ಬೀಜ ಹಾಗೂ 76680 ಸಸಿಗಳನ್ನು ಉತ್ಪಾದಿಸಿ ಮಾರಾಟ ಮಾಡಲಾಗಿದೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಮತ್ತು ಮ್ಯಾನೇಜ್, ಹೈದರಾಬಾದ್ ಇವರ ಸಹಯೋಗದೊಂದಿಗೆ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದಡಿ ಕ್ರಮವಾಗಿ 25 ಮತ್ತು 6 ದಿನಗಳ ಅವಧಿಯ 10 ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದೆ. ದೂರ ಶಿಕ್ಷಣದಡಿ ವಿವಿಧ ಕೋರ್ಸುಗಳಾದ ಒಂದು ವರ್ಷದ ಕೃಷಿ ಡಿಪ್ಲೋಮ (214 ವಿದ್ಯಾರ್ಥಿಗಳು), ಸಾವಯವ ಕೃಷಿ (30 ವಿದ್ಯಾರ್ಥಿಗಳು), ಸಮಗ್ರ ಕೃಷಿ ಪದ್ಧತಿ (31 ವಿದ್ಯಾರ್ಥಿಗಳು), ಸ್ನಾತಕೋತ್ತರ ಕೃಷಿ ಡಿಪ್ಲೋಮ (14 ವಿದ್ಯಾರ್ಥಿಗಳು) ಮತ್ತು ಸ್ನಾತಕೋತ್ತರ ಕೃಷಿ ವಿಸ್ತರಣೆ ನಿರ್ವಹಣೆ ಡಿಪ್ಲೋಮ (103 ವಿದ್ಯಾರ್ಥಿಗಳು) ನಡೆಸಲಾಗುತ್ತಿದೆ. ಬೇಕರಿ ತಂತ್ರಜ್ಞಾನಗಳು/ಉತ್ಪನ್ನಗಳ ಕುರಿತಾದ 06 ವಾಣಿಜ್ಯ ಬೇಕಿಂಗ್ ಕೋರ್ಸ್, 05 ಸರ್ಟಿಫಿಕೇಟ್ ಕೋರ್ಸ್, 4 ಬೇಸಿಗೆ ವಿಶೇಷ ಶಿಕ್ಷಣ ಮತ್ತು 39 ಓರಿಯೆಂಟೇಷನ್ ಕೋರ್ಸ್‌ಗಳನ್ನು ನಡೆಸಲಾಗಿದೆ. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲವು 'ಸುಸ್ಥಿರ ಅಭಿವೃದ್ಧಿಗೆ ನಿಖರವಾದ ಕೃಷಿ' ಎಂಬ ವಿಷಯದೊಂದಿಗೆ 2019 ರ ಅಕ್ಟೋಬರ್ 24-27 ರಂದು ಬೆಂಗಳೂರಿನ ಜಿಕೆವಿಕೆ ಯಲ್ಲಿ ಕೃಷಿ ವಿಶ್ವವಿದ್ಯಾಲಯಗಳು, ಐಸಿಎಆರ್ ಸಂಸ್ಥೆಗಳು ಮತ್ತು ಖಾಸಗಿ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಕೃಷಿಮೇಳವನ್ನು ಆಯೋಜಿಸಲಾಗಿತ್ತು. ಮೇಳದಲ್ಲಿ ಸುಮಾರು 14.5 ಲಕ್ಷ ಜನರು ಭಾಗವಹಿಸಿದ್ದರು.

ಛಾಯಾಚಿತ್ರಗಳು:

ಕೃಷಿ

ವಿಶ್ವವಿದ್ಯಾಲಯ, ಧಾರವಾಡ

ಧಾರವಾಡ ಕೃಷಿ ವಿಶ್ವವಿದ್ಯಾಲಯವು ಅಸ್ತಿತ್ವಕ್ಕೆ ಬರಲು ಕಾರಣೀಭೂತವಾದ ಮಹಾನ್ ಸಂಸ್ಥೆಯಾದ ಕೃಷಿ ಮಹಾವಿದ್ಯಾಲಯವು 1947 ನೇ ಇಸ್ವಿಯಲ್ಲಿ ಸ್ಥಾಪಿತವಾಯಿತು. ತರುವಾಯ, ಅಕ್ಟೋಬರ 1, 1986 ರಂದು ಈ ಮಹಾವಿದ್ಯಾಲಯವು ವಿಶ್ವವಿದ್ಯಾಲಯವಾಗಿ ಮಾರ್ಪಾಡಾಗುವ ಮೂಲಕ ಉತ್ತರ ಕರ್ನಾಟಕದ ರೈತ ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸುವ ಕೆಲಸಕ್ಕೆ ಚಾಲನೆ ದೊರಕಿತು. ಈ ವಿಶ್ವವಿದ್ಯಾಲಯವು 5 ಕಾಲೇಜುಗಳನ್ನು, 7 ಡಿಪ್ಲೋಮಾ ಕಾಲೇಜುಗಳು,28 ಸಂಶೋಧನಾ ಕೇಂದ್ರಗಳನ್ನು, 6 ವಿಸ್ತರಣಾ ಘಟಕಗಳನ್ನು, 6 ಕೃಷಿ ವಿಜ್ಞಾನ ಕೇಂದ್ರಗಳನ್ನು ಮತ್ತು ಒಂದು ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ ಹೊಂದಿದೆ. ಉತ್ತರ ಕರ್ನಾಟಕದ 7 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಬಿಜಾಪುರ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರ ಕನ್ನಡ ಇವುಗಳಲ್ಲಿ ಇದರ ಕಾರ್ಯವ್ಯಾಪ್ತಿ ಹೊಂದಿದೆ. ಇಲ್ಲಿ ಮಣ್ಣು, ಹವಾಮಾನ, ಬೆಳೆಪದ್ಧತಿ ಇವುಗಳಲ್ಲಿ ಸಾಕಷ್ಟು ವೈವಿಧ್ಯತೆಯನ್ನು ಕಾಣಬಹುದಾಗಿದೆ. ಇದರ ಕಾರ್ಯವ್ಯಾಪ್ತಿಯು ಒಣಬೇಸಾಯದಿಂದ ಹಿಡಿದು ಭಾರೀ ಮಳೆಬೀಳುವ ಹಾಗೂ ನೀರಾವರಿ ಪ್ರದೇಶಗಳನ್ನು ಆವರಿಸಿದೆ. ಜೋಳ, ಹತ್ತಿ, ಭತ್ತ, ಬೆಳೆಕಾಳು, ಮೆಣಸಿನಕಾಯಿ, ಕಬ್ಬು, ಶೇಂಗಾ, ಸೂರ್ಯಕಾಂತಿ, ಗೋಧಿ, ಕುಸುಬೆ ಮುಂತಾದ ಮುಖ್ಯ ಬೆಳೆಗಳನ್ನು ಇದರ ವ್ಯಾಪ್ತಿಯಲ್ಲಿ ಹೇರಳವಾಗಿ ಬೆಳೆಯಲಾಗುತ್ತದೆ. ಇದಲ್ಲದೆ ಈ ಪ್ರದೇಶವು ತೋಟಗಾರಿಕಾ ಬೆಳೆಗಳಿಗೂ ಹೆಸರುವಾಸಿಯಾಗಿದೆ.

ಈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ರಾಜ್ಯದ ಪ್ರತಿಶತ 28 ರಷ್ಟು ಭೌಗೋಳಿಕ ಕ್ಷೇತ್ರ, ಪ್ರತಿಶತ 27 ರಷ್ಟು ಉಳುಮೆ ಕ್ಷೇತ್ರ ಮತ್ತು ಪ್ರತಿಶತ 14 ರಷ್ಟು ನೀರಾವರಿಕ್ಷೇತ್ರ ಬರುತ್ತದೆ. ಈ ವಿಶ್ವವಿದ್ಯಾಲಯವು ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದು, ಭಾರತೀಯ ಕೃಷಿ ಅನುಸಂದಾನ ಪರಿಷತ್ತು ನೀಡುವ ಸರದಾರ್ ಪಟೇಲ ಅತ್ಯುತ್ತಮ ಐ.ಸಿ.ಎ. ಆರ್. ಸಂಸ್ಥೆ ಪ್ರಶಸ್ತಿಯು 2000 ಮತ್ತು 2016 ನೇ ಸಾಲಿನಲ್ಲಿ ಲಭಿಸಿದೆ.

ಮಹೋದ್ದೇಶ:

ಈ ವಿಶ್ವವಿದ್ಯಾಲಯವು ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಚಟುವಟಿಕೆಗಳನ್ನು ನಿರ್ವಹಿಸಲು ಮುಂದಾಳತ್ವವಹಿಸುವ ಮಹೋದ್ದೇಶ ಹೊಂದಿದೆ. ವಿಶ್ವವಿದ್ಯಾಲಯವು ಸಾಮಾಜಿಕ, ಆರ್ಥಿಕ ಮತ್ತು ತಾಂತ್ರಿಕವಾಗಿ ಸೂಕ್ತವಿರುವ ಸಮಕಾಲೀನ ವಿಜ್ಞಾನ ಮತ್ತು ತಂತ್ರಜ್ಞಾನ ಬೆಳವಣಿಗೆಗಳನ್ನು ಗಮನದಲ್ಲಿರಿಸುಕೊಂಡು ತನ್ನ ಚಟುವಟಿಕೆಗಳನ್ನು ನಿರ್ವಹಿಸತ್ತಿದೆ. ಅಲ್ಲದೆ ವಿಶ್ವವಿದ್ಯಾಲಯವು ಅತ್ಯುತ್ತಮ ಕೃಷಿ ತಂತ್ರಜ್ಞರನ್ನು ದೇಶಕ್ಕೆ ಒದಗಿಸುವುದರ ಜೊತೆಗೆ, ರೈತ ಸಮುದಾಯಕ್ಕೆ ಅಗತ್ಯವಾದ ತಂತ್ರಜ್ಞಾನಗಳ ಅಭಿವೃದ್ಧಿ ಮತ್ತು ಪ್ರಸರಣೆಗೆ ಸೂಕ್ತ ಕ್ರಮಗಳನ್ನು ಕಾಲ ಕಾಲಕ್ಕೆ ಕೈಗೊಳ್ಳುತ್ತಿದೆ.

2019-20 ನೇ ಸಾಲಿನ ಸಂಕ್ಷಿಪ್ತ ವಾರ್ಷಿಕ ವರದಿ

ಶಿಕ್ಷಣದ ಪ್ರಗತಿ:

- ವಿಶ್ವವಿದ್ಯಾಲಯದ ವಿವಿಧ ಪದವಿ ಕಾರ್ಯಕ್ರಮಗಳು ಈ ಕೆಳಕಂಡಂತೆ ಸ್ನಾತಕ, ಸ್ನಾತಕೋತ್ತರ ಪಿ.ಎಚ್.ಡಿ. ಮತ್ತು ಡಿಪ್ಲೋಮಾ ಕಾರ್ಯಕ್ರಮಗಳಿಗೆ ವಿವಿಧ ಮಹಾವಿದ್ಯಾಲಯಗಳಲ್ಲಿ 2019-20ನೇ ಸಾಲಿಗೆ ಒಟ್ಟು 1228 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಅಲ್ಲದೇ 20 ವಿದೇಶಿ ವಿದ್ಯಾರ್ಥಿಗಳು ಸಹ ಪ್ರವೇಶ ಪಡೆದಿರುತ್ತಾರೆ. ಒಟ್ಟಾರೆ ವಿಶ್ವವಿದ್ಯಾಲಯದಲ್ಲಿ 3844 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.
- ಕೃಷಿ ವಿಶ್ವವಿದ್ಯಲಾಯ, ಧಾರವಾಡವು ರಾಜ್ಯದಲ್ಲಿ ಪ್ರಥಮ ಸ್ಥಾನದಲ್ಲಿದೆ ಮತ್ತು ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ, ನವದೆಹಲಿಯ ಕೃಷಿ ಶಿಕ್ಷಣ ವಿಭಾಗದಿಂದ ನಿರ್ಣಯಿಸಲ್ಪಟ್ಟ ದೇಶದ ಎಲ್ಲಾ ಕೃಷಿ ವಿಶ್ವವಿದ್ಯಾಲಯಗಳಲ್ಲಿ 16ನೇ ಸ್ಥಾನದಲ್ಲಿದೆ.
- ರಾಷ್ಟ್ರೀಯ ಮಟ್ಟದಲ್ಲಿ ಎನ್ಐಆರ್ಎಫ್ ಕೈಕೊಂಡ ಎಲ್ಲಾ ವಿಶ್ವವಿದ್ಯಾಲಯಗಳ ಶ್ರೇಯಾಂಕದಲ್ಲಿ 83ನೇ ಸ್ಥಾನದಲ್ಲಿದೆ.

ಸಂಶೋಧನಾ ಪ್ರಗತಿ:

- ಕೃಷಿ ವಿಶ್ವವಿದ್ಯಾಲಯ, ಧಾರವಾಡ ವಿವಿಧ ಬೆಳೆಗಳಲ್ಲಿ ಒಟ್ಟು 3 ಹೊಸ ತಳಿಗಳು ಹಾಗೂ ಅಧಿಕ ಇಳುವರಿ ನೀಡುವ ಬೇಸಾಯ ತಂತ್ರಜ್ಞಾನಗಳು, ಬೆಳೆ ಸಂರಕ್ಷಣಾ ಮತ್ತು ಇತರೆ ತಂತ್ರಜ್ಞಾನಗಳನ್ನು ರೈತರ ಬಳಕೆಗಾಗಿ ಬಿಡುಗಡೆ ಮಾಡಲಾಗಿದೆ.
  1. ಹೈಬ್ರೀಡ್ ಸಜ್ಜೆ (ಎಪಿಎಮ್ಎಚ್ 7)
  2. ಕಡಲೆ (ಡಿಬಿಜಿವಿ 204)
  3. ಕಬ್ಬು (ಎಸ್ಎನ್ಕೆ 09211)
  - ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿಯಲ್ಲಿ ಒಂಭತ್ತು ಯೋಜನೆಗಳಿಗೆ ಮಂಜೂರಾತಿ ದೊರೆತಿದ್ದು, ರೂ. 9.75 ಕೋಟಿ ಅನುದಾನ ಬಿಡುಗಡೆಯಾಗಿದ್ದು ಯೋಜನೆಗಳು ಪ್ರಗತಿಯಲ್ಲಿವೆ.
  - 2019-20ನೇ ಸಾಲಿಗೆ ಬಾಹ್ಯ ಮೂಲಗಳಿಂದ ನೆರವು ಪಡೆದ ರೂ. 211.44 ಲಕ್ಷಗಳ ಒಟ್ಟು 5 ಹೊಸ ಸಂಶೋಧನಾ ಯೋಜನೆಗಳು ಪ್ರಗತಿಯಲ್ಲಿವೆ.
  - 2019-20ರಲ್ಲಿ ವಿವಿಧ ಏಕದಳ, ದ್ವಿದಳ ಮತ್ತು ಎಣ್ಣೆಕಾಳು ಬೆಳೆಗಳಲ್ಲಿ ಒಟ್ಟು 41,700 ಕ್ವಿ. ಬೀಜೋತ್ಪಾದನೆ ಮಾಡಿ ರೈತರಿಗೆ ವಿತರಿಸಲಾಗಿದೆ.
  - ಮಣ್ಣಿನ ಆರೋಗ್ಯ ರಕ್ಷಣೆ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ವಿಶ್ವ ಮಣ್ಣು ಹಾಗೂ ರಾಷ್ಟ್ರೀಯ ರೈತರ ದಿನಾಚರಣೆಯನ್ನು ಕ್ರಮವಾಗಿ ದಿ. 05.12.2019 ರಂದು ಹಾಗೂ

23.12.2019 ರಂದು ಎಲ್ಲ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಆಚರಿಸಿ ಆಯ್ದ ರೈತರಿಗೆ "ಮಣ್ಣು ಆರೋಗ್ಯ ಕಾರ್ಡು" ಗಳನ್ನು ವಿತರಿಸಲಾಯಿತು.

ವಿಸ್ತರಣೆ ಪ್ರಗತಿ:

- ಧಾರವಾಡ ಕೃಷಿ ವಿಶ್ವದ್ಯಾಲಯವು ಕೃಷಿ ಮೇಳವನ್ನು ಜನವರಿ 18 ರಿಂದ 20, 2019-20ರವರೆಗೆ "ಪತ್ರಿ ಹನಿ-ಸಮೃದ್ಧ ತೆನಿ" ಎಂಬ ಶೀರ್ಷಿಕೆ ಅಡಿಯಲ್ಲಿ ಆಯೋಜಿಸಲಾಗಿತ್ತು. ಈ ವರ್ಷದ ಕೃಷಿ ಮೇಳದಲ್ಲಿ ಸುಮಾರು 5.10 ಲಕ್ಷಕ್ಕೂ ಅಧಿಕ ರೈತ/ರೈತ ಮಹಿಳೆಯರು ಹಾಗೂ ವಿಸ್ತರಣಾ ಕಾರ್ಯಕರ್ತರು ಭಾಗವಹಿಸಿದ್ದರು.
- ಉತ್ತರ ಕರ್ನಾಟಕದಲ್ಲಿನ 23 ಕೇಂದ್ರಗಳಲ್ಲಿ ಸಮೇತಿ (ಉತ್ತರ) ವತಿಯಿಂದ 920 ಜನ ಕೃಷಿ ಪರಿಕರ ವಿತರಕರುಗಳಿಗೆ ದೇಶಿ ಡಿಪ್ಲೋಮಾ ಕಾರ್ಯಕ್ರಮಗಳನ್ನು ನೀಡಲಾಗಿದೆ.
- ರೈತ ಚೇತನ ವಾಹಿನಿಯಿಂದ ಒಟ್ಟು 1,760 ರೈತರ ಕರೆಗಳಿಗೆ ತಾಂತ್ರಿಕ ಮಾಹಿತಿಯನ್ನು ಒದಗಿಸಲಾಗಿದೆ. ಗ್ರಾಮೀಣ ಯುವಕರ ಕೌಶಲ್ಯ ತರಬೇತಿ ಅಡಿಯಲ್ಲಿ (STRY) ಗ್ರಾಮೀಣ ಯುವಕರಿಗೆ ತರಬೇತಿ ನೀಡಲಾಗುತ್ತಿದೆ.
- ಕೋವಿಡ್-19 ನಿಗ್ರಹಿಸಲು ಜಿಲ್ಲಾ ಆಡಳಿತಕ್ಕೆ ಕೃಷಿ ವಿಶ್ವ ವಿದ್ಯಾಲಯದಿಂದ ಸಹಕಾರ :
  - ಜಿಲ್ಲಾ ಆಡಳಿತಕ್ಕೆ ಕೋವಿಡ್-19 ಪರೀಕ್ಷಾ ಪ್ರಯೋಗಾಲಯ ಸ್ಥಾಪಿಸಲು ಅವಶ್ಯವಿರುವ ಸಲಕರಣೆಗಳನ್ನು ವಿಶ್ವ ವಿದ್ಯಾಲಯದಿಂದ ಒದಗಿಸಿದ ಕುರಿತು; ಧಾರವಾಡ ಜಿಲ್ಲಾಧಿಕಾರಿಗಳು ಬಯಸಿದಂತೆ, ಕೋವಿಡ್-19 ಪರೀಕ್ಷಾ ಪ್ರಯೋಗಾಲಯ ಸ್ಥಾಪಿಸಲು ಅವಶ್ಯವಿರುವ ಕೆಲವು ಪ್ರಮುಖ ವೈಜ್ಞಾನಿಕ ಸಲಕರಣೆಗಳು ಕೃವಿವಿ ಧಾರವಾಡದಲ್ಲಿ ಲಭ್ಯವಿದ್ದು ಅವುಗಳನ್ನು ಜಿಲ್ಲಾಧಿಕಾರಿಗಳ ಸುಪರ್ದಿಗೆ ಒಪ್ಪಿಸಲಾಗಿದೆ.
  - ಕೃಷಿ ವಿಶ್ವವಿದಾಲಯದ ಆವರಣದಲ್ಲಿ ವಿವಿಧ ರಾಜ್ಯಗಳಿಂದ ಆಗಮಿಸುತ್ತಿರುವ ವಲಸೆ ಕಾರ್ಮಿಕರಿಗೆ ಕೋವಿಡ್-19 ವೈದ್ಯಕೀಯ ತಪಾಸಣೆಗೆ ಒಳಪಡಿಸಿ ವರ್ಗೀಕರಿಸಲು ಪರೀಕ್ಷಾ ಕೇಂದ್ರವನ್ನು ತೆರೆಯಲಾಗಿದೆ.
  - ಜಿಲ್ಲಾಡಳಿತದಿಂದ ಮನೆ ಮನೆ ಸಂದರ್ಶನಕ್ಕೆ 40 ಕೃಷಿ ವಿಶ್ವವಿದ್ಯಾಲಯದ ಸಿಬ್ಬಂದಿಯವರನ್ನು ನಿಯೋಜಿಸಲಾಗಿದೆ.

ಹಣಕಾಸಿನ ಪ್ರಗತಿ:

- ಮಾರ್ಚ್, 2020ರ ಅಂತ್ಯದವರೆಗೆ ಒಟ್ಟು ರೂ. 21717.00 ಲಕ್ಷ ಅನುದಾನವನ್ನು ಕೃಷಿ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಲಾಗಿದೆ ಹಾಗೂ ಪ್ರತಿಶತ 100 ರಷ್ಟು ಆರ್ಥಿಕ ಪ್ರಗತಿಯನ್ನು ಸಾಧಿಸಲಾಗಿದೆ.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

2019-20ನೇ ಸಾಲಿನ ಸಂಕ್ಷಿಪ್ತ ವಾರ್ಷಿಕ ವರದಿ

ಕೃಷಿ ಶಿಕ್ಷಣ

- ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಿಗೆ ಪ್ರವೇಶಾತಿ ಸಂಖ್ಯೆಯು 1262 ಇದ್ದು, ಒಟ್ಟು 790 ಬಾಲಕರು ಮತ್ತು 472 ಬಾಲಕೀಯರು ಪ್ರವೇಶಾತಿ ಪಡೆದಿದ್ದಾರೆ. ಅದರಲ್ಲಿ 343 ವಿದ್ಯಾರ್ಥಿಗಳು 2018-19 ರಲ್ಲಿ ಪ್ರವೇಶಾತಿ ಪಡೆದಿದ್ದು, 209 ಬಾಲಕರು ಮತ್ತು 134 ಬಾಲಕೀಯರಾಗಿದ್ದಾರೆ.
- 2018-19 ಶೈಕ್ಷಣಿಕ ವರ್ಷದಲ್ಲಿ ಬಿ.ಎಸ್ಸಿ. ಕೃಷಿ ಪದವಿಗೆ 167 ಬಾಲಕರು ಮತ್ತು 117 ಬಾಲಕಿಯರು ಪ್ರವೇಶವನ್ನು ಪಡೆದಿರುತ್ತಾರೆ ಹಾಗೂ ಕೃಷಿ ತಾಂತ್ರಿಕ ಪದವಿಗೆ 42 ಬಾಲಕರು ಮತ್ತು 17 ಬಾಲಕಿಯರು ಪ್ರವೇಶವನ್ನು ಪಡೆದಿರುತ್ತಾರೆ.
- ಪ್ರಸ್ತುತ ವರ್ಷದಲ್ಲಿ 342 ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಪ್ರವೇಶ ಪಡೆದಿದ್ದಾರೆ. ಅದರಲ್ಲಿ 116 ಸ್ನಾತಕೋತ್ತರ ಮತ್ತು 38 ಡಾಕ್ಟೋರಲ್ ಪದವಿಗಳಿಗೆ ಪ್ರವೇಶ ಪಡೆದಿದ್ದಾರೆ. 130 ವಿದ್ಯಾರ್ಥಿಗಳು ಡಿಪ್ಲೋಮಾ ಕೋರ್ಸಿಗೆ ಪ್ರವೇಶ ಪಡೆದಿದ್ದಾರೆ.
- 2018-19ನೇ ಸಾಲಿನಲ್ಲಿ63 ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯದ ವಿದ್ಯಾರ್ಥಿವೇತನ, 43 ವಿದ್ಯಾರ್ಥಿಗಳಿಗೆ ಸಾಮಾನ್ಯ ವಿದ್ಯಾರ್ಥಿವೇತನ ಲಭಿಸಿರುತ್ತದೆ. 43 ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕೃವಿವಿ.,ರಾಯಚೂರು ಮೆರಿಟ್ ಶಿಷ್ಯ ವೇತನ, 158 ವಿದ್ಯಾರ್ಥಿ ಪ್ರೋತ್ಸಾಹ ವೇತನ ಮತ್ತು 17 ಡಾಕ್ಟೋರಲ್ ವಿದ್ಯಾರ್ಥಿಗಳಿಗೆ ಕೃವಿವಿ., ರಾಯಚೂರು ಮೆರಿಟ್ ಶಿಷ್ಯ ವೇತನ, 5 ಡಾಕ್ಟೋರಲ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ವಿದ್ಯಾರ್ಥಿ ವೇತನ ಲಭಿಸಿರುತ್ತದೆ.
- ಕೃವಿವಿ, ರಾಯಚೂರಿನ ಎಸ್ಸಿಎಸ್ಪಿ/ಟಿಎಸ್ಪಿ ಕೋಶದ 2019-20ನೇ ವರ್ಷದಲ್ಲಿ ಒಟ್ಟು 277 (ಪ.ಜಾ. 207, ಪ.ಪಂ.70 ವಿದ್ಯಾರ್ಥಿಗಳು) ಸ್ನಾತಕ / ಸ್ನಾತಕೋತ್ತರ / ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಶೂನ್ಯ ಮೆಸ್ ಬಿಲ್‌ನ ಸೌಲಭ್ಯ ನೀಡಲಾಗಿದೆ ಮತ್ತು ಒಟ್ಟು 86 ವಿದ್ಯಾರ್ಥಿಗಳಿಗೆ (ಪ.ಜಾ. 66, ಪ.ಪಂ. 20) ಲ್ಯಾಪ್‌ಟಾಪ್ ವಿತರಿಸಲಾಗಿದೆ. ಜೊತೆಗೆ 277 ವಿದ್ಯಾರ್ಥಿಗಳಿಗೆ (ಪ.ಜಾ. 207, ಪ.ಪಂ.70) ಸ್ನಾತಕ ವಿದ್ಯಾರ್ಥಿಗಳಿಗೆ ರೂ. 5,000/- ಗಳಂತೆ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ. 10,000/ ಗಳಂತೆ ಪ್ರತಿ ವಿದ್ಯಾರ್ಥಿಗೆ ಮತ್ತು ಪಿ.ಹೆಚ್.ಡಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ರೂ. 15,000/- ಗಳಂತೆ ಕಾಂಟಿನ್‌ಜೆನ್ಸಿ ಹಣವನ್ನು ನೀಡಲಾಗಿದೆ.

ಮೂರನೆ ವರ್ಷದ ಸ್ನಾತಕ ಪ.ಜಾ. ಮತ್ತು ಪ.ಪಂಗಡದ ಒಟ್ಟು 49 ವಿದ್ಯಾರ್ಥಿಗಳಿಗೆ ರಾಜ್ಯ ಶೈಕ್ಷಣಿಕ ಪ್ರವಾಸಕ್ಕಾಗಿ ಬಳಸಲಾಗಿದೆ. ಅಂತಿಮ ವರ್ಷದಲ್ಲಿ ಅಧ್ಯಯನ ಮಾಡುತ್ತಿರುವ ಪ.ಜಾ/ಪ.ಪಂಗಡದ 62 ವಿದ್ಯಾರ್ಥಿಗಳಿಗೆ ಅಖಿಲ ಭಾರತ ಶೈಕ್ಷಣಿಕ ಪ್ರವಾಸ ಕೈಗೊಳ್ಳಲಾಗಿದೆ.

ಕೃವಿವಿ, ರಾಯಚೂರು ಆವರಣದಲ್ಲಿ ಮಾರ್ಚ್ 12 ರಿಂದ 14ರ ವರೆಗೆ ಏರ್ಪಡಿಸಲಾದ Role of Agricultural Engineering innovation in doubling farmer income" ಎಂಬ ರಾಷ್ಟ್ರೀಯ ಸಂಕೀರಣದಲ್ಲಿ ಭಾಗವಹಿಸಿದ 43 ಸ್ನಾತಕೋತ್ತರ, ಮತ್ತು 12 ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನಸಹಾಯ ಮಾಡಲಾಗಿದೆ. 287 ಸ್ನಾತಕ, ಸ್ನಾತಕೋತ್ತರ ಮತ್ತು ಪಿ.ಹೆಚ್.ಡಿ ವಿದ್ಯಾರ್ಥಿಗಳಿಗೆ ವ್ಯಕ್ತಿತ್ವ ವಿಕಸನ ಕಾರ್ಯಗಳನ್ನು ಮತ್ತು ತರಬೇತಿಗಳನ್ನು ಕೈಗೊಳ್ಳಲಾಗಿದೆ ಮತ್ತು ಕೃವಿವಿ, ರಾಯಚೂರು ಅಡಿಯಲ್ಲಿನ ಎಲ್ಲಾ ಮಹಾವಿದ್ಯಾಲಯಗಳಲ್ಲಿನ ವಸತಿ ನಿಲಯಗಳಲ್ಲಿ ವಿದ್ಯಾರ್ಥಿ ಕೊಠಡಿಗಳ, ಪರೀಕ್ಷಾ ಕೊಠಡಿ, ವಿಚಾರ ಸಂಕೀರಣ ಕೊಠಡಿಗಳ ನಿರ್ವಹಣೆಗಾಗಿ ಬಳಸಲಾಗಿದೆ.

ಕೃಷಿ ಸಂಶೋಧನೆ

ರಾಯಚೂರು ಕೃಷಿ ವಿಶ್ವವಿದ್ಯಾಲಯವು ಒಟ್ಟು 13 ಕೃಷಿ ಸಂಶೋಧನಾ ಕೇಂದ್ರಗಳನ್ನು ಹೊಂದಿದ್ದು ಅದರಲ್ಲಿ ಒಂದು ಮುಖ್ಯ ಕೃಷಿ ಸಂಶೋಧನಾ ಕೇಂದ್ರವು ರಾಯಚೂರಿನಲ್ಲಿದ್ದು ಇತರೇ 12 ಕೃಷಿ ಸಂಶೋಧನಾ ಕೇಂದ್ರಗಳು, 18 ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆಗಳು ಉತ್ತರ ಕರ್ನಾಟಕದ 6 ಜಿಲ್ಲೆಗಳನ್ನೊಳಗೊಂಡಂತೆ ಕಲ್ಯಾಣ–ಕರ್ನಾಟಕ ಪ್ರದೇಶದಲ್ಲಿ ಹರಡಿರುತ್ತವೆ. 2018-19ನೇ ಸಾಲಿನಲ್ಲಿ ಸಜ್ಜೆಯಲ್ಲಿ MBP-2, ಹತ್ತಿಯಲ್ಲಿ BGDHH-697, ಭತ್ತದಲ್ಲಿ RPBIO-226 ಎಂಬ ಹೊಸ ತಳಿಗಳನ್ನು ಬಿಡುಗಡೆಗೊಳಿಸಲಾಗಿದೆ. ಬೆಳೆ ಉತ್ಪಾದನೆಯಲ್ಲಿ 13, ಬೆಳೆ ಸಂರಕ್ಷಣೆಯಲ್ಲಿ 08, ಮಣ್ಣು ವಿಜ್ಞಾನ ಮತ್ತು ರಸಾಯನಶಾಸ್ತ್ರ ವಿಭಾಗದಿಂದ 02, ಬೀಜ ವಿಜ್ಞಾನ ಮತ್ತು ತಾಂತ್ರಿಕತೆಯಲ್ಲಿ 01, ಬೆಳೆ ಶರೀರಶಾಸ್ತ್ರದಲ್ಲಿ 02, ತೋಟಗಾರಿಕೆಯಲ್ಲಿ 03, ಮತ್ತು ಕೃಷಿ ತಾಂತ್ರಿಕತೆ ವಿಭಾಗದಿಂದ 07 ತಂತ್ರಜ್ಞಾನಗಳನ್ನು, ಒಟ್ಟಾರೆ 40 ತಂತ್ರಜ್ಞಾನಗಳನ್ನು ರೈತರ ಉಪಯೋಗಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಲಾಗಿದೆ. ಇದಲ್ಲದೆ ಪ್ರಸ್ತುತ ವರ್ಷದಲ್ಲಿ (2019-20) ಭತ್ತ, ಮೆಕ್ಕೆಜೋಳ, ತೊಗರಿ, ಕಡಲೆ ಮತ್ತು ಮೆಣಸಿನಕಾಯಿ ಬೆಳೆಗಳಲ್ಲಿ ಆರು ಹೊಸ ತಳಿಗಳನ್ನು ಕ್ಷೇತ್ರ ಪ್ರಯೋಗಕ್ಕೆ ವಿಶ್ವವಿದ್ಯಾಲಯದ ವಿಜ್ಞಾನಿಗಳು ಅಭಿವೃದ್ಧಿ ಪಡಿಸಿದ್ದಾರೆ.

ಇದಲ್ಲದೆ 2019-20 ನೇ ಸಾಲಿನಲ್ಲಿ ಒಟ್ಟು 35 ಹೊಸ ಕ್ಷೇತ್ರ ಪ್ರಯೋಗಳನ್ನು (ತಳಿ ಅಭಿವೃದ್ಧಿ ವಿಭಾಗದಿಂದ 6, ಬೆಳೆ ಉತ್ಪಾದನೆ ವಿಭಾಗದಿಂದ 8, ಕೀಟಶಾಸ್ತ್ರ ವಿಭಾಗದಿಂದ 12, ಸಸ್ಯ ರೋಗಶಾಸ್ತ್ರ ಹಾಗೂ ಬೀಜ ತಾಂತ್ರಿಕತೆ ವಿಭಾಗದಿಂದ ತಲಾ 3, ಕೃಷಿ ಸೂಕ್ಷ್ಮಜೀವಶಾಸ್ತ್ರ, ಬೆಳೆ ಶರೀರಶಾಸ್ತ್ರ ಹಾಗೂ ಮಣ್ಣು ಮತ್ತು ನೀರು ಸಂರಕ್ಷಣಾ ವಿಭಾಗದಿಂದ ತಲಾ 1, ಅಂತಿಮ ಮೌಲ್ಯಮಾಪನಕ್ಕಾಗಿ ಸೂಚಿಸಲಾಗಿದೆ. ಅದೇ ರೀತಿ 10 ಕ್ಷೇತ್ರ ಪ್ರಯೋಗಗಳನ್ನು 2019-20 ರಲ್ಲಿ ಮುಂದುವರೆಸಲಾಗಿದೆ.

ಪ್ರಸಕ್ತ ವರ್ಷದಲ್ಲಿ (2019-20) 433 ನೂತನ ಪ್ರಯೋಗಗಳನ್ನು ವಿವಿಧ ವಿಭಾಗಳಿಂದ ಪರೀಕ್ಷಿಸಲಾಗಿದೆ. ಇದಕ್ಕೆ ಅನುಗುಣವಾಗಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ ರೂ. 11.29 ಕೋಟಿ ಮೊತ್ತದ ಅನುದಾನ ಕರ್ನಾಟಕ ಸರ್ಕಾರದಿಂದ ಮಂಜೂರಾತಿ ದೊರಕಿದೆ. ಇದಲ್ಲದೆ 114

ಯೋಜನೆಗಳಿಗೆ ಬಾಹ್ಯವಾಗಿ ಹಾಗೂ ವಿಶ್ವವಿದ್ಯಾಲಯದ ಅನುದಾನವತಿಯಿಂದ 21 ಯೋಜನೆಗಳು ಕೃಷಿ ಸಮುದಾಯದ ಅನುಕೂಲಕ್ಕಾಗಿ ಕಾರ್ಯನಿವಹಿಸುತ್ತಿವೆ.

ಕೇಂದ್ರೀಕೃತ ವಿಶೇಷ ಸರಕುಗಳ ಬದಲು ತಂತ್ರಜ್ಞಾನ ಉತ್ಪಾದನೆಗೆ ವ್ಯವಸ್ಥೆಯ ದೃಷ್ಟಿಕೋನ ತರುವುದು ಮತ್ತು ಕೇವಲ ಉತ್ಪಾದನೆಯಲ್ಲಿ ಕೊನೆಗೊಳ್ಳುವುದರ ಬದಲು ಒಕ್ಕಲುತನ ಪದ್ಧತಿ ಮೇಲೆ, ಸಂಪನ್ಮೂಲಾಧಾರಿತ ಪಶು ಸಂಪತ್ತಿನ ಉತ್ಪಾದನೆ : ಉತ್ಪನ್ನಗಳ ಮಾರ್ಪಾಡಿನ ಮೇಲೆ ಕೊಡಲಾಗುವ ಒತ್ತನ್ನು ಬದಲಾಯಿಸುವುದು ಮತ್ತು ಮೌಲ್ಯ ಸೇರ್ಪಡೆ ಕುರಿತಂತೆ ಸಂಶೋಧನೆಯನ್ನು ಪುನ:ಶ್ಚೇತನಗೊಳಿಸಲಾಗುತ್ತದೆ.

ಮಳೆಯಾಶ್ರಿತ ಹಾಗೂ ಒಣ ಭೂಮಿ ಪ್ರದೇಶಗಳ ಉತ್ಪಾದನೆಯನ್ನು ಹೆಚ್ಚಿಸುವುದು, ಉತ್ತಮ ಗುಣಮಟ್ಟದ ಬೀಜೋತ್ಪಾದನೆಗಾಗಿ ರೈತ ವಿಜ್ಞಾನಿ ಸಂಪರ್ಕ, ನೀರಿನ ಸದ್ಬಳಕೆ, ಕೀಟ ನಿರ್ವಹಣೆಗಾಗಿ ನೈಸರ್ಗಿಕ ಜೈವಿಕ ಕೀಟ ನಿಯಂತ್ರಕಗಳನ್ನು ತೀವ್ರಗೊಳಿಸುವುದು, ತೋಟಗಾರಿಕೆ ಬೆಳೆಗಳಲ್ಲಿ ಕೊಯ್ಲು ನಂತರದ ಸಂಶೋಧನೆಗಳನ್ನು ಬಲಪಡಿಸುವುದು, ಕೃಷಿ ಉದ್ದಿಮೆಗಳ ಸ್ಥಾಪನೆಯಲ್ಲಿ ಕಾರ್ಯಸಾಧ್ಯ ಅಧ್ಯಯನಗಳು ಮತ್ತು ಸಂಶೋಧನಾ ಮಾಹಿತಿಗಾಗಿ ಸಂಪರ್ಕ ಜಾಲವನ್ನು ಬಲಪಡಿಸುವುದು. ಪರಿಸರ ಸಂರಕ್ಷಣೆ ಹಾಗು ಸ್ಥಿರ ಉತ್ಪಾದಕತೆಗಾಗಿ ಸಾವಯವ ಕೃಷಿ ಉತ್ಪಾದನಾ ನಿಲುವುಗಳನ್ನು ಅನುಸರಿಸುವುದು.

ಸಂಶೋಧನೆ ಯೋಜನೆಗಳು ರೈತರ ಅಭಿವೃದ್ಧಿಯ ಜೊತೆಗೆ ಪರಿಸರ ಸಂರಕ್ಷಣೆಗೂ ಸಹಾಯಕಾರಿಯಾಗಿವೆ. ಮೌಲ್ಯವರ್ಧನೆಗೆ ಹೆಚ್ಚು ಒತ್ತು ಕೊಡಲಾಗಿದೆ. ಇತ್ತೀಚಿನ ನ್ಯಾನೋ ತಂತ್ರಜ್ಞಾನ ಬೆಳೆ ಸಂರಕ್ಷಣೆಯಲ್ಲಿ ಉತ್ತಮ ಪಾತ್ರ ವಹಿಸಬಹುದಾದ್ದರಿಂದ ಈ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳಲಾಗಿದೆ. ಕಳೆ, ಕೀಟ ಹಾಗೂ ರೋಗಗಳನ್ನು ಗುರುತಿಸಿ ಅವುಗಳ ನಿಯಂತ್ರಣಕ್ಕಾಗಿ e-SaP ತಂತ್ರಜ್ಞಾನವನ್ನು ಆಳವಡಿಸಿಕೊಳ್ಳಲಾಗಿದೆ. ಕಡಲೆಯಲ್ಲಿ ಯಾಂತ್ರಿಕ ಕೊಯ್ಲಿಗೆ ಜಿಬಿಎಮ್-2 ತಳಿಯನ್ನು ಅಭಿವೃದ್ಧಿಪಡಿಸಲಾಗಿದೆ. ಯಾದಗಿರಿ ಜಿಲ್ಲೆಯ ತಿಂಥಣಿಯಲ್ಲಿ ಜೈವಿಕ-ಇಂಧನ ಪಾರ್ಕನ್ನು ಪ್ರಾರಂಭಿಸಲಾಗಿದೆ. ರಾಷ್ಟ್ರೀಯ ಮಣ್ಣು ಆರೋಗ್ಯ ಅಭಿಯಾನದ ಅಡಿಯಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿಗೆ ಮಂಜೂರಾದ ಅನುದಾನದಲ್ಲಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಎಲ್ಲಾ ಕೃಷಿ ವಿಜ್ಞಾನ ಕೇಂದ್ರಗಳು, ಕೃಷಿ ಸಂಶೋಧನೆ ಮತ್ತು ಕೃಷಿ ಮಹಾವಿದ್ಯಾಲಯಗಳಲ್ಲಿ ಸುಸಜ್ಜಿತ ಹದಿಮೂರು ಮಣ್ಣು ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗಿದೆ. ಇದರಲ್ಲಿ 75 ಲಕ್ಷ ರೂಪಾಯಿಗಳು ವೆಚ್ಚದಲ್ಲಿ ಮಾದರಿ (ರೆಫರಲ್) ಮಣ್ಣು ಪರೀಕ್ಷ ಕೇಂದ್ರವನ್ನು, ಕೃಷಿ ಮಹಾ ವಿದ್ಯಾಲಯ, ರಾಯಚೂರಿನಲ್ಲಿ ಸ್ಥಾಪಿಸಲಾಗಿದೆ. ಈ ಎಲ್ಲಾ ಕೇಂದ್ರಗಳಿಂದ ಸುಮಾರು 21.935 ಮಣ್ಣು ಮಾದರಿಗಳನ್ನು ಮತ್ತು 3248 ನೀರಿನ ಮಾದರಿಗಳನ್ನು ಪರೀಕ್ಷಿಸಲಾಗಿದೆ ಹಾಗೂ ರೆಫರಲ್ ಮಣ್ಣು ಪರೀಕ್ಷಾ ಕೇಂದ್ರದಲ್ಲಿ 4111 ಮಣ್ಣು ಮಾದರಿಗಳನ್ನು ಈವರೆಗೆ ಪರೀಕ್ಷಿಸಲಾಗಿದೆ. ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ ಪಲ್ಸ್ ಮ್ಯಾಜಿಕ್ ತಾಂತ್ರಿಕತೆಯನ್ನು 4500 ಹೇ. ಪ್ರದೇಶದಲ್ಲಿ ರೈತರು ಆಳವಡಿಸಿಕೊಂಡಿದ್ದಾರೆ.

ವಿಶ್ವಬ್ಯಾಂಕ್‌ನ ಹಣಕಾಸು ನೆರವಿನ ಸುಜಲಾ-3 ಯೋಜನೆ ಅಡಿಯಲ್ಲಿ ಕಲಬುರಗಿ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಗಳಲ್ಲಿ, 2.47 ಲಕ್ಷ ಹೇಕ್ಟರ್ ಮಳೆ ಆಶ್ರಿತ ಪ್ರದೇಶದಲ್ಲಿ ಸಂಪೂರ್ಣ ಭೂ ಸಂಪನ್ಮೂಲ ಮಾಹಿತಿಯನ್ನು ಸಂಗ್ರಹಿಸಿಲಾಗಿದ್ದು, ಅವುಗಳ ನಕ್ಷೆಗಳನ್ನು ತಯಾರಿಸಿ ರೈತರಿಗೆ ಮಾಹಿತಿ ತಲುಪುವಂತೆ ರೈತ ಸಂಪರ್ಕ ಕೇಂದ್ರ ಹಾಗೂ ಜಂಟಿ ಕೃಷಿ ನಿರ್ದೇಶಕರ ಕಛೇರಿಗಳಿಗೆ ಕನ್ನಡ ಅಟ್ಲಾಸ್ ಗಳನ್ನು ತಯಾರಿಸಿ ಕೊಡಲಾಗಿದೆ. ಇದರ ಆಧಾರದ ಮೇಲೆ ಭೂ ಸಂಪನ್ಮೂಲ/ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು 63,968 ರೈತರಿಗೆ ವಿತರಿಸಲಾಗಿದೆ. ಈ ಮಾಹಿತಿಯಿಂದ ರೈತರಿಗೆ, ವಿಜ್ಞಾನಿಗಳಿಗೆ, ವಿದ್ಯಾರ್ಥಿಗಳಿಗೆ ಹಾಗೂ ಆಡಳಿತ ನೀತಿ ನಿರೂಪಕರಿಗೆ ಅನುಕೂಲವಾಗುವಂತೆ ಜಿಯೋ ಪೋರ್ಟಲ್‌ಅನ್ನು ಬಿಡುಗಡೆ ಮಾಡಲಾಗುತ್ತದೆ. ಇದಕ್ಕೆ ಬೇಕಾದ ಡಿ.ಎಸ್.ಎಸ್. ಮಾಡಲ್‌ಗಳನ್ನು ಒದಗಿಸಲು ನಮ್ಮ ವಿಜ್ಞಾನಿಗಳು ಶ್ರಮಿಸಿದ್ದಾರೆ. ನಮ್ಮ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು ಸುಜಲಾ-3 ಯೋಜನೆ ಮಣ್ಣು, ನೀರು ಹಾಗೂ ಬೆಳೆ ಸಂರಕ್ಷಣೆಗಾಗಿ ಕೃಷಿ ಇಲಾಖೆ ಹೊಂದಿಗೆ ಜಂಟಿಯಾಗಿ ಸುಮಾರು 10 ಕಿರು ಜಲಾನಯನಗಳಲ್ಲಿ ಅಳವಡಿಸಲಾಗಿದ್ದು ಇದನ್ನು ಜಲಾನಯನ ಇಲಾಖೆ ಹಾಗೂ ವಿಶ್ವ ಬ್ಯಾಂಕ್ ಪ್ರಶಂಸೆ ವ್ಯಕ್ತಪಡಿಸಿದೆ.

ಕೃಷಿ ವಿಜ್ಞಾನ ಕೇಂದ್ರಗಳ ವಿಸ್ತರಣಾ ಚಟುವಟಿಕೆಗಳಿಂದ ಕೂರಿಗೆ ಭತ್ತದ ತಾಂತ್ರಿಕತೆ ಕಲ್ಯಾಣ ಕರ್ನಾಟಕ ಭಾಗದ ಸುಮಾರು 79500 ಹೇ. ಪ್ರದೇಶದಲ್ಲಿ ಹಂಚಿದೆ. ಕೃಷಿ ವಿಜ್ಞಾನ ಕೇಂದ್ರಗಳ ಮುಖಾಂತರ 935 ಹೇ. ಪ್ರದೇಶದಲ್ಲಿ ಮುಂಚೂಣಿ ಪ್ರಾತ್ಯಾಕ್ಷಿಕೆಗಳನ್ನು ಕೈಗೊಳ್ಳಲಾಗಿದೆ ಈ ಪ್ರಾತ್ಯಕ್ಷಿಗಳ ಮುಖಾಂತರ ಸಿರಿಧಾನ್ಯಗಳು, ಎಣ್ಣೆಕಾಳುಗಳ, ದ್ವಿದಳಧಾನ್ಯಗಳು ಮತ್ತು ಕೃಷಿ ಮಾರುಕಟ್ಟೆ ತಂತ್ರಜ್ಞಾನಗಳ ಬಗೆಗೆ ಮಾಹಿತಿ ಕೊಡಲಾಗಿದೆ.

ಕೃಷಿಯಲ್ಲಿ ಯಾಂತ್ರೀಕರಣಕ್ಕಾಗಿ ಅನೇಕ ಯಂತ್ರಗಳ ಅಭಿವೃದ್ಧಿ, ಮಣ್ಣು ಮತ್ತು ನೀರು ಸಂರಕ್ಷಣಾ ತಂತ್ರಜ್ಞಾನಗಳು, ಸಂಸ್ಕರಣಾ ತಂತ್ರಜ್ಞಾನಗಳನ್ನೂ ಸಹ ರೈತರಿಗೆ ನೀಡಿದ ಹೆಮ್ಮೆ ನಮ್ಮದು. ಸಮಗ್ರ ಕೃಷಿ ಪದ್ಧತಿಯ ಪ್ರಾತ್ಯಕ್ಷಿಕೆಗಳಿಂದ ರೈತರ ಜೀವನ ಸುಸ್ಥಿರತೆಯನ್ನು ಕಾಪಾಡಿಕೊಂಡು ಹೋಗಬಹುದು ಎಂದು ಮನದಟ್ಟು ಮಾಡಿದ ನಂತರ ಅದೇ ತಂತ್ರಜ್ಞಾನವನ್ನು ಆರೂ ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ. ಭತ್ತದಲ್ಲಿ ಕಡಿಮೆ ನೀರು ಕಡಿಮೆ ಖರ್ಚು, ಕಡಿಮೆ ಗೊಬ್ಬರ ಬಳಕೆ ಮಾಡಿ ಅದಾಯ ಹೆಚ್ಚಿಸುವ ಕೂರಿಗೆ ಬಿತ್ತನೆ ತಂತ್ರಜ್ಞಾನವನ್ನು 50,000 ಎಕರೆಗಳಲ್ಲಿ ತೋರಿಸಲಾಗಿದೆ.

ಕೃಷಿ ತಾಂತ್ರಿಕ ಮಹಾವಿದ್ಯಾಲಯದ, ಕೃಷಿ ಯಂತ್ರೋಪಕರಣ ಮತ್ತು ಶಕ್ತಿ ತಾಂತ್ರಿಕತೆ ವಿಭಾಗದಲ್ಲಿ ಅಭಿವೃದ್ಧಿಪಡಿಸಿದ ರಿಮೋಟ್ ಆಧಾರಿತ ಸೌರಶಕ್ತಿ ಚಾಲಿತ ಸಿಂಪರಣಾ ಯಂತ್ರ ಹಾಗೂ ಸಂಸ್ಕರಣೆ ಮತ್ತು ಆಹಾರ ತಂತ್ರಜ್ಞಾನ ವಿಭಾಗದಲ್ಲಿ ಅಭಿವೃದ್ಧಿಪಡಿಸಿದ ತಂತ್ರಜ್ಞಾನಗಳಾದ ಪವರ್ ಆಪರೇಟೆಡ್ ಅಲೋವೆರಾ ಲೀಫ್ ಸ್ಲೈಸಿಂಗ್ ಮಷಿನ್, ಮತ್ತು ಕೈಟೋಸನ್ ಜಿಂಕ್ ಆಕ್ಸೈಡ್ ನ್ಯಾನೋ ಅಬ್ಸಾರ್ಬೆಂಟ್ ಕೋಟೆಡ್ ಸ್ಯಾಂಡ್ ಫಿಲ್ಟರ್ ಬೆಡ್ ಫಾರ್ ಡೈರಿ ಇಂಡಸ್ಟ್ರಿ ವೇಸ್ಟ್ ವಾಟರ್ ತಂತ್ರಜ್ಞಾನಗಳಿಗೆ ಪೇಟೆಂಟ್ ಪಡೆಯಲಾಗಿದೆ.

ಇದಲ್ಲದೇ, 2018-19 ನೇ ಸಾಲಿನಲ್ಲಿ ಶಿಕ್ಷಕ ಮತ್ತು ವಿಜ್ಞಾನಿಗಳು ತಂತ್ರಜ್ಞಾನಗಳನ್ನು ಅಭಿವೃದ್ಧಿ ಪಡಿಸಿದ್ದು ಅದರಲ್ಲಿ ರಿಮೋಟ್ ಆಧಾರಿತ ಸೌರಶಕ್ತಿ ಚಾಲಿತ ಸಿಂಪರಣಾ ಯಂತ್ರ, ಡ್ರೋಣ್ ಚಾಲಿತ

ಸಿಂಪರಣಾ ಯಂತ್ರ, ಸಣ್ಣ ಟ್ರ್ಯಾಕ್ಟರ್ ಚಾಲಿತ ಕಳೆ ತಗೆಯುವ ಮತ್ತು ಗೊಬ್ಬರ ಬಿತ್ತುವ ಯಂತ್ರ ಇವುಗಳನ್ನು ರೈತರ ಅನುಕೂಲಕ್ಕಾಗಿ ಬಿಡುಗಡೆ ಮಾಡಲಾಗಿದೆ.

2013-14 ರಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಮತ್ತು ಆಹಾರ ಸರಬರಾಜು ಸಂಸ್ಥೆಯ ಆರ್ಥಿಕ ಸಹಾಯದಿಂದ ಕಲ್ಯಾಣ ಕರ್ನಾಟಕದ ಭಾಗದಲ್ಲಿ ಕೀಟನಾಶಕಗಳ ಶೇಷ ಮತ್ತು ಆಹಾರ ಗುಣಮಟ್ಟ ವಿಶ್ಲೇಷಣೆ ಪ್ರಯೋಗಾಲಯವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸ್ಥಾಪಿಸಲಾಯಿತು. ಈ ಪ್ರಯೋಗಾಲಯವು ಜುಲೈ 12, 2018 ರಂದು National Accreditation Board for Testing and Calibration Laboratories (NABL) ¢AzÀ ISO/IEC 17025:2005 General Requirements for the Competence of Testing and Calibration Laboratories ಮಾನ್ಯತೆಯನ್ನು ಪಡೆದಿದೆ. ಂಂಃಐ ಭಾರತ ಸರಕಾರದ ಒಂದು ಸ್ವಾಯತ್ತತ ಸಂಸ್ಥೆಯಾಗಿದ್ದು ವೈಜ್ಞಾನಿಕ ವಿಶ್ಲೇಷಣೆ ಕ್ಷೇತ್ರದಲ್ಲಿ ಪರೀಕ್ಷೆ ಮತ್ತು ಮಾಪನಾಂಕ ಪ್ರಮಾಣೀಕರಿಸುವ ರಾಷ್ಟ್ರೀಯ ಮಾನ್ಯತಾ ಮಂಡಳಿಯಾಗಿದೆ. ಇದರ ಅಡಿಯಲ್ಲಿ ಬರುವ ISO/IEC 17025:2005 ರಾಸಾಯನಿಕಗಳ ವಿಶ್ಲೇಷಣೆಯಲ್ಲಿ ಕೃವಿವಿ., ರಾಯಚೂರಿನ ಪ್ರಯೋಗಾಲಯವು ಹಲವು ಪ್ರಕಾರದ ಪರೀಕ್ಷೆ ಮತ್ತು ಮೌಲ್ಯಮಾಪನದಲ್ಲಿ ಭಾಗವಹಿಸಿ ಪೀಡಡೆನಾಶಕಗಳ ಅವಶೇಷ, ಭಾರವಾದ ಲೋಹಗಳ/ಧಾತುರೂಪಗಳ ಮತ್ತು ಆಹಾರ ಗುಣ ವಿಶ್ಲೇಷಣೆಯಲ್ಲಿ ಪ್ರಮಾಣೀಕರಿಸಿದ ಮಾನ್ಯತೆಯನ್ನು ಪಡೆದಿದೆ.

ಬೀಜೋತ್ಪಾದನೆ:

ಈ ಭಾಗದ ಪ್ರಮುಖ ಬೆಳೆಗಳಾದ ಭತ್ತ, ಜೋಳ, ತೊಗರಿ, ಕಡಲೆ, ಹೆಸರು, ಉದ್ದು, ಶೇಂಗಾ, ಸೂರ್ಯಕಾಂತಿ, ಕುಸುಬೆ ಮತ್ತು ಸೋಯಾ ಅವರೆಗಳಲ್ಲಿ ಬೀಜೋತ್ಪಾದನೆ ಚಟುವಟಿಕೆ ಕೈಗೊಂಡಿದ್ದು ಉತ್ತಮ ಗುಣಮಟ್ಟದ ಬೀಜ, ಉತ್ತಮ ದರ ಹಾಗೂ ಸಮಯಕ್ಕೆ ಸರಿಯಾಗಿ ರೈತರಿಗೆ ಸಿಗುವಂತೆ ಮಾಡಿದೆ. ವಿವಿಧ ಬೆಳೆಗಳ ಬೀಜೋತ್ಪಾದನೆಯಲ್ಲಿ ಪ್ರಸಕ್ತ ವರ್ಷ ಒಟ್ಟು 10,664 ಕ್ವಿಂಟಾಲ್ ಬೀಜೋತ್ಪಾದನೆಯನ್ನು ಮಾಡಲಾಗಿದೆ. ಪ್ರತಿ ವರ್ಷ ಮುಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ಬೀಜಮೇಳಗಳನ್ನು ಹಮ್ಮಿಕೊಂಡು ರೈತರಿಗೆ ಮಾಹಿತಿ ನೀಡಲಾಗುತ್ತದೆ.

ಕೃಷಿ ವಿಸ್ತರಣೆ

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ, ಪ್ರಸ್ತುತ 7 ಕೃಷಿ ವಿಜ್ಞಾನ ಕೇಂದ್ರಗಳು ಮತ್ತು 6 ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರ ಹಾಗೂ ಕೃಷಿ ವಿಜ್ಞಾನ ಕೇಂದ್ರಗಳ ವಿಸ್ತರಣಾ ಚಟುವಟಿಕೆಗಳಿಂದ ರೈತ ಸ್ನೇಹಿ, ಇಲ್ಲಿನ ಪರಿಸರಕ್ಕೆ ಹೊಂದಿಕೊಳ್ಳುವಂತಹ ಹಲವಾರು ತಂತ್ರಜ್ಞಾನಗಳನ್ನು ರೈತರಿಗೆ ತಲುಪಿಸುವ ನಿಟ್ಟಿನಲ್ಲಿ ವಿಸ್ತರಣಾ ಚಟುವಟಿಕೆಗಳೂ ನಿರಂತರವಾಗಿ ನಡೆಯುತ್ತಿವೆ.

ರೈತರಿಗೆ ಕೂರಿಗೆ ಭತ್ತದ ತಾಂತ್ರಿಕತೆಯು ಕಲ್ಯಾಣ-ಕರ್ನಾಟಕದ ಭಾಗದ ಸುಮಾರು 87,200 ಹೆ. ಪ್ರದೇಶದಲ್ಲಿ ಹರಡಿಸಿದೆ. ತೊಗರಿಯಲ್ಲಿ ಕೈಗಾಳು/ನಾಟಿ ಪದ್ಧತಿ ತಾಂತ್ರಿಕತೆಯನ್ನು ಕಲಬುರಗಿ ಮತ್ತು ಬೀದರ ಜಿಲ್ಲೆಯಲ್ಲಿ ಸುಮಾರು 4000 ಹೆ. ಪ್ರದೇಶದಲ್ಲಿ ಅಳವಡಿಸಿಕೊಳ್ಳಲು ಉತ್ತೇಜಿಸಲಾಗಿದೆ.

ಹತ್ತಿಯಲ್ಲಿ ಗುಲಾಬಿ ಕಾಯಿಕೊರಕ ಹುಳುವಿನ ನಿಯಂತ್ರಣಕ್ಕಾಗಿ ಕಲ್ಯಾಣ-ಕರ್ನಾಟಕ ಪ್ರದೇಶದಾದ್ಯಂತ ಕೃಷಿ ಇಲಾಖೆಯ ಸಹಯೋಗದೊಂದಿಗೆ ಸಮೀಕ್ಷೆ, ಕೈಗೊಂಡು, ರೈತರಿಗೆ ಹತ್ತಿಯಲ್ಲಿ ಸಮಗ್ರ ಕೀಟ ನಿಯಂತ್ರಣ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಪಲ್ಸ್ ಮ್ಯಾಜಿಕ್ ತಾಂತ್ರಿಕತೆಯನ್ನು ಕಲಬುರಗಿ ಜಿಲ್ಲೆಯಲ್ಲಿ ಸುಮಾರು 6000 ಹೆ. ಪ್ರದೇಶದಲ್ಲಿ ರೈತರು ಅಳವಡಿಸಿಕೊಂಡಿದ್ದಾರೆ. ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ ಹೆಸರಿನ ತಳಿ ಬಿ.ಜಿ.ಎಸ್-9 ಬೀದರ ಜಿಲ್ಲೆಯಲ್ಲಿ ಸುಮಾರು 2300 ಹೆ. ಪ್ರದೇಶದಲ್ಲಿ ಹರಡಿದೆ.

ತೊಗರಿಯಲ್ಲಿ ಕುಡಿ ಚಿವುಟುವಿಕೆ ತಾಂತ್ರಿಕತೆಯನ್ನು ಕಲಬುರಗಿ ಜಿಲ್ಲೆಯಲ್ಲಿ ಸುಮಾರು 4000 ಹೆ. ಪ್ರದೇಶದಲ್ಲಿ ರೈತರು ಅಳವಡಿಸಿಕೊಂಡಿದ್ದಾರೆ. ನಂತರ ನೂತನ ತಾಂತ್ರಿಕತೆಗಳನ್ನು 847 ಹೆ. ಪ್ರದೇಶದಲ್ಲಿ ಮಂಚೂಣಿ ಪ್ರಾತ್ಯಕ್ಷಿಕೆಗಳನ್ನು ಕೈಗೊಂಡು 2341 ರೈತರನ್ನು ಉತ್ತೇಜಿಸಲಾಗಿದೆ

ಕೃಷಿ ವಿಜ್ಞಾನ ಕೇಂದ್ರಗಳ ಮಣ್ಣು ಪರೀಕ್ಷೆ ಕೇಂದ್ರಗಳಲ್ಲಿ 4688 ಮಣ್ಣು ಹಾಗೂ 2082 ನೀರಿನ ಮಾದರಿಗಳನ್ನು ವಿಶ್ಲೇಷಿಸಿ ರೈತರಿಗೆ ಮಾಹಿತಿ ನೀಡಲಾಗಿದೆ. ಹಾಗೂ ಎಲ್ಲ ಅಭಿವೃದ್ಧಿ ಇಲಾಖೆಯ ಸಿಬ್ಬಂದಿಗಳಿಗೆ ತರಬೇತಿ, ಪ್ರಾತ್ಯಕ್ಷಿಕೆ, ತಿಳುವಳಿಕೆ ಶಿಬಿರ, ಆಕಾಶವಾಣಿ ಮತ್ತು ದೂರದರ್ಶನದ ಮೂಲಕ ರೈತರಿಗೆ ನಿರಂತರವಾಗಿ ಮಾಹಿತಿ ಒದಗಿಸಲಾಗುತ್ತಿದೆ.

ತಂತ್ರಜ್ಞಾನದ ಬಳಕೆ ಮಾಡಿಕೊಂಡು ನಿಯಮಿತವಾಗಿ ಸಮಸ್ಯಾತ್ಮಕ ರೈತರ ತಾಕುಗಳ ಭೇಟಿ, ದೂರವಾಣಿ ಮುಖಾಂತರ ಸಲಹೆ, ಕೃಷಿ ಸಂಬಂಧಿತ ಮಾರ್ಗದರ್ಶನ ನೀಡುವುದರ ಜೊತೆಗೆ ರೇಡಿಯೋ (ಸುಮಾರು 90 ಕಾರ್ಯಕ್ರಮಗಳು), ದೂರದರ್ಶನ (ಸುಮಾರು 60 ಕಾರ್ಯಕ್ರಮಗಳು), ಮೊಬೈಲ್ ಸಂದೇಶಗಳು (30,000), ವಾಟ್ಸಪ್ ಸಂದೇಶಗಳು (2,50,000) ಮುಖಾಂತರ ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ ತಂತ್ರಜ್ಞಾನಗಳನ್ನು ರೈತರಿಗೆ ತಲುಪಿಸಲಾಗುತ್ತಿದೆ.

ರಾಸುಗಳಿಗೆ ಬರುವ ಉಣ್ಣೆ ಬಾಧೆಯನ್ನು ನಿಯಂತ್ರಿಸುವ ತಾಂತ್ರಿಕತೆಯನ್ನು ವಿಶ್ವವಿದ್ಯಾಲಯವು ಪಶುವೈದ್ಯಕೀಯ ಇಲಾಖೆ, ಬಳ್ಳಾರಿ ಮತ್ತು ಬಿ.ಎ.ಐ.ಎಫ್., ಸಂಸ್ಥೆಗಳ ಸಹಕಾರದಲ್ಲಿ ರೈತರಿಗೆ ಮಾಹಿತಿ ನೀಡಲಾಗಿದೆ.

ಕೃಷಿ ವಿಶ್ವವಿದ್ಯಾಲಯವು ಕಲ್ಯಾಣ-ಕರ್ನಾಟಕ ಪ್ರದೇಶದ ಪ್ರತಿ ರೈತ ಸಂಪರ್ಕ ಕೇಂದ್ರಗಳಿಗೆ ಒಬ್ಬ ವಿಜ್ಞಾನಿಯಂತೆ ಸುಮಾರು 162 ರೈತ ಸಂಪರ್ಕ ಕೇಂದ್ರಗಳಿಗೆ ನಿಯೋಜನೆಗೊಳಿಸಿ ಗ್ರಾಮ ಮಟ್ಟದಲ್ಲಿ ಕೃಷಿ ಸಂಬಂಧಿತ ಸಲಹೆ / ಮಾಹಿತಿಯನ್ನು ನೀಡಲಾಗುತ್ತಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ದೇಸೀ

ಕಾರ್ಯಕ್ರಮದ ಮೂಲಕ ಕೃಷಿ ಪರಿಕರಗಳ ಮಾರಾಟಗಾರರಿಗೆ ತರಗತಿಗಳನ್ನು ತೆಗೆದುಕೊಂಡು ತರಬೇತಿ ನೀಡಿ ಡಿಪ್ಲೊಮ ಪ್ರಮಾಣ ಪತ್ರ ನೀಡಲಾಗುತ್ತಿದೆ.

ನಮ್ಮ ನಾಡಿಗೆ, ನಮ್ಮ ರೈತರಿಗೆ ಕೃಷಿ ವಿಜ್ಞಾನದಲ್ಲಿ ನಡೆದ ಹೊಸ ಪ್ರಯೋಗಗಳ ತಲುಪಿಸುವ ನಿಟ್ಟಿನಲ್ಲಿ ಕೃಷಿ ಪ್ರದೀಪಿಕೆ ಎಂಬ ತ್ರೈಮಾಸಿಕವನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಿಂದ 2009 ರಿಂದ ಪ್ರಕಟಿಸುತ್ತಿದ್ದು, ಈ ಸಂಚಿಕೆ ರಾಜ್ಯಾದ್ಯಂತ ವಿತರಣೆಯಾಗುತ್ತಿದ್ದು, ಇದುವರೆಗೆ 1776 ಚಂದಾದಾರರನ್ನು ಹೊಂದಿದೆ.

ಸಮಾಜ ಸೇವಾ ಕಾರ್ಯಕ್ರಮಗಳು:

ರಾಷ್ಟ್ರೀಯ ಸೇವಾ ಯೋಜನೆಯಲ್ಲಿಯೂ ಸಹ ವಿಶ್ವವಿದ್ಯಾಲಯ ಅತ್ಯಂತ ಸಕ್ರೀಯವಾಗಿ ಭಾಗವಹಿಸಿ ವನಮಹೋತ್ಸವ, ಪಲ್ಸ ಪೋಲಿಯೋ ಜಾಗೃತಿ ಕಾರ್ಯಕ್ರಮ, ಸದ್ಭಾವನಾ ರ್ಯಾಲಿ, ಏಡ್ಸ ಜಾಗೃತಿ ಕಾರ್ಯಕ್ರಮ, ವ್ಯಕ್ತಿತ್ವ ವಿಕಸನ ಶಿಬಿರಗಳ ಮುಖಾಂತರ ಸಮಾಜಕ್ಕೆ ಕಾಣಿಕೆ ನೀಡುತ್ತಿದೆ. ರಾಷ್ಟ್ರೀಯ ಸೇವಾ ಯೋಜನೆಯನ್ನು ನಮ್ಮ ವಿಶ್ವವಿದ್ಯಾಲಯ, ಸ್ನಾತಕ ವಿದ್ಯಾರ್ಥಿಗಳಿಗೆ ಪಠ್ಯೇತರ ವಿಷಯವನ್ನಾಗಿ ಅಂಗೀಕರಿಸಿದೆ. ಒಟ್ಟಾರೆ, ಈ ಭಾಗದ ರೈತರ ಸರ್ವ ಸಮಸ್ಯೆಗಳಿಗೂ ಸ್ಪಂದಿಸುವ ಸಂಕಲ್ಪದಿಂದ ಮುನ್ನುಗ್ಗುವ ಉತ್ಸಾಹ ವಿಶ್ವವಿದ್ಯಾಲಯಕ್ಕಿದ್ದು, ಅದು ಸಾಕಾರಗೊಳ್ಳುವಲ್ಲಿ ಸಮಸ್ತ ಸಿಬ್ಬಂದಿ ಕಂಕಣಬದ್ಧರಾಗಿದ್ದು, ಬರುವ ದಿನಗಳಲ್ಲಿ ರಾಯಚೂರು ವಿಶ್ವವಿದ್ಯಾಲಯ "ರೈತರ ವಿಶ್ವವಿದ್ಯಾಲಯ"ವಾಗಿ ಪ್ರಕಾಶಮಾನವಾಗುವುದರಲ್ಲಿ ಸಂದೇಹವಿಲ್ಲ.

ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗ

ಸಂಕ್ಷಿಪ್ತ ವಾರ್ಷಿಕ ವರದಿ: **2019-20**

ಶಿಕ್ಷಣ

ಪ್ರಮುಖ ಚಟುವಟಿಕೆಗಳು/ಸಾಧನೆಗಳು

- ಪ್ರಸ್ತುತ ವರ್ಷ ಒಟ್ಟು 433 ವಿದ್ಯಾರ್ಥಿಗಳು ವಿವಿಧ ಆವರಣಗಳಾದ ಶಿವಮೊಗ್ಗ, ಹಿರಿಯೂರು, ಮೂಡಿಗೆರೆ ಮತ್ತು ಪೊನ್ನಂಪೇಟೆ ಕಾಲೇಜುಗಳಲ್ಲಿ ಸ್ನಾತಕ ಪದವಿ ಕಾರ್ಯಕ್ರಮಗಳಿಗೆ ಪ್ರವೇಶಾತಿ ಪಡೆದಿದ್ದಾರೆ. 107 ವಿದ್ಯಾರ್ಥಿಗಳು ಶಿವಮೊಗ್ಗ, ಮೂಡಿಗೆರೆ ಮತ್ತು ಪೊನ್ನಂಪೇಟೆ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿಗೆ ಹಾಗೂ 74 ವಿದ್ಯಾರ್ಥಿಗಳು ಕತ್ತಲಗೆರೆ ಮತ್ತು ಬ್ರಹ್ಮಾವರದಲ್ಲಿ ಡಿಪ್ಲೊಮೊ ಕೃಷಿಗೆ ಪ್ರವೇಶ ಪಡೆದಿರುತ್ತಾರೆ.
- ಅರಣ್ಯ ಮಹಾವಿದ್ಯಾಲಯ, ಪೊನ್ನಂಪೇಟೆಯಲ್ಲಿ 2019-20ನೇ ಶೈಕ್ಷಣಿಕ ಸಾಲಿನಿಂದ ಎಂ.ಎಸ್ಸಿ ಅರಣ್ಯ ಶಾಸ್ತ್ರ (ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ) ಹಾಗೂ ಪಿ.ಹೆಚ್.ಡಿ. ಅರಣ್ಯ ಶಾಸ್ತ್ರ (ಮರಗಳ ವಿಜ್ಞಾನ ಮತ್ತು ಕೃಷಿ ಅರಣ್ಯ) ಎಂಬ ವಿಷಯದಲ್ಲಿ ಹೊಸ ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗಿದೆ.
- ನಮ್ಮ ಯುವ ವಿಶ್ವವಿದ್ಯಾಲಯವು ಅಖಿಲ ಭಾರತ ಐಸಿಎಆರ್ – **Ranking** ಪಟ್ಟಿಯಲ್ಲಿ ರಾಷ್ಟ್ರಮಟ್ಟದಲ್ಲಿ 51ನೇ Ranking ನಿಂದ 21ನೇ Ranking ಗೆ ಬಡ್ತಿ ಪಡೆದು ಮೇಲ್ದರ್ಜೆಗೆ ಏರಿದೆ. ರಾಜ್ಯಮಟ್ಟದಲ್ಲಿ 2ನೇ **Rank** ಗಳಿಸಿ, 4 ಸ್ಟಾರ್ ಪಡೆದಿದೆ.
- ದಿನಾಂಕ 29-02-2020 ರಂದು ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಕಾರ್ಯಕ್ರಮದಲ್ಲಿ ಸ್ನಾತಕ ಪದವಿಯಲ್ಲಿ 245 ವಿದ್ಯಾರ್ಥಿಗಳಿಗೆ (ಬಿ.ಎಸ್ಸಿ. ಕೃಷಿ, ತೋಟಗಾರಿಕೆ ಮತ್ತು ಅರಣ್ಯ), ಕೃಷಿ, ತೋಟಗಾರಿಕೆ ಮತ್ತು ಅರಣ್ಯ ವಿಷಯಗಳಲ್ಲಿ 86 ಎಂ.ಎಸ್ಸಿ. ವಿದ್ಯಾರ್ಥಿಗಳಿಗೆ ಮತ್ತು 13 ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇದರಲ್ಲಿ 7 ಬಿ.ಎಸ್ಸಿ. ವಿದ್ಯಾರ್ಥಿಗಳಿಗೆ 13 ಚಿನ್ನದ ಪದಕಗಳನ್ನು, 8 ಎಂ.ಎಸ್ಸಿ. ವಿದ್ಯಾರ್ಥಿಗಳಿಗೆ 8 ಚಿನ್ನದ ಪದಕಗಳನ್ನು ಮತ್ತು 4 ಪಿಹೆಚ್.ಡಿ. ವಿದ್ಯಾರ್ಥಿಗಳಿಗೆ 5 ಚಿನ್ನದ ಪದಕಗಳಂತೆ ಒಟ್ಟಾರೆ 26 ಚಿನ್ನದ ಪದಕಗಳನ್ನು 19 ವಿದ್ಯಾರ್ಥಿಗಳಿಗೆ ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದಿಂದ ಪ್ರದಾನ ಮಾಡಲಾಯಿತು.
- ಚೀನಾದಲ್ಲಿ ಜೂನ್ 30 ರಿಂದ ಜುಲೈ 10, 2019 ರ ವರೆಗೆ ನಡೆದ "**Youth Exchange Programme**-2019" ನಲ್ಲಿ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಭಾರತ ಸರ್ಕಾರದ ರಾಷ್ಟ್ರೀಯ ಸೇವಾಯೋಜನಾ ಘಟಕದಿಂದ ಭಾರತದಿಂದ ಅದರಲ್ಲೂ ನಮ್ಮ ಕರ್ನಾಟಕದಿಂದ ಕುಮಾರಿ ಶ್ವೇತಾ. ಬಿ.ಎಸ್ಸಿ (ಅರಣ್ಯ), ಆಯ್ಕೆಯಾಗಿ ವಿದೇಶದಲ್ಲಿ ಭಾರತದ ಏಕೈಕ ವಿದ್ಯಾರ್ಥಿನಿಯಾಗಿ ಪ್ರತಿನಿಧಿಸಿದ್ದಾರೆ.

- ಕುಮಾರಿ ವಿದ್ಯಾಶ್ರೀ ಎ. ಎಸ್., ಕೃಷಿ ಕೀಟಶಾಸ್ತ್ರ ವಿಭಾಗ ಇವರು 2019ರ ಅತ್ಯುತ್ತಮ ಪಿಹೆಚ್.ಡಿ. ಪ್ರಬಂಧಕ್ಕೆ ರಾಷ್ಟ್ರ ಮಟ್ಟದ ಐ.ಸಿ.ಎ.ಆರ್. ಜವಾಹರಲಾಲ್‌ನೆಹರು ಪ್ರಶಸ್ತಿಯನ್ನು ಪಡೆದಿರುತ್ತಾರೆ.
- ಸಮ್ಮೇಳನಗಳು: ಮೇ 20, 2019 ರಂದು 'ಕೃಷಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಸಂಶೋಧನಾ ಸಮ್ಮೇಳನ-2019' ಡಿಸೆಂಬರ್ 28 ಮತ್ತು 29, 2019ರಂದು ಎರಡು ದಿನಗಳ ಕಾಲ "ಭಾರತದ ಪ್ರಾಚೀನ ಸಾಹಿತ್ಯದಲ್ಲಿ ಕೃಷಿ ವಿಜ್ಞಾನ"ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಜನವರಿ 28 ಮತ್ತು 29, 2020 ರಂದು ``ಸುಸ್ಥಿರ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ: ಎಂಜಿನಿಯರಿಂಗ್ ದೃಷ್ಟಿಕೋನ'' ಕುರಿತು ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ.
- ರಾಷ್ಟ್ರಮಟ್ಟದ ತರಬೇತಿ ಕಾರ್ಯಾಗಾರ: ಜನವರಿ 13 ರಿಂದ 17, 2020 ರಂದು "ಹವಾಮಾನ ಬದಲಾವಣೆ: ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿ ಕೃಷಿ ಹವಾಮಾನ ಚೇತರಿಕೆ - ತಂತ್ರಜ್ಞಾನಗಳ ಮೂಲಕ ಅಳವಡಿಕೆ ಮತ್ತು ಮೌಲ್ಯಮಾಪನದ ಪರಿಣಾಮ" ಕುರಿತ ಐದು ದಿನಗಳ ತರಬೇತಿ ಕಾರ್ಯಕ್ರಮವನ್ನು ಫೆಬ್ರವರಿ 4 ರಿಂದ 8 2020 ರಂದು "ಸಂರಕ್ಷಿತ ಬೇಸಾಯ ಪದ್ಧತಿಯಲ್ಲಿ ಜಂತುಹುಳುಗಳ ನಿರ್ವಹಣೆ" ರಾಷ್ಟ್ರಮಟ್ಟದ ತರಬೇತಿ ಕಾರ್ಯಕ್ರಮ ಕೃಷಿ ಮಹಾವಿದ್ಯಾಲಯ ಶಿವಮೊಗ್ಗದಲ್ಲಿ ಫೆಬ್ರುವರಿ 20 ರಿಂದ 29, 2020ರವರೆಗೆ "ಸಸ್ಯ ಬೆಳವಣಿಗೆ ಪ್ರಚೋದಕ ಸೂಕ್ಷ್ಮಾಣು ಜೀವಿಗಳ ಬಗ್ಗೆ ಇತ್ತೀಚಿನ ಪ್ರಗತಿಗಳು" ಕುರಿತ ರಾಷ್ಟ್ರಮಟ್ಟದ ತರಬೇತಿ ಕಾರ್ಯಾಗಾರ.
- ಪ್ರಶಸ್ತಿಗಳು
- ಡಾ. ಲಕ್ಷ್ಮಣ, ಪ್ರಾಧ್ಯಾಪಕರು, ಇವರಿಗೆ 29 ಜುಲೈ 2019ರಂದು "ಐಎಎಸ್‌ಆರ್ ಶ್ರೇಷ್ಠ ಪ್ರಶಸ್ತಿಯನ್ನು" ಅಂತಾರಾಷ್ಟ್ರೀಯ ವಿಜ್ಞಾನ ಮತ್ತು ಸಂಶೋಧನಾ ಅಕಾಡಮಿ ಕೋಲ್ಕಾತ್ತದಿಂದ ಪ್ರದಾನ ಮಾಡಲಾಗಿದೆ.
- ಡಾ. ಜ್ಯೋತಿ ಎಮ್. ರಾಠೋಡ್, ವಿಜ್ಞಾನಿ (ಗೃಹ ವಿಜ್ಞಾನ), ಇವರಿಗೆ ದಿನಾಂಕ 20, ಅಕ್ಟೋಬರ್ 2019ರ "ಸರ್ದಾರ್ ಪಟೇಲ್ ಗ್ಲೋಕಲ್ ಪ್ರಶಸ್ತಿ" ಮತ್ತು ದಿನಾಂಕ 1 ಮತ್ತು 2 ಡಿಸೆಂಬರ್ 2019ರಂದು ಉತ್ತರಕಾಂಡ್‌ನಲ್ಲಿ "ಅತ್ಯುತ್ತಮ ವಿಸ್ತರಣಾ ವಿಜ್ಞಾನಿ ಪ್ರಶಸ್ತಿ"
- ಡಾ. ಜಯಲಕ್ಷ್ಮಿನಾರಾಯಣ ಹೆಗಡೆ, ಪ್ರಾಧ್ಯಾಪಕರು ಇವರಿಗೆ ದಿನಾಂಕ 19, ಡಿಸೆಂಬರ್ 2019ರಂದು ರಾಷ್ಟ್ರೀಯ ಪರಿಸರ ವಿಜ್ಞಾನ ಅಕಾಡೆಮಿ ಕೊಡಲ್ಪಡುವ 2019ನೇ ವರ್ಷದ "ನೇಸಾ ಫೆಲೋಶಿಪ್ ಆಫ್ ದಿ ಇಯರ್ ಪ್ರಶಸ್ತಿ" ಯನ್ನು ನೀಡಿ ಗೌರವಿಸಲಾಗಿದೆ.
- ಡಾ. ಎಂ. ಕೆ. ನಾಯ್ಕ್, ಗೌರವಾನ್ವಿತ ಕುಲಪತಿಗಳು ಇವರಿಗೆ ಜನವರಿ 16 ರಿಂದ 20, 2020ರವರೆಗೆ ಐ.ಎ.ಆರ್.ಐ ನವದೆಹಲಿಯಲ್ಲಿ ಜರುಗಿದ 7ನೇ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ

“ಸುಸ್ಥಿರ ಬೆಳೆ ರೋಗ ನಿರ್ವಹಣೆಯಲ್ಲಿ ಪಿಜಿಪಿಎಂನ ಸಾಮರ್ಥ್ಯಗಳನ್ನು ಅನ್ವೇಷಿಸುವುದರ“ ಕುರಿತು ರಾಷ್ಟ್ರಮಟ್ಟದ “ಬಿ. ಬಿ. ಮುಂಡಕುರ್ ಸ್ಮಾರಕ ಪ್ರಶಸ್ತಿ” ನೀಡಿ ಗೌರವಿಸಲಾಗಿದೆ.

- ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಶಿಕ್ಷಕರು

o ಡಾ. ಸಿ.ಜಿ. ಕುಶಾಲಪ್ಪ, ಡೀನ್ (ಅರಣ್ಯ), ಇವರು ದಿನಾಂಕ 20ರಿಂದ 22 ಮೇ, 2019 ರಂದು ಫ್ರಾನ್ಸ್‌ನಲ್ಲಿ ಜರುಗಿದ 4ನೇ ವಿಶ್ವ ಕೃಷಿ ಅರಣ್ಯ ಕಾಂಗ್ರೆಸ್‌ನಲ್ಲಿ ಭಾಗವಹಿಸಿರುತ್ತಾರೆ.

o ಡಾ. ಗಂಗಾಪ್ರಸಾದ್, ಪ್ರಾಧ್ಯಾಪಕರು ಇವರು ವಾಗೆನ್ಗೆನ್ ವಿಶ್ವವಿದ್ಯಾಲಯ, ನೆದರ್‌ಲ್ಯಾಂಡ್‌ನಲ್ಲಿ 17.06.2019 ರಿಂದ 28.06.2019 ವರೆಗೆ ನಡೆದ “ಸಸ್ಯ ತಳಿಗಾರರ ಆಹಾರ ಭದ್ರತೆ ಮತ್ತು ಆರ್ಥಿಕ ಅಭಿವೃದ್ಧಿಯ ಹಕ್ಕುಗಳು” ಎಂಬ ಅಲ್ಪಾವಧಿ ತರಬೇತಿಗೆ ನೆದರ್‌ಲ್ಯಾಂಡ್ ಸರ್ಕಾರವು ಆರೆಂಜ್ ನಾಲೆಡ್ಜ್ ಫೆಲೋಶಿಪ್ ಪ್ರಶಸ್ತಿಯನ್ನು ನೀಡಿದೆ.

o ಡಾ. ನಾರಾಯಣ. ಎಸ್. ಮಾವರ್ಕರ್, ಪ್ರಾಧ್ಯಾಪಕರು ಬೇಸಾಯಶಾಸ್ತ್ರ ವಿಭಾಗ, ಡಾ. ತಿಪ್ಪೇಶ್. ಡಿ, ಪ್ರಾಧ್ಯಾಪಕರು ತೋಟಗಾರಿಕೆ ವಿಭಾಗ, ಡಾ. ತಿಪ್ಪೇಶಪ್ಪ ಜಿ.ಎನ್, ಪ್ರಾಧ್ಯಾಪಕರು ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ ವಿಭಾಗ, ಡಾ. ಎಮ್. ಎಸ್. ನಂದೀಶ್, ಸಹಾಯಕ ಪ್ರಾಧ್ಯಾಪಕರು, ಕೃಷಿ ಸೂಕ್ಷ್ಮಜೀವಿಶಾಸ್ತ್ರ ವಿಭಾಗ ಮತ್ತು ಡಾ. ಗಣಪತಿ, ಮಣ್ಣು ವಿಜ್ಞಾನ ಮತ್ತು ಕೃಷಿ ರಸಾಯನ ಶಾಸ್ತ್ರ ವಿಭಾಗ ಇವರುಗಳು ಬ್ಯಾಂಕಾಕ್ ನಲ್ಲಿ ಜೂನ್ 19 ರಿಂದ 23 ವರೆಗೆ ನಡೆದ ಆಹಾರ, ಕೃಷಿ ಮತ್ತು ನಾವೀನ್ಯತೆ ಕುರಿತ ಪ್ರಥಮ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿರುತ್ತಾರೆ.

o ಡಾ. ಎನ್.ಇ. ನವೀನ್, ವಿಜ್ಞಾನಿ (ಬೇಸಾಯ ಶಾಸ್ತ್ರ) ಐಸಿಎಆರ್, ಕೃಷಿ ವಿಜ್ಞಾನ ಕೇಂದ್ರ, ಬ್ರಹ್ಮವಾರ, ಇವರು ದಿನಾಂಕ 3 ರಿಂದ 6 ಸೆಪ್ಟಂಬರ್ 2019 ರಂದು ಕುಚಿಂಗ್ ಸರವಕ್ ಮಲೇಷ್ಯಾದಲ್ಲಿ ಜರುಗಿದ 27ನೇ ಎಪಿಡಬ್ಲ್ಯೂಎಸ್‌ಎಸ್ ಅಂತಾರಾಷ್ಟೀಯ ಸಮ್ಮೇಳನದಲ್ಲಿ ಭಾಗವಹಿಸಿ, ಸಂಶೋಧನಾ ಪ್ರಬಂಧ ಮಂಡಿಸಿರುತ್ತಾರೆ.

ಸಂಶೋಧನೆ

- ಬಿಡುಗಡೆಯಾದ ತಳಿಗಳ ಪ್ರಸ್ತಾವನೆಗಳು: ಪ್ರಸಕ್ತ ಸಾಲಿನಲ್ಲಿ ಅಧಿಕ ಇಳುವರಿ ಕೊಡುವ ಸಹ್ಯಾದ್ರಿ ಕಾವೇರಿ ಎಂಬ ಎಲೆ ಮತ್ತು ಕುತ್ತಿಗೆ ಬೆಂಕಿ ರೋಗ ನಿರೋಧಕ ಹೊಂದಿರುವ ಮುಂಗಾರುವಿನಲ್ಲಿ ಬಯಲು ಗದ್ದೆಯಲ್ಲಿ ವಲಯ-9 ಕ್ಕೆ ಮತ್ತು ಸಹ್ಯಾದ್ರಿ ಯುಕ್ತಿ ಆಲಸಂದೆ (ಯು.ಎ.ಹೆಚ್.ಎಸ್-28) ತಳಿಯನ್ನು ಅರೆಮಲೆನಾಡು ಪ್ರದೇಶದ ತಡ ಮುಂಗಾರು ಮತ್ತು ಬೇಸಿಗೆಯಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿದೆ. ನೆಲೆಗಡಲೆಯಲ್ಲಿ ಡಿಎಚ್-256 ಎಂಬ ಎಲೆ ಚುಕ್ಕೆ ಮತ್ತು ತುಕ್ಕು ರೋಗ ತಡೆದು ಕೊಳ್ಳುವ ತಳಿಯನ್ನು ಮುಂಗಾರುವಿನಲ್ಲಿ ಬೆಳೆಯಲು ವಲಯ-4 ಕ್ಕೆ ಅನುಮೋದಿಸಲಾಗಿದೆ.

- ಸುಧಾರಿತ ಬೇಸಾಯ ಪದ್ಧತಿಗಳು ಕೈಪಿಡಿಗೆ ಮತ್ತು ಕ್ಷೇತ್ರ ಪ್ರಯೋಗಗಳ ಪ್ರಸ್ತಾಪಗಳು: ಬೆಳೆಗಳ ಸುಧಾರಣೆ, ಬೆಳೆ ಉತ್ಪಾದನೆ, ಬೆಳೆ ಸಂರಕ್ಷಣೆ, ಯಾಂತ್ರೀಕರಣ, ಮತ್ತು ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದ 15 ತಂತ್ರಜ್ಞಾನಗಳನ್ನು ಅಧಿಕ ಇಳುವರಿಗೆ ಸುಧಾರಿತ ಬೇಸಾಯ ಪದ್ಧತಿಗಳು (Package of Practices) ಪುಸ್ತಕದಲ್ಲಿ ಸೇರಿಸಲು ಮತ್ತು 10 ತಂತ್ರಜ್ಞಾನಗಳನ್ನು ರೈತರ ಕ್ಷೇತ್ರದಲ್ಲಿ ಪರೀಕ್ಷಿಸಲು ಕ್ಷೇತ್ರ ಪ್ರಯೋಗಗಳಿಗೆ ಮುಂದಿನ ವಿವಿಧ ವಲಯಗಳ ವಲಯ ಸಂಶೋಧನಾ ವಿಸ್ತರಣೆ ಕಾರ್ಯಕ್ರಮದ ಕಾರ್ಯಾಗಾರದಲ್ಲಿ ಶಿಫಾರಸ್ಸು ಮಾಡಲಾಗುವುದು.
- ಸಂಶೋಧನಾ ಯೋಜನೆಗಳು: ಪ್ರಸಕ್ತ ಸಾಲಿನಲ್ಲಿ ಸರ್ಕಾರ ಮತ್ತು ಇತರ ಸರ್ಕಾರೇತರ ಸಂಸ್ಥೆಗಳಿಂದ ಸುಮಾರು 779.96ಲಕ್ಷಗಳ ಅನುದಾನ ದೊರೆತ್ತಿದ್ದು, 202 ಯೋಜನೆಗಳು ಅನುಷ್ಠಾನದಲ್ಲಿವೆ. ಇವುಗಳಲ್ಲಿ ಕರ್ನಾಟಕ ಸರ್ಕಾರ ಯೋಜನೆ ಮತ್ತು ತಾತ್ಕಾಲಿಕ ಯೋಜನೆಗಳು (ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಾದ ಶೂನ್ಯ ಬಂಡವಾಳ ನೈಸರ್ಗಿಕ ಕೃಷಿ ಯೋಜನೆ, ಗೋಡಂಬಿ ಮತ್ತು ಕೋಕೋ ಅಭಿವೃದ್ಧಿ ನಿರ್ದೇಶನಾಲಯ, ಅಡಿಕೆ ಮತ್ತು ಸಾಂಬಾರು ಅಭಿವೃದ್ಧಿ ನಿರ್ದೇಶನಾಲಯ) ಹಾಗೂ ಹೊಸ ಕಾರ್ಯಕ್ರಮಗಳು ಪ್ರಗತಿಯ ಹಂತದಲ್ಲಿವೆ.
- 2019-20 ನೇ ಸಾಲಿನ ಕರ್ನಾಟಕ ಸರ್ಕಾರದ ಯೋಜನೆ ಅನುದಾನ ಹೊಸ ಕಾರ್ಯಕ್ರಮದಡಿಯಲ್ಲಿ 46 ಹೊಸ ಯೋಜನೆಗಳು (233.00 ಲಕ್ಷಗಳು) ಮತ್ತು 19 ಮುಂದುವರಿದ ಯೋಜನೆಗಳು (93.00 ಲಕ್ಷಗಳು) ಚಾಲ್ತಿಯಲ್ಲಿವೆ.
- ವಿಶ್ವವಿದ್ಯಾಲಯದ ಮುಖ್ಯ ಹಾಗೂ ಇತರೆ ಆವರಣಗಳಲ್ಲಿ ನಾಲ್ಕು ಉತ್ಕೃಷ್ಟತಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.
- ಮಿನಿ ಕೈಚಾಲಿತ ನೆಲೆಗಡಲೆ ಶೆಲ್ಲರ್ ಸಾಧನವನ್ನು ಅಭಿವೃದ್ಧಿಪಡಿಸಿದ್ದಕ್ಕೆ ವಿಶ್ವವಿದ್ಯಾಲಯಕ್ಕೆ ಭಾರತ ಸರ್ಕಾರದಿಂದ ಪೇಟೆಂಟ್ ಸಂಖ್ಯೆ ಲಭಿಸಿರುತ್ತದೆ.
- ಮೂಡಿಗೆರೆ ಮತ್ತು ಕೊಡಗು ಜಿಲ್ಲೆಗಳಲ್ಲಿ ಕಾಫಿ ಬೆಳೆಗಾರರಿಗೆ, ಕಾಫಿಸ್ಪೈಡ್ಡರ್ ಮತ್ತು ಕಾಫಿ ರೇಕರ್‌ಗಳನ್ನು ಅಭಿವೃದ್ಧಿಪಡಿಸಿ, ಜನಪ್ರಿಯಗೊಳಿಸಲಾಗಿದೆ.
- ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರ ಮಡಿಕೇರಿಯಲ್ಲಿ ಬೀಜಘಟಕ ಹಾಗೂ ಪಾಲಿಹೌಸ್ ಗಳನ್ನು ಸ್ಥಾಪಿಸಿ, ವಿದೇಶಿ (exotic) ತರಕಾರಿ ಮತ್ತು ಹೂವಿನ ಬೆಳೆಗಳ ಸಂರಕ್ಷಿತ ಬೇಸಾಯದ ಬಗ್ಗೆ ಸಂಶೋಧನೆ ಕೈಗೊಳ್ಳಲಾಗಿದೆ.
- ಪ್ರಸಕ್ತ ಸಾಲಿನಲ್ಲಿ ಸುಮಾರು 10272.03 ಕ್ವಿಂಟಾಲ್‌ಗಳಷ್ಟು ಬೀಜೋತ್ಪಾದನೆ ಮಾಡಲಾಗಿದೆ. ಅವುಗಳಲ್ಲಿ ಧಾನ್ಯಗಳು (10,016.57 ಕ್ವಿ.), ದ್ವಿದಳ ಧಾನ್ಯಗಳು (86.96 ಕ್ವಿ.), ತೈಲ ಬೀಜಗಳ (168.50 ಕ್ವಿ.) ಉತ್ಪಾದನೆ ಒಳಗೊಂಡಿರುತ್ತದೆ ಹಾಗೂ 2019-20 ನೇ ಸಾಲಿನಲ್ಲಿ 16,325 ಕ್ವಿಂಟಾಲ್‌ಗಳಷ್ಟು ಬೀಜೋತ್ಪಾದನೆ ಮಾಡಲು ಗುರಿ ಹೊಂದಲಾಗಿದೆ

- ಸಾವಯವ ಕೃಷಿ ಸಂಶೋಧನಾ ಸಂಸ್ಥೆಯಿಂದ 12 ಉತ್ಪನ್ನಗಳಿಂದ ಸುಮಾರು 14,564 ಕ್ವಿಂಟಾಲ್ ಜೈವಿಕ ಗೊಬ್ಬರ ಮತ್ತು ಜೈವಿಕ ನಿಯಂತ್ರಣ ಏಜೆಂಟ್‌ಗಳನ್ನು ಉತ್ಪಾದಿಸಿ ಮಾರಾಟ ಮಾಡಿ ರೂ. 14,58,900 ಗಳ ಆದಾಯ ಬಂದಿರುತ್ತದೆ ಮತ್ತು ಪ್ರಸಕ್ತ ವರ್ಷದಲ್ಲಿ ಸಾವಯವ ಕೃಷಿ ಸಂಶೋಧನಾ ಸಂಸ್ಥೆಯಿಂದ ಸುಮಾರು 1,270 ಕೆ.ಜಿ ಗಳಷ್ಟು ಜೇನು ತುಪ್ಪವನ್ನು ಉತ್ಪಾದಿಸಿ ವಿಶ್ವವಿದ್ಯಾಲಯದ ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಿ ಮಾರಾಟ ಮಾಡಲಾಗಿದೆ. ವಿಶ್ವವಿದ್ಯಾಲಯದ ಈ ಎಲ್ಲಾ ಉತ್ಪನ್ನಗಳನ್ನು ಸಹ್ಯಾದ್ರಿ ಬ್ರಾಂಡ್ ಹೆಸರಿನಲ್ಲಿ ಮಾರಾಟ ಮಾಡಲಾಗುತ್ತಿದೆ.
- ಪ್ರಸಕ್ತ ವರ್ಷದಲ್ಲಿ ವಿಶ್ವವಿದ್ಯಾಲಯದಡಿಯಲ್ಲಿ ರಾಜ್ಯ ಮತ್ತು ಹೊರ ರಾಜ್ಯಗಳ ವಿವಿಧ ಸಂಸ್ಥೆಗಳ 20 ಹೊಸ ಉತ್ಪನ್ನಗಳನ್ನು ಪರೀಕ್ಷೆಗೊಳಪಡಿಸಿ ಸುಮಾರು ರೂ. 38.00 ಲಕ್ಷ ರೂಗಳ ಆದಾಯ ಬಂದಿರುತ್ತದೆ.
- ಉಲ್ಲಾಳದ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದ ಗೇರು ನರ್ಸರಿಯು, ಭಾರತ ಸರ್ಕಾರದ ಗೇರು ಮತ್ತು ಕೋಕೋ ಅಭಿವೃದ್ಧಿ ನಿರ್ದೇಶನಾಲಯ, ಕೊಚ್ಚಿನ್, ಕೇರಳದಿಂದ ಮಾನ್ಯತೆ (**Accreditation**) ಪಡೆದಿದ್ದು, 3 Star Nursery ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಮುಂದುವರೆದು, ಮೂಡಿಗೆರೆ ಮತ್ತು ಬಾವಿಕೆರೆ ಸಂಶೋಧನಾ ಕೇಂದ್ರದ ನರ್ಸರಿಗಳು 4 Star Nursery ಎಂಬ ಹೆಗ್ಗಳಿಕೆಗೆ ಪಾತ್ರವಾಗಿವೆ.
- ಅಖಿಲ ಭಾರತ ಸುಸಂಘಟಿತ ಸಂಶೋಧನಾ ಯೋಜನೆಗಳು: ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಇವರಿಂದ ಅಖಿಲ ಭಾರತ ಸುಸಂಘಟಿತ ಸಂಶೋಧನಾ 10 ಪ್ರಾಯೋಜನೆಗಳು ಕೃಷಿ ಅರಣ್ಯ, ತಂಬಾಕು, ಸಮಗ್ರ ಕೃಷಿ ಪದ್ಧತಿ, ತಾಳೆ ಬೆಳೆ, ಅಡಿಕೆ, ಸಾಂಬಾರು ಪದಾರ್ಥಗಳು, ಭತ್ತ, ತೃಣಧಾನ್ಯಗಳು, ಬೆಳ್ಳುಳ್ಳಿ ಮತ್ತು ಈರುಳ್ಳಿ ಹಾಗೂ ಮೆಕ್ಕೆಜೋಳಕ್ಕೆ ವಿಷಯಗಳಿಗೆ ಸಂಬಧಿಸಿದಂತೆ ಯೋಜನೆಗಳು ನಡೆಯುತ್ತಲಿವೆ.

ವಿಸ್ತರಣೆ

- "ನೆರೆ ಮತ್ತು ಬರನಿರ್ವಹಣೆಯ" ಬಗ್ಗೆ ವಿಚಾರ ಸಂಕಿರಣ-**2019**: ಪ್ರಸಕ್ತ ವರ್ಷದಲ್ಲಿ ಕರ್ನಾಟಕ ರಾಜ್ಯವು ಬೀಕರ ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ತತ್ತರಿಸಿದ್ದು, ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರವು ಸಾಕಷ್ಟು ಬೆಳೆ ಹಾನಿ ಮತ್ತು ನಷ್ಟವನ್ನು ಅನುಭವಿಸಿದೆ. ಎಲ್ಲಾ ಅಂಶಗಳನ್ನು ಪರಿಗಣಿಸಿ ವಿಶ್ವವಿದ್ಯಾನಿಲಯವು ಕೃಷಿ ಮೇಳವನ್ನು ಆಯೋಜಿಸುವ ಬದಲು ಒಂದು ದಿನದ "ನೆರೆ ಮತ್ತು ಬರ ನಿರ್ವಹಣೆಯ" ವಿಚಾರ ಸಂಕಿರಣವನ್ನು ಏರ್ಪಡಿಸಿ ರೈತರಿಗೆ ಈ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ತಂತ್ರಜ್ಞಾನಗಳ ತಿಳುವಳಿಕೆ ಮತ್ತು ಅದಕ್ಕೆ ಸಂಬಂಧಪಟ್ಟ ಉಪನ್ಯಾಸವನ್ನು ದಿನಾಂಕ 06 ನವೆಂಬರ್ 2019 ರಂದು ಹಮ್ಮಿಕೊಳ್ಳಲಾಗಿತ್ತು.

- ಕೃಷಿ ವಿಜ್ಞಾನ ಕೇಂದ್ರಗಳ ವಾರ್ಷಿಕ ತಾಂತ್ರಿಕ ಕಾರ್ಯಗಾರ: ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯ, ಶಿವಮೊಗ್ಗದ ವಿಸ್ತರಣಾ ನಿರ್ದೇಶನಾಲಯದಿಂದ ವತಿಯಿಂದ ದಕ್ಷಿಣ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಕೇರಳ, ಗೋವಾ ಮತ್ತು ಪಾಂಡಿಚೆರಿಯಲ್ಲಿರುವ ವಲಯ-11ರ ಕೃಷಿ ವಿಜ್ಞಾನ ಕೇಂದ್ರಗಳ ವಾರ್ಷಿಕ ತಾಂತ್ರಿಕ ಕಾರ್ಯಗಾರವನ್ನು ದಿನಾಂಕ: 14 ರಿಂದ 16 ಮೇ, 2019 ವರೆಗೆ ಕೆ.ವಿ.ಕೆ., ಮೂಡಿಗೆರೆಯಲ್ಲಿ ಆಯೋಜಿಸಲಾಗಿತ್ತು.
- ಐ.ಸಿ.ಎ.ಆರ್, ಸಂಸ್ಥಾಪನಾ ದಿನಾಚರಣೆ: ನಿರ್ದೇಶಕರು, ಕೃಷಿ ತಂತ್ರಜ್ಞಾನ ಅನ್ವಯ ಸಂಸ್ಥೆ, ಬೆಂಗಳೂರು ಇವರು ಕರ್ನಾಟಕ ರಾಜ್ಯದಿಂದ ನೂತನ ತಂತ್ರಜ್ಞಾನ ಅಳವಡಿಸಿಕೊಂಡಿರುವ ಇಬ್ಬರು ರೈತರನ್ನು ಆಯ್ಕೆ ಮಾಡಿದ್ದರು, ಡಾ. ವಿವೇಕ್ (ಕಾಳುಮೆಣಸಿನ ಕೃಷಿಕರು) ಚಿಕ್ಕಮಗಳೂರು ಜಿಲ್ಲೆ ಹಾಗೂ ಡಾ. ಕರಿಬಸಪ್ಪ, (ಸೌರ ಬಲೆ) ಇವರು ಕೃಷಿಯಲ್ಲಿ ಅಳವಡಿಸಿಕೊಂಡಿರುವ ನೂತನ ತಂತ್ರಜ್ಞಾನವನ್ನು ದಿ: 16-17 ಜುಲೈ-2019 ರಂದು ಐ.ಸಿ.ಎ.ಆರ್ ಸಂಸ್ಥಾಪನಾ ದಿನಾಚರಣೆಯ ಸಂದರ್ಭದಲ್ಲಿ ಪ್ರಸ್ತುತಪಡಿಸಿದ್ದಾರೆ.
- ವೃತ್ತಿಪರ ತರಬೇತಿ ಕಾರ್ಯಕ್ರಮಗಳು: 08 ತರಭೇತಿಗಳನ್ನು 41 ರೈತರನ್ನು ವೈಜ್ಞಾನಿಕ ಕುರಿ ಮತ್ತು ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಬೇಕರಿ ಉತ್ಪನ್ನಗಳ ತಯಾರಿಕೆ – ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ, ಈರುಳ್ಳಿ ಬೆಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಗ್ರಾಮೀಣ ಯುವಕರಿಗೆ ತೋಟಗಾರಿಕೆಯಲ್ಲಿ ಸ್ವ ಉದ್ಯೋಗ ಕುರಿತು ತರಬೇತಿಗಳನ್ನು ರೈತರಿಗೆ ಮತ್ತು ವಿಸ್ತರಣಾ ಸಿಬ್ಬಂದಿಗಳು ಪಾಲ್ಗೊಂಡಿದ್ದರು.
- ಮಣ್ಣು, ನೀರು, ಗೊಬ್ಬರ ಮಾದರಿಗಳ ವಿಶ್ಲೇಷಣೆಯ ವಿವರ

(ರೂ.ಗಳಲ್ಲಿ)

ವಿವರಗಳು	ಮಾದರಿಗಳ ವಿಶ್ಲೇಷಣೆ ಸಂಖ್ಯೆ	ಫಲಾನುಭವಿ ರೈತರ ಸಂಖ್ಯೆ	ಬಿಡುಗಡೆಯಾದ ಮೊತ್ತ
ಮಣ್ಣಿನ ಮಾದರಿಗಳು	8,277	8,134	4,13,850
ನೀರಿನ ಮಾದರಿಗಳು	2,129	1,499	2,12,900
ಒಟ್ಟು	10,406	9633	**6,26,750**

- "ರೈತನಾಡಿ ಆಂಡ್ರಾಯ್ಡ್ ತಂತ್ರಾಂಶದ ಮಾಹಿತಿ": ಶಿವಮೊಗ್ಗ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯದ ವತಿಯಿಂದ ನೂತನವಾಗಿ ಬಿಡುಗಡೆಗೊಂಡಿರುವ ರೈತರಿಗೆ, ವಿದ್ಯಾರ್ಥಿಗಳಿಗೆ,

ಉದ್ಯಮಿಗಳಿಗೆ, ಸಾರ್ವಜನಿಕರಿಗೆ ಸಹಾಯಕವಾಗಿ ರೈತನಾಡಿ ಆಂಡ್ರಾಯ್ಡ್ ತಂತ್ರಾಂಶವು ಕೃಷಿ, (ಭತ್ತ ಮತ್ತು ಮೆಕ್ಕೆಜೋಳ) ತೋಟಗಾರಿಕೆ (ಅಡಿಕೆ ಮತ್ತು ಗೋಡಂಬಿ) ಪಶುಸಂಗೂಪನೆ, ಮೀನುಗಾರಿಕೆ ಹಾಗೂ ಅರಣ್ಯ (ಶ್ರೀಗಂಧ, ಬಿದಿರು) ಸಂಬಂಧಿಸಿದಂತೆ ಕೆಲವು ಉಪಯುಕ್ತ ಮಾಹಿತಿಗಳನ್ನು ಹೊಂದಿರುತ್ತದೆ

- **2019-2020**ನೇ ಸಾಲಿನಲ್ಲಿ ತೆಗೆದುಕೊಂಡ ನೂತನ ಯೋಜನೆಗಳು
- ಕರಾವಳಿ ಜಿಲ್ಲೆಯ ರೈತರಿಗೆ ತೆಂಗಿನ ಮರದ ಒಣಗಿದ ಭಾಗಗಳಿಂದ ಕಾಂಪೋಸ್ಟ್ ಹಾಗೂ ಎರೆಹುಳು ಗೊಬ್ಬರ ಉತ್ಪಾದನೆಯ ಬಗ್ಗೆ ಪ್ರಾತ್ಯಕ್ಷಿಕೆ ಹಾಗೂ ತರಬೇತಿ.
- ಅಡಿಕೆಯಿಂದ ಬರುವ ತ್ಯಾಜ್ಯಗಳಿಂದ (ಅಡಿಕೆ ಸಿಪ್ಪೆ, ಎಲೆ ಮತ್ತು ಹಾಳೆ) ಕಾಂಪೋಸ್ಟ್ ತಯಾರಿಕೆ ವಿಧಾನವನ್ನು ಜನಪ್ರಿಯಗೊಳಿಸುವುದು.
- ಪರ್ಯಾಯ ಬೆಳೆಯಾಗಿ ಕಡಿಮೆ ಅವಧಿಯ ರಾಗಿ ತಳಿ ಎಮ್ ಎಲ್-365ನ ಉತ್ತೇಜನ
- ರಬ್ಬರ್ ಬೆಳೆಗಳಲ್ಲಿ ಬಹುಮಡಿ ಪದ್ದತಿಯ ಪ್ರಾತ್ಯಕ್ಷಿಕೆ.
- ಗುಣಮಟ್ಟದ ಕಾಳು ಮೆಣಸಿನ ಸಸಿಗಳಿಗಾಗಿ ಬೆಳೆಗಳಲ್ಲಿ ಸೂಕ್ಷ್ಮ ಪೌಷ್ಠಿಕಾಂಶ ನಿರ್ವಹಣೆಯನ್ನು ಪರಿಚಯಿಸುವ ನವೀನ ವಿಧಾನ.
- ಸಮಗ್ರ ಕೃಷಿ ಪದ್ಧತಿ ಪ್ರಾತ್ಯಕ್ಷಿಕೆಯನ್ನು ತಾಲ್ಲೂಕು ಮಟ್ಟದಲ್ಲಿ ರೈತರ ಹೊಲಗಳಲ್ಲಿ ಕೈಗೊಳ್ಳುವುದು

* * * * *

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಕಾ.ಸೂ. 117 – 600 ಪ್ರತಿಗಳು